ಸಮಕಾಲೀನ ಬದುಕಿನ ಸಂವಾದಕ್ಕೆ

ಶೂದ್ರ

ಮಾಸಿಕ

ಈ ಶತಮಾನದ ಅಪೂರ್ವ ಚಿಂತಕ,
ಲೇಖಕ, ಪತ್ರಕರ್ತ ಲಂಕೇಶ್

ಕೌಂಟ್ ಲಿಯೋ ಟಾಲ್‌ಸ್ಟಾಯ್: ಗಾಂಧೀಜಿ

ಕಪೋಲ ಕಲ್ಪಿತ ಕಲಾಸಾಹಿತ್ಯ: ಒಂದು ಚರ್ಚೆ

ಹೆಚ್. ಎ. ಅನಿಲ್‌ಕುಮಾರ್

ಅವ್ವ - II

ಈ ಅವ್ವನ ಹೂತು ಈಕೆಯ ಮೇಲೆ ಕವನ ಕಟ್ಟಿ
ಇವತ್ತಿಗೆ ಇಪ್ಪತ್ತೈದು ವರ್ಷವಾಯಿತು.
ಕವನಕ್ಕೆ ಪಡೆದ ಸಂಭಾವನೆ ಕೂಡ ಖರ್ಚಾಗಿದೆ.

ನಭದಲ್ಲಿ ಅಸಂಖ್ಯ ಹಕ್ಕಿಗಳು ಹಾರಿವೆ.
ಕನಿಷ್ಟ ನಾಲ್ಕು ಕ್ಷಾಮಗಳು ಬಂದು ಹೋಗಿವೆ.
ಊರು ಅರಣ್ಯ ಕಳೆದುಕೊಂಡು ಬೆತ್ತಲೆ ನಿಂತಿದೆ.

ಈ ಅವ್ವ ನನ್ನಲ್ಲಿ ಎಷ್ಟು ಉಳಿದಿದ್ದಾಳೆ
ಎಂದು ನೋಡಿಕೊಳ್ಳುತ್ತೇನೆ.

ದೂರದ ಜಿಲ್ಲೆಯ ಹಸಿದ ಜೀವಕ್ಕೆ ನಾನು
ತುತ್ತು ನೀಡಿದ್ದು ಅವ್ವನಂತಲ್ಲ; ನನ್ನ ಅಪ್ಪನಂತೆ,
ಆತ ಕೊಡುವುದರಲ್ಲಿ ಸುಖ ಕಾಣುತ್ತಿದ್ದ ಮನುಷ್ಯ
ಪೂರ್ತಿಕೊಟ್ಟುಬಿಡುವ ಮುನ್ನ ಮುಂದಿನ ಚಳಿಗಾಲಕ್ಕೆ
ಕಂಬಳಿಗೆಂದು ಕಾಸು ಇಟ್ಟುಕೊಂಡೆ; ಅದು ಅವ್ವನಂತೆ.

(ಈ ಕವನ 'ಅವ್ವ I' ಕವನದಷ್ಟೇ ಮಹತ್ವಪೂರ್ಣವಾದದ್ದು, ಲಂಕೇಶ್‌ರವರು 'ಅವ್ವ 2' ಬರೆದು ಓದಿದ್ದು ಶೂದ್ರದ 15ನೆಯ ವರ್ಷದ ಕಾರ್ಯಕ್ರಮದಲ್ಲಿ, ಕೆ.ಎಸ್.ನ. ಅವರ ಅಧ್ಯಕ್ಷತೆಯಲ್ಲಿ, ಅಂದು ಟಿ. ಎನ್. ಸೀತಾರಾಂ ಕಾರ್ಯಕ್ರಮ ನಿರೂಪಿಸುತ್ತಿದ್ದರು. ಸೀತಾರಾಂಗೆ ಚೀಟಿ ಕಳಿಸಿ ಒಪ್ಪಿಗೆ ಪಡೆದು ಓದಿದರು. ಕ್ಷಮಿಸಿ, ಈ ಕವನದ ಅರ್ಧಭಾಗವನ್ನು ಮಾತ್ರ ಪ್ರಕಟಿಸುತ್ತಿದ್ದೇವೆ. ಸಂ:)

ಸಂಪಾದಕ: ಶೂದ್ರ ಶ್ರೀನಿವಾಸ್

ಶೂದ್ರದೊಂದಿಗೆ:
ಸಿ. ಎಸ್. ಸರ್ವಮಂಗಳ - ಕೆ. ಎನ್. ಅರುಣ್ - ಪ್ರೀತಿ ಮತ್ತು ರಾಹುಲ್
ಹುಳಿಮಾವು ಲೋಕೇಶ್ - ಕೋಲಾರ ನಾರಾಯಣಸ್ವಾಮಿ
ಉತ್ತನೂರು ರಾಜಮ್ಮ ವಿ. ಶೆಟ್ಟಿ - ಹೆಚ್. ಪ್ರೇಮಲೀಲಾ
ಪ್ರಭಾಕರರೆಡ್ಡಿ - ಎಸ್. ಮಾಲತಿ ಸಾಗರ - ಕ್ರಿಯಾ ಮತ್ತು ಸ್ನೇಹ

ಅಕ್ಷರ ಜೋಡಣೆ: ಶ್ರೀಧರ್

ಮುಖಪುಟದ ಕಲಾವಿದರು: ಶಂಕರ ಪಾಟೀಲ್

ಒಳಗಿನ ರೇಖಾಚಿತ್ರಗಳು: ಕೃಷ್ಣರಾಯಚೂರು

ಮುದ್ರಣ: ವಿನಾಯಕ ಆಫ್‌ಸೆಟ್, ಎನ್.ಎಸ್.ಪಾಳ್ಯ, ಬನ್ನೇರುಘಟ್ಟರಸ್ತೆ, ಬೆಂಗಳೂರು - 76

ಸಮಕಾಲೀನ ಬದುಕಿನ ಸಂವಾದಕ್ಕೆ 'ಶೂದ್ರ'
ಸೆಪ್ಟೆಂಬರ್ - ಡಿಸೆಂಬರ್ 1999 ಸಂಪುಟ 27

ನಿಮ್ಮೊಂದಿಗೆ

ಸಂಚಿಕೆಗೆ ಒಳಮಾತನ್ನು ಬರೆದು ಕಂಪೋಸ್‌ಗೆ ಕೊಡುವ ಸಮಯಕ್ಕೆ ಲಂಕೇಶ್‌ರವರು ನಿಧನರಾಗಿದ್ದಾರೆ. ಈ ಶತಮಾನದ ವೈವಿಧ್ಯಮಯತೆಯನ್ನು ಮೈಗೂಡಿಸಿಕೊಂಡ ಅಪರೂಪದ ಲೇಖಕರಾಗಿದ್ದರು. ಕಳೆದ ಮುವತ್ತು ವರ್ಷಗಳಿಂದ ನನ್ನ ಬದುಕಿನ ನಾನಾ ಘಟ್ಟಗಳಲ್ಲಿ ತುಂಬಿಕೊಂಡವರು. ಈ ದೀರ್ಘಾವಧಿಯಲ್ಲಿ ಏನೇನೋ ಒಳನೋಟಗಳಿಗೆ ಪಕ್ಕಾಗಿಸಿದವರು. ತುಂಬ ಸಂತೋಷವನ್ನು ಹಂಚುತ್ತಲೇ ಆಗಾಗ ನನ್ನ ಮೈಮನಸುಗಳನ್ನು ಪರಚುತ್ತ ಘಾಸಿಗೊಳಿಸಿದವರು. ಇದರ ಮಧ್ಯೆ ಮೂರು ನಾಲ್ಕು ವರ್ಷ ಪ್ರತಿತಿಂಗಳು ಶೂದ್ರಕ್ಕೆ ಬರೆದು ಜೀವಕೊಟ್ಟವರು. ಒಂದು ದಿನ ಅವರನ್ನು ನೋಡದಿದ್ದರೆ ಏನನ್ನೋ ಅಮೂಲ್ಯವಾದದ್ದನ್ನು ಕಳೆದುಕೊಂಡವನಂತೆ ಒದ್ದಾಡಿದ್ದೇನೆ. ಆದರೆ ಕೆಲವು ಕಾರಣಗಳಿಂದ ಕಳೆದ ನಾಲ್ಕು ವರ್ಷಗಳಿಂದ ನೋಡಲಾಗಲಿಲ್ಲ. ಈ ಮಧ್ಯೆ ಅವರ ಒತ್ತಾಯಕ್ಕೆ ಐದಾರು ಬಾರಿ ಹೋಗಿ ಒಂದಷ್ಟು ಕಾಲವನ್ನು ಕಳೆದು ಬಂದಿದ್ದೇನೆ.

ಕಳೆದ ಡಿಸೆಂಬರ್ 31ರಂದು ಬರಲು ಒತ್ತಾಯ ಮಾಡಿದರು. ಅವರ ದೂರವಾಣಿ ಕರೆ ಬರುವ ಮುನ್ನ ನಮ್ಮ ಮನೆಯಲ್ಲಿ ಚುಟಕಗಳ ಮೂಲಕ ಆ ಪ್ರಕಾರಕ್ಕೆ ಕಾವ್ಯಮಯ ಜೀವಕೊಡುತ್ತಿರುವ ಜರಗನಹಳ್ಳಿ ಶಿವಶಂಕರ್‌ರವರ ಜೊತೆ ಲಂಕೇಶ್‌ರವರನ್ನು ಸಾಕಷ್ಟು ಚರ್ಚಿಸಿದ್ದೆವು. ಸಾಯಂಕಾಲ ಹೋದಾಗ ಕಾರ್ಡ್ಸ್ ಆಡುವುದನ್ನು ಬಿಟ್ಟು ಕೆಳಗೆ ಬಂದರು. ಸುಮಾರು ಎರಡು ಮೂರು ಗಂಟೆ ಗೆಳೆಯ ಪ್ರಭಾಕರರೆಡ್ಡಿಯವರ ಜೊತೆ ಅರ್ಥಪೂರ್ಣವಾದ ಕಾಲವನ್ನು ಕಳೆದೆ. ಅವರ ಹತ್ತಿರ ಮಾತಾಡುವಾಗಲೆಲ್ಲ ಇತ್ತೀಚೆಗೆ ಯಾವುದೋ ಒಂದು ಕಾಲೇಜಿನಲ್ಲಿ ಲಂಕೇಶ್‌ರವರು ಬೋದಿಲೇರ್ ಕವಿಯನ್ನು ಕುರಿತಂತೆ ಮತ್ತು ಬಸವಣ್ಣ ಹಾಗೂ ಬುದ್ಧನನ್ನು ಕುರಿತು ಬರೆದ ಮಾತುಗಳನ್ನು ಸಮೀಕರಿಸಿ ಮಾತಾಡಿದ್ದೆ.

ಮಾತಿನ ಮಧ್ಯೆ "ಪ್ರತಿವಾರ ಬಂದುಹೋಗು" ಎಂದರು. ನಾನು "ಬರುವುದಿಲ್ಲ" ಎಂದೆ. ಅವರು ವಿಷಾದದಿಂದ "ನನ್ನ ದೇಹ ಒಡಕು ಮಡಕೆಯಾಗಿದೆ. ಯಾವಾಗ ಬೇಕಾದರೂ ಚೂರು ಚೂರು ಆಗಬಹುದು. ಈ ಮಧ್ಯೆ ಏನೇನೋ ಬರೆಯಬೇಕೆನ್ನುತ್ತಿದೆ. ಆದರೆ ದೇಹದಲ್ಲಿ ಚೈತನ್ಯವಿಲ್ಲ" ಎಂದರು. ನಾನು ವ್ಯಥೆಯಿಂದ ಹೋಗಲು ಎದ್ದು ನಿಂತೆ. ಅವರು ಎದ್ದು ನನ್ನ ಕೈಹಿಡಿದು ಕುಲುಕಿದರು. ಈ ರೀತಿ ಅವರು ಮೊದಲನೆಯ ಬಾರಿಗೆ ಮಾಡಿದ್ದರು. ಹೊರಗೆ ಬಂದು ಗಾಡಿ ಹತ್ತುವ ಮುನ್ನ ದುಃಖ ತಡೆಯಲಾಗಲಿಲ್ಲ. ಗೆಳೆಯ ಪ್ರಭಾಕರರೆಡ್ಡಿ ಮೂಕನಾಗಿ ನೋಡುತ್ತಿದ್ದ.

ಈಗ ನಮ್ಮ ಪಾಲಿಗೆ ಉಳಿದಿರುವುದು ನೆನಪು ಮಾತ್ರ. ಮುಂದಿನ ಶೂದ್ರ ವಿಶೇಷಾಂಕದಲ್ಲಿ "ಲಂಕೇಶ್: ಈ ಕಾಲು ಶತಮಾನದ ಸಾಂಸ್ಕೃತಿಕ ನೆನಪಾಗಿ" ಲೇಖನ ಸಿದ್ಧಪಡಿಸಲು ಪ್ರಯತ್ನಿಸುವೆ.

ಈ ಸಂಚಿಕೆಯಲ್ಲಿ ಗಾಂಧೀಜಿಯವರು ತಮ್ಮ ಸಮಕಾಲೀನರನ್ನು ಕುರಿತು ಬರೆದ ಲೇಖನಗಳನ್ನು ಪ್ರಕಟಿಸುತ್ತಿರುವೆ. ಮೊದಲನೆಯದಾಗಿ ನನಗೆ ಪ್ರಿಯವಾದ ಟಾಲ್‌ಸ್ಟಾಯ್ ಕುರಿತ ಲೇಖನ ಪ್ರಕಟಿಸಿರುವೆ.

ಸಂ.

ಬೆಲೆ ರೂ. 20

ಈ ಸಂಚಿಕೆಯಲ್ಲಿ

ಕೌಂಟ್‌ಲಿಯೋ ಟಾಲ್‌ಸ್ಟಾಯ್	➺ ಗಾಂಧೀಜಿ	3
ಜೆ. ಪಿ. ನೆನಪು	➺ ಬಿದರಹಳ್ಳಿ ನರಸಿಂಹಮೂರ್ತಿ	13
ನಾ ಕಂಡ 'ಬನ್ನಂಜೆ'	➺ ಚಂದ್ರಿಕ	15
ಅನುಭಾವಿಗಳು ಕಂಡ ಯಂತ್ರಜಗತ್ತು	➺ ಡಾ॥ ಟಿ. ಗೋವಿಂದರಾಜು	21
ಹೊಸ ಸಮಾಜವಾದದ ಇಣುಕು ನೋಟಗಳು	➺ ಎಲ್. ಎನ್. ಗೋಪಾಲಕೃಷ್ಣ	30
ಟೆಡ್ ಹ್ಯೂಸ್	➺ ಕೆ. ಎನ್. ವಿಜಯಲಕ್ಷ್ಮಿ	37
ಕಪೋಲ ಕಲ್ಪಿತ ಕಲಾಇತಿಹಾಸ: ಪ್ರತಿಕ್ರಿಯೆ	➺ ಎಚ್. ಎ. ಅನಿಲ್‌ಕುಮಾರ್	48
ಕನಸಿಗೊಂದು ಕಣ್ಣು	➺ ಶೂದ್ರಶ್ರೀನಿವಾಸ್	70
ಈಗ ಕಂಡ ಪುಸ್ತಕಗಳು	➺ ಸಿದ್ದಾರ್ಥ	75

ಕಾವ್ಯ ವಿಭಾಗ

ಮಗುವೊಂದು ಗುರುವಾಗಿ	➺ ಮಾಲತಿ ಸಾಗರ	12
ಸುದ್ದಿಯ ಸುತ್ತ	➺ ಎಂ. ಮಹಮದ್ ಭಾಷಗೂಳ್ಯಂ	19
ಮರು ಜೀವಣಿ	➺ ಎಸ್. ಜಿ. ಸಿದ್ಧರಾಮಯ್ಯ	27
ನನ್ನೊಳಗೆ ನಾನು	➺ ಲಕ್ಷ್ಮಿ	37
ಆಕಾತಾರೊ ತಥಾಗತಃ	➺ ಮೊಳಕಾಲ್ಮೂರು ಶ್ರೀನಿವಾಸಮೂರ್ತಿ	47
ಹಣತೆ	➺ ಎ. ರಘುರಾಂ	79

ಪ್ರಸಿದ್ಧ ಸಮಾಜಶಾಸ್ತ್ರಜ್ಞ ಡಾ॥ ಎಂ. ಎನ್. ಶ್ರೀನಿವಾಸ್ ಅವರ ನಿಧನಕ್ಕೆ 'ಶೂದ್ರ' ಸಂತಾಪ ವ್ಯಕ್ತಪಡಿಸುತ್ತದೆ.

-ಸಂ

ಕೌಂಟ್ ಲಿಯೋ ಟಾಲ್‌ಸ್ಟಾಯ್

ಗಾಂಧೀಜಿಯವರ ಟಾಲ್‌ಸ್ಟಾಯ್‌ರವರನ್ನು ಕುರಿತ ಈ ಲೇಖನ
ನನಗೆ ಎಷ್ಟೋ ವರ್ಷಗಳಿಂದ ಪ್ರಿಯವಾದದ್ದು. ಇತ್ತೀಚೆಗೆ
ಮತ್ತೊಮ್ಮೆ ಓದಿದಾಗ ಒಂದು ರೀತಿಯ ಖುಷಿ ಅನ್ನಿಸಿತು.
ಈ ಕಾರಣಕ್ಕಾಗಿ ಶೂದ್ರದ ಓದುಗರಿಗಾಗಿ ಪ್ರಕಟಿಸುತ್ತಿವೆ.
ಸಾಧ್ಯವಾದರೆ ಗಾಂಧೀಜಿಯವರು ತಮ್ಮ ಸಮಕಾಲೀನರನ್ನು ಕುರಿತು
ಪ್ರತಿಕ್ರಿಯಿಸಿದ ಒಂದಷ್ಟು ಲೇಖನಗಳನ್ನು
'ಶೂದ್ರ'ದಲ್ಲಿ ಪ್ರಕಟಿಸುವ ಮನಸ್ಸಿದೆ.

ಸಂ.



ಟಾಲ್‌ಸ್ಟಾಯ್ ಅವರ ಲೇಖನಗಳು ಬಹಳ ಸರಸವಾಗಿ, ಸರಳವಾಗಿ ಇರುತ್ತವೆ. ಅದನ್ನು ಯಾವ ಧರ್ಮಪ್ರೇಮಿಗಳಾದರೂ ಓದಿ, ಲಾಭ ಹೊಂದಬಹುದು. ಅವರ ಪುಸ್ತಕಗಳನ್ನು ಓದಿದರೆ, ಸಾಧಾರಣವಾಗಿ ನುಡಿದಂತೆಯೇ ನಡೆಯುತ್ತಿದ್ದಿರಬಹುದು-ಎಂಬ ವಿಶ್ವಾಸ ಮೂಡುತ್ತದೆ.

ಪ್ರಶ್ನೆ : ಕೌಂಟ್ ಟಾಲ್‌ಸ್ಟಾಯ್ ಅವರನ್ನು ನೀವು ಯಾವ ದೃಷ್ಟಿಯಿಂದ ನೋಡುತ್ತೀರಿ?

ಉತ್ತರ : ನಾನು ಅವರನ್ನು ಅತ್ಯಂತ ಗೌರವದ ದೃಷ್ಟಿಯಿಂದ ನೋಡುತ್ತೇನೆ. ನನ್ನ ಜೀವನದ ಎಷ್ಟೋ ವಿಷಯಗಳ ಬಗೆಗೆ ನಾನು ಅವರಿಗೆ ಋಣಿ.

ನನ್ನ ಇಂದಿನ ಮಾನಸಿಕ ಸ್ಥಿತಿಯಲ್ಲಿ ನಾನು ಯಾವುದೇ ಪರ್ವ, ಪುಣ್ಯತಿಥಿ, ಅಥವಾ ಉತ್ಸವವನ್ನು ಆಚರಿಸಲು ಯೋಗ್ಯನಾಗಿಲ್ಲ. ಕೆಲವು ದಿನಗಳ ಹಿಂದೆ 'ನವಜೀವನ' ಅಥವಾ 'ಯಂಗ್ ಇಂಡಿಯಾ' ದಿ ಓದುಗರೊಬ್ಬರು ಹೀಗೊಂದು ಪ್ರಶ್ನೆ ಕೇಳಿದ್ದರು-"ನೀವು ಶ್ರಾದ್ಧದ ವಿಷಯದಲ್ಲಿ ಬರೆಯುತ್ತ, ಪೂರ್ವಿಕರ ಪುಣ್ಯತಿಥಿಯ ದಿನ ಅವರ ಗುಣ-ಸ್ಮರಣೆಮಾಡಿ, ಅವರನ್ನು ನಮ್ಮ ಜೀವನದಲ್ಲಿ ಹಾಸು-ಹೊಕ್ಕಾಗಿಸಿಕೊಳ್ಳುವುದೇ ನಿಜವಾದ ಶ್ರಾದ್ಧ" ಎಂಬುದಾಗಿ ಹೇಳಿದ್ದಿರಿ. ಅಂತಲೆ, ನಿಮ್ಮ ಹಿರಿಯರ ಶ್ರಾದ್ಧವನ್ನು ನೀವು ಯಾವ ರೀತಿಯಲ್ಲಿ ಮಾಡುವಿರಿ ಎಂಬುದಾಗಿ ಕೇಳುವೆನು". ಹಿರಿಯರ ಪುಣ್ಯ ತಿಥಿಯನ್ನು ನಾನು ತರುಣನಾಗಿದ್ದಾಗ ಆಚರಿಸುತ್ತಿದ್ದೆ. ಆದರೆ, ಈಗ ನನಗೆ ನನ್ನ ಪೂಜ್ಯ ತಂದೆಯವರ ಶ್ರಾದ್ಧ ತಿಥಿಯ ನೆನಪೂ ಸಹ ಉಳಿದಿಲ್ಲವೆಂದು ಹೇಳಲು ನನಗೇನೂ ಸಂಕೋಚವಿಲ್ಲ. ಅನೇಕ ವರುಷಗಳು ಉರುಳಿದವು. ಒಂದೇ ಒಂದು ಶ್ರಾದ್ಧ ತಿಥಿಯನ್ನು ಆಚರಿಸಿದ ನೆನಪು ನನಗಿಲ್ಲ. ಕಡೆಗೆ ನನ್ನ ಕಠಿಣ ಸ್ಥಿತಿ ಅಥವಾ ಚೆಂದವಾದ ಸ್ಥಿತಿ ಎನ್ನಿ-ಅಥವಾ ಮಿತ್ರರೊಬ್ಬರು ಹೇಳಿದಂತೆ ಮೋಹದ ಸ್ಥಿತಿ ಎಂದಾದರೂ ಹೇಳಿ-ಯಾವ ಕೆಲಸವನ್ನು ತಲೆಗೆ ಹಚ್ಚಿಕೊಳ್ಳುವೆನೋ ಅದರಲ್ಲಿಯೇ ತೊಡಗಿ, ಅದರ ಚಿಂತನವನ್ನೇ ಮಾಡುತ್ತ, ಅದನ್ನು ಸಾಧ್ಯವಾದಷ್ಟು ಸುವ್ಯವಸ್ಥಿತ ರೀತಿಯಲ್ಲಿ ಮಾಡುವುದರಲ್ಲೇ ಎಲ್ಲವೂ ಸೇರಿಹೋಗುತ್ತದೆ ಎಂಬ ಅಭಿಪ್ರಾಯ ನನ್ನಲ್ಲಿ ಮೂಡಿದೆ. ಹಿರಿಯರ ಶ್ರಾದ್ಧ ತಿಥಿಯ ಆಚರಣೆಯೂ ಅದರಲ್ಲಿಯೇ ಬಂದುಬಿಡುತ್ತದೆ. ಟಾಲ್‌ಸ್ಟಾಯ್ ಅಂಥವರ ಉತ್ಸವವೂ ಬಂದು ಬಿಡುತ್ತದೆ.... ಮೂರು ತಿಂಗಳ ಕೆಳಗೆ ಟಾಲ್‌ಸ್ಟಾಯ್ ಅವರ ಸಾಹಿತ್ಯವನ್ನು ಸಂಗ್ರಹಿಸುತ್ತಿರುವ ಐಲ್ಮರ್‌ಮಾಡ್ ಹಾಗೂ ಇತರ ಸ್ನೇಹಿತರ ಪತ್ರಗಳು ಬಂದಿದ್ದವು : ಟಾಲ್‌ಸ್ಟಾಯ್ ಅವರ ಶತಾಬ್ದಿಯ ಸಂದರ್ಭಕ್ಕೆ ನಾನು ಏನಾದರೂ ಬರೆದು ಕಳುಹಿಸಬೇಕೆಂದೂ, ಭಾರತಕ್ಕೆ ಆ ದಿನದ ನೆನಪು ಮಾಡಿಕೊಡಬೇಕೆಂದೂ ಅವರು ಕೇಳಿದ್ದರು. ಐಲ್ಮರ್‌ಮಾಡ್‌ರ ಇಡೀ ಪತ್ರ ಅಥವಾ ಅದರ ಸಾರಾಂಶವನ್ನು ನೀವು ನನ್ನ ಪತ್ರಿಕೆಗಳಲ್ಲಿ ನೋಡಿರಬೇಕು. ಅನಂತರ ಈ ವಿಷಯವನ್ನು ಮರೆತೇ ಬಿಟ್ಟಿದ್ದೆ. ಈ ಪ್ರಸಂಗ ನನ್ನ ಪಾಲಿಗೆ ಒಂದು ಶುಭ ಸಂದರ್ಭ.

ನನ್ನ ಜೀವನದಲ್ಲಿ ವಿಶೇಷ ಪ್ರಭಾವ ಬೀರಿರುವವರು ಮೂರು ಮಂದಿ-ಮೊದಲನೆಯವರು ರಾಜಚಂದ್ರಕವಿ, ಎರಡನೆಯವರು ಟಾಲ್‌ಸ್ಟಾಯ್, ಮೂರನೆಯವರು ರಸ್ಕಿನ್. ಟಾಲ್‌ಸ್ಟಾಯ್ ಹಾಗೂ ರಸ್ಕಿನ್ನರ ನಡುವೆ ಸ್ಪರ್ಧೆ ಉಂಟಾದರೆ, ಇಬ್ಬರ ಜೀವನದ ಬಗೆಗೂ ನನಗೆ ಹೆಚ್ಚು ವಿಷಯ ತಿಳಿದು ಬಂದರೆ, ಮೊದಲ ಸ್ಥಾನವನ್ನು ಯಾರಿಗೆ ಕೊಡುವೆನೋ ತಿಳಿಯದು. ಈಗಂತೂ ಟಾಲ್‌ಸ್ಟಾಯ್ ಅವರಿಗೇ ಎರಡನೆಯ ಸ್ಥಾನ. ಟಾಲ್‌ಸ್ಟಾಯ್ ಅವರ ಜೀವನದ ವಿಷಯದಲ್ಲಿ ಅನೇಕರು ಓದಿರುವಷ್ಟು ಕಡಿಮೆಯೇ ಎಂದು ಹೇಳಬಹುದು. ಅವರ ಪುಸ್ತಕಗಳಲ್ಲಿ ನನ್ನ ಮೇಲೆ ಹೆಚ್ಚಿನ ಪ್ರಭಾವ ಬೀರಿದ ಪುಸ್ತಕವೆಂದರೆ, ``Kingdom of Heaven is within you'' ಎಂಬುದು. ಭಗವಂತನ ರಾಜ್ಯ ನಿಮ್ಮ ಹೃದಯದಲ್ಲಿಯೇ ಇದೆ ಎಂಬುದು ಅದರ ಅರ್ಥ. ಅದನ್ನು ಹೊರಗಡೆ ಹುಡುಕಲು ಹೊರಟರೆ, ಎಂದಿಗೂ ಸಿಕ್ಕುವುದಿಲ್ಲ. ಆ ಪುಸ್ತಕವನ್ನು ನಾಲ್ವತ್ತು ವರುಷಗಳ ಹಿಂದೆ ಓದಿದ್ದೆ.

ಆ ಕಾಲಕ್ಕೆ ಅನೇಕ ವಿಷಯಗಳಲ್ಲಿ ನನ್ನ ಅಭಿಪ್ರಾಯಗಳು ಇತ್ತು. ಸಂಶಯಾತ್ಮಕವಾಗಿಯೇ ಇದ್ದವು. ಹಲವು ಬಾರಿ ನಾಸ್ತಿಕತೆಯ ವಿಷಯವೂ ಮನಸ್ಸಿಗೆ ಬರುತ್ತಿತ್ತು. ವಿಲಾಯತಿಗೆ ಹೋದ ಸಮಯದಲ್ಲಿಯಂತೂ ನಾನು ಹಿಂಸಕನಾಗಿದ್ದೆ; ಹಿಂಸೆಯಲ್ಲಿ ನನಗೆ ವಿಶ್ವಾಸವಿತ್ತು; ಅಹಿಂಸೆಯಲ್ಲಿ ಅವಿಶ್ವಾಸವಿತ್ತು. ಈ ಪುಸ್ತಕವನ್ನು ಓದಿದ ಮೇಲೆ ನನ್ನ ಆ ಅಶ್ರದ್ಧೆ ತೊಲಗಿತು. ಆಮೇಲೆ, ಅವರ ಇನ್ನೂ ಹಲವು ಗ್ರಂಥಗಳನ್ನು ಓದಿದೆ. ಆ ಪುಸ್ತಕಗಳಲ್ಲಿ ಒಂದೊಂದೂ ಏನು ಪ್ರಭಾವ ಬೀರಿತೆಂಬುದನ್ನು ಹೇಳಲಾರೆ; ಆದರೆ ಅವುಗಳಿಂದ ಜೀವನದ ಮೇಲೆ ಸಮಗ್ರ ಪ್ರಭಾವ ಏನಾಯಿತೆಂಬುದನ್ನು ಹೇಳಬಲ್ಲೆ.

ಅವರ ಜೀವನದಲ್ಲಿ ನನಗೆ ಕಂಡುಬಂದ ಮುಖ್ಯವಾದ ಮಾತುಗಳು ಎರಡು-ಅವರು ನುಡಿದಂತೆ ನಡೆಯುವ ವ್ಯಕ್ತಿ ಆಗಿದ್ದರು. ಅವರ ಸರಳ ಜೀವನ ಅದ್ಭುತವಾದುದು,; ಬಾಹ್ಯ ಸರಳತೆಯಂತೂ ಇದ್ದೇ ಇತ್ತು. ಅವರು ಶ್ರೀಮಂತ ವರ್ಗಕ್ಕೆ ಸೇರಿದವರು. ಈ ಪ್ರಪಂಚದ ಅಷ್ಟ ಭೋಗಗಳನ್ನೂ ಅನುಭವಿಸಿದವರು. ಧನ-ಸಂಪತ್ತಿನ ವಿಷಯದಲ್ಲಿ ಮನುಷ್ಯ ಎಷ್ಟು ಅಪೇಕ್ಷಿಸಬಹುದೋ, ಅಷ್ಟೂ ಅವರಿಗೆ ದೊರೆತಿತ್ತು. ಆದರೂ, ತುಂಬು ತಾರುಣ್ಯದಲ್ಲೇ ಅವರು ತಮ್ಮ ಧ್ಯೇಯವನ್ನು ಬದಲಿಸಿಕೊಂಡರು. ಪ್ರಪಂಚದ ಎಲ್ಲ ಭೋಗವನ್ನು ಭೋಗಿಸಿದಮೇಲೂ, ಎಲ್ಲ ಸ್ವಾದವನ್ನು ಆಸ್ವಾದಿಸಿದಮೇಲೂ ಅವುಗಳಲ್ಲಿ ಏನೂ ಸಾರವಿಲ್ಲವೆಂಬ ಅರಿವಾದಾಗ ಅವುಗಳಿಂದ ವಿಮುಖರಾದರು; ಹಾಗೂ ಕೊನೆಯವರೆಗೆ ತಮ್ಮ ಅಭಿಪ್ರಾಯಗಳಿಂದ ವಿಚಲಿತರಾಗಲಿಲ್ಲ. ಅಂತಲೆ, ಟಾಲ್‌ಸ್ಟಾಯ್ ಈ ಯುಗದ ಸತ್ಯದ ಮೂರ್ತಿ ಎಂಬುದಾಗಿ ಒಂದೆಡೆಯಲ್ಲಿ ಬರೆದಿದ್ದೇನೆ, ಸತ್ಯವನ್ನು ಹೇಗೆ ತಂದುಕೊಂಡರೋ ಅದನ್ನು ಹಾಗೆಯೇ ಪಾಲಿಸಲು ಅವರು ಉಗ್ರಪ್ರಯತ್ನ ಮಾಡಿದರು. ಸತ್ಯವನ್ನು ಮುಚ್ಚಿಡುವ ಅಥವಾ ನಿರ್ಬಲಗೊಳಿಸುವ ಪ್ರಯತ್ನವನ್ನು ಮಾಡಲಿಲ್ಲ. ಜನಕ್ಕೆ ಅದು ಕೆಟ್ಟುದೆನಿಸೀತೆ ಅಥವಾ ಒಳಿತೆನಿಸೀತೆ ಎಂಬ ವಿಚಾರ ಮಾಡದೆ, ತಥ್ಯ ತಮಗೆ ಹೇಗೆ ಕಂಡಿತೋ ಹಾಗೆಯೇ ಜನರ ಮುಂದಿಟ್ಟರು. ಟಾಲ್‌ಸ್ಟಾಯ್ ತಮ್ಮ ಯುಗದ ಬಹಳ ದೊಡ್ಡ ಅಹಿಂಸಾ-ಪ್ರವರ್ತಕರಾಗಿದ್ದರು. ಅಹಿಂಸೆಯ ಬಗೆಗೆ ಅಭ್ಯಾಸ-ಅನುಷ್ಠಾನದ ಸಲುವಾಗಿ ಟಾಲ್‌ಸ್ಟಾಯ್ ಅವರು ಬರೆದಷ್ಟು ಹೃದಯ ಸ್ಪರ್ಶಿಯಾದ ಸಾಹಿತ್ಯವನ್ನು ನನಗೆ ತಿಳಿದ ಮಟ್ಟಿಗೆ ಬೇರೆ ಯಾರೂ ಬರೆದಿಲ್ಲ. ಇನ್ನೂ ಮುಂದೆ ಹೋಗಿ ಹೀಗೆ ಹೇಳಬಲ್ಲೆ-ಟಾಲ್ ಸ್ಟಾಯ್ ಅವರಷ್ಟು ಅಹಿಂಸೆಯ ಸೂಕ್ಷ್ಮದರ್ಶನ ಮಾಡಿದವರು, ಅದನ್ನು ಅನುಸರಿಸಲು ಅವರಷ್ಟು ಪ್ರಯತ್ನ ಮಾಡಿದವರು ಇಂದು ಭಾರತದಲ್ಲಿ ಯಾರೂ ಇಲ್ಲ. ಅಂಥ ಯಾವ ವ್ಯಕ್ತಿಯೂ ನನಗೆ ಕಂಡುಬಂದಿಲ್ಲ.

ಈ ಸ್ಥಿತಿ ನನ್ನ ಪಾಲಿಗೆ ಬಹಳ ದುಃಖದಾಯಕ. ಇದು ನನಗೆ ಒಪ್ಪುವುದಿಲ್ಲ. ಹಿಂದೂಸ್ಥಾನ ಕರ್ಮಭೂಮಿ, ಹಿಂದೂಸ್ತಾನದ ಋಷಿ-ಮುನಿಗಳು ಅಹಿಂಸೆಯ ಕ್ಷೇತ್ರದಲ್ಲಿ ದೊಡ್ಡ ದೊಡ್ಡ ಶೋಧನೆ ನಡೆಸಿದಾರೆ. ಆದರೆ, ನಾವು ಕೇವಲ ನಮ್ಮ ಹಿರಿಯರು ಗಳಿಸಿದ ಬಂಡವಾಳದ ಮೇಲೆಯೇ ಪಥ ಸಾಗಿಸಲು ಬರುವುದಿಲ್ಲ. ಅದನ್ನು ಬೆಳೆಸದಿದ್ದರೆನಮಗೆ ಹಾನಿ ತಪ್ಪಿದ್ದಲ್ಲ. ಈ ವಿಷಯದಲ್ಲಿ ನ್ಯಾಯಮೂರ್ತಿ ರಾನಡೆಯವರು ನಮಗೆ ಎಚ್ಚರಿಕೆ

ಕೊಟ್ಟಿದಾರೆ. ವೇದ ಮೊದಲಾದ ಸಾಹಿತ್ಯದಿಂದ ಅಥವಾ ಜೈನ ಸಾಹಿತ್ಯದಿಂದ ಎಷ್ಟೇ ಮಾತುಗಳನ್ನು ಅಂದು ತೋರಿಸಿದರೂ, ಸಿದ್ಧಾಂತದ ವಿಷಯದಲ್ಲಿ ಎಷ್ಟೇ ಪ್ರಮಾಣಗಳನ್ನು ತೋರಿದರೂ ತಮ್ಮೂಲಕ ಪ್ರಪಂಚವನ್ನು ಅಚ್ಚರಿಗೊಳಿಸಿದರೂ, ಪ್ರಪಂಚ ನಮ್ಮನ್ನು ಪ್ರಾಮಾಣಿಕರೆಂದು ನಂಬುವುದಿಲ್ಲ. ಅಂತಲೆ ರಾನಡೆಯುವರು ನಮ್ಮ ಬಂಡವಾಳವನ್ನು ಬೆಳೆಸಿಕೊಳ್ಳುವುದು ನಮ್ಮ ಧರ್ಮವೆಂದು ತಿಳಿಸಿದರು. ಬೇರೆ ಧರ್ಮ-ವಿಚಾರಶೀಲರು ಬರೆದುದನ್ನು ನಮ್ಮದರೊಡನೆ ತುಲನೆ ಮಾಡಿಕೊಂಡು, ಅದರಲ್ಲಿ ಹೊಸದೇನಾದರೂ ಸಿಕ್ಕಿದರೆ, ಹೊಸ ಬೆಳಕೇನಾದರೂ ಕಂಡರೆ ಅದನ್ನು ಸ್ವೀಕರಿಸಬೇಕು. ಆದರೆ ನಾವು ಹಾಗೆ ಮಾಡಲಿಲ್ಲ. ನಮ್ಮ ಧರ್ಮಾಚಾರ್ಯರು ಒಂದೇ ಪಕ್ಷದ ವಿಚಾರ ಮಾಡುತ್ತ ಬಂದಿದಾರೆ. ಅದರ ಪಠಣ, ಕಥನ ಹಾಗೂ ವರ್ತನೆಯಲ್ಲಿ ಸಾಮ್ಯವಿಲ್ಲ. ಜನಕ್ಕೆ ಒಳಿತೆನಿಸಲಿ, ಅನಿಸದಿರಲಿ-ತಾವು ಯಾವ ಸಮಾಜದಲ್ಲಿ ಕೆಲಸಮಾಡುತ್ತಿರುವರೋ ಆ ಸಮಾಜಕ್ಕೆ ರುಚಿಸಲಿ, ರುಚಿಸದಿರಲಿ ಟಾಲ್‌ಸ್ಟಾಯ್ ಅವರಂತೆ ಚೊಕ್ಕ ಸತ್ಯ ನುಡಿಯುವವರು ನಮ್ಮಲ್ಲಿ ದೊರೆಯುವುದಿಲ್ಲ. ನಮ್ಮ ಅಹಿಂಸಾಪ್ರಧಾನ ದೇಶದ ಕರುಣಾಜನಕ ಸ್ಥಿತಿಯಿದು!

ನಮ್ಮ ಅಹಿಂಸೆ ನಿಂದಾಯೋಗ್ಯವಾದುದೆ. ತಿಗಣೆ, ಸೊಳ್ಳೆ, ಚೇಳು, ಪಕ್ಷಿ ಹಾಗೂ ಪ್ರಾಣಿಗಳನ್ನು ಹೇಗೋ ಹಾಗೆ ನೋಡಿ ಕೊಲ್ಲುವುದರಲ್ಲೇ ನಮ್ಮ ಅಹಿಂಸೆ ಪೂರ್ಣವಾಗುತ್ತದೆ. ಆ ಪ್ರಾಣಿಗಳು ಸಂಕಟದಲ್ಲಿ ಚಡಪಡಿಸುತ್ತಿದ್ದರೂ ನಮಗೆ ಅದರ ಚಿಂತೆ ಇರುವುದಿಲ್ಲ. ಅವನ್ನು ಸಂಕಟಕ್ಕೆ ಗುರಿಪಡಿಸುವುದರಲ್ಲಿ ನಮ್ಮದೇ ಪಾತ್ರವಿದ್ದರೂ ಅದರ ಚಿಂತೆ ನಮಗಿರದು. ಆದರೆ, ಸಂಕಟಕ್ಕೆ ಸಿಲುಕಿರುವ ಪ್ರಾಣಿಯನ್ನು ಯಾರಾದರೂ ಪ್ರಾಣದಿಂದ ವಿಮುಕ್ತಗೊಳಿಸಿದರೆ ಅಥವಾ ನಾವು ಅದರಲ್ಲಿ ಭಾಗಿಗಳಾದರೆ, ಅದನ್ನು ನಾವು ಪಾಪವೆಂದು ಭಾವಿಸುತ್ತೇವೆ. ಇದು ಅಹಿಂಸೆಯಲ್ಲ-ಎಂಬುದಾಗಿ ಬರೆದೇ ಇದ್ದೇನೆ. ಟಾಲ್‌ಸ್ಟಾಯ್ ಸ್ಮರಣೆ ಮಾಡಿಕೊಳ್ಳುತ್ತ ಅಹಿಂಸೆಯ ಅರ್ಥ ಇದಲ್ಲವೆಂದು ಪುನಃ ಹೇಳುತ್ತೇನೆ. ಅಹಿಂಸೆಯೆಂದರೆ, ಪ್ರೇಮದ ಸಮುದ್ರ; ಅಹಿಂಸೆಯೆಂದರೆ ಹಗೆತನದ ಪೂರ್ಣತ್ಯಾಗ, ಅಹಿಂಸೆಯಲ್ಲಿ ದೈನ್ಯತೆಗೆ ಪುಕ್ಕಲುತನಕ್ಕೆ ಸ್ಥಾನವಿಲ್ಲ, ಹೆದರಿ ಓಡುವುದಕ್ಕೂ-ಸ್ಥಾನವಿಲ್ಲ. ಅಹಿಂಸೆಯಲ್ಲಿ ದೃಢತೆ, ವೀರತೆ, ನಿಶ್ಚಲತೆ, ಇರಬೇಕು.

ಈ ಅಹಿಂಸೆ ಹಿಂದೂಸ್ತಾನದ ಕಲಿತ ಮಂದಿಯಲ್ಲಿ ಕಂಡು ಬರುವುದಿಲ್ಲ. ಅವರಿಗೆ ಟಾಲ್‌ಸ್ಟಾಯ್ ಜೀವನ ಪ್ರೇರಕವಾದುದು. ತಾವು ಮಾನ್ಯ ಮಾಡಿದುದನ್ನು ಪಾಲಿಸಲು ಅವರು ಪ್ರಬಲ ಪ್ರಯತ್ನ ಮಾಡಿದರು. ಆ ಬಗ್ಗೆ ಅವರು ಕಿಂಚಿತ್ತಾದರೂ ಅಳುಕಲಿಲ್ಲ. ಅವರಿಗೆ 'ಸಿದ್ಧಿ' ಸಿಕ್ಕಲಿಲ್ಲವೆಂಬುದನ್ನು ನಾ ಒಪ್ಪೆನು. 'ಸಿಕ್ಕಲಿಲ್ಲ' ಎಂಬುದಾಗಿ ಅವರೇನೋ ಹೇಳಿದ್ದಾರೆ. ಹಾಗೇ ಹೇಳುವುದು ಅವರಿಗೆ ಶೋಭಿಸಿತು; ಆದರೆ, ಅವರು ಟೀಕಾಕಾರರು ಬರೆಯುವಂತೆ ಅವರಿಗೆ 'ಸಿದ್ಧಿ' ಸಿಕ್ಕಲಿಲ್ಲವೆಂದು ನಾನು ಒಪ್ಪುವುದಿಲ್ಲ. ತಾವು ಕಂಡುಕೊಂಡಿದ್ದ ಅಹಿಂಸೆಯನ್ನು ಅವರು ಪೂರ್ಣರೂಪೇಣ ಅನುಸರಿಸಲು ಅವರಿಗೆ ಸಾಧ್ಯವಾಗಲಿಲ್ಲವೆಂದು ಯಾರಾದರೂ ಹೇಳಿದರೆ ಅದನ್ನು ನಾನು ಒಪ್ಪಬಲ್ಲೆ. ತನ್ನ ಸಿದ್ಧಾಂತವನ್ನು ಪೂರ್ಣರೀತಿಯಲ್ಲಿ ಅನುಷ್ಠಾನಕ್ಕೆ ತರಲು ಈ ಜಗತ್ತಿನಲ್ಲಿ ಯಾರಿಗೆ ತಾನೆ ಸಾಧ್ಯವಾಗಿದೆ? ದೇಹಧಾರಿಯಾದವನಿಗೆ

ಸಂಪೂರ್ಣ ಅಹಿಂಸೆಯ ಪಾಲನೆ ಮಾಡುವುದು ಶಕ್ಯವಿಲ್ಲ ಎಂಬುದು ನನ್ನ ಅಭಿಪ್ರಾಯ. ಶರೀರ ಇರುವವರೆಗೆ ಕಿಂಚಿತ್ತಾದರೂ ಅಹಂಭಾವ ಇದ್ದೇ ಇರುತ್ತದೆ. ಅಹಂಭಾವ ಇರುವವರೆಗೆ ಶರೀರ ಧಾರಣೆ ಮಾಡಲೇಬೇಕಾಗುತ್ತದೆ. ಆದಕಾರಣ, ಶರೀರದೊಡನೆ ಹಿಂಸೆ ಇದ್ದೇ ಇರುತ್ತದೆ. ತಾನು ತನ್ನ ಆದರ್ಶವನ್ನು ಸಾಧಿಸಿರುವುದಾಗಿ ಭಾವಿಸಿರುವವನನ್ನು ನಷ್ಟಪ್ರಾಯನೆಂದೇ ಭಾವಿಸಬೇಕು-ಎಂಬುದಾಗಿ ಟಾಲ್‌ಸ್ಟಾಯ್ ಅವರೇ ಹೇಳಿದ್ದಾರೆ; ಅಲ್ಲಿಂದಲೇ ಆತನ ಅಧೋಗತಿ ಆರಂಭವಾಗುತ್ತದೆ.

ನಾವು ಆದರ್ಶದತ್ತ ಸಾಗಿದಂತೆಲ್ಲ ಅದು ನಮ್ಮಿಂದ ದೂರದೂರ ಸರಿಯುತ್ತ ಹೋಗುತ್ತದೆ. ಅದರ ಶೋಧನೆಯಲ್ಲಿ ನಾವು ಮುಂಬರಿದಷ್ಟು ಇನ್ನೊಂದೇ ಮೆಟ್ಟಲು ಬಾಕಿ-ಅನಿಸುತ್ತಿರುತ್ತದೆ. ಯಾರೇ ಆಗಲಿ ವೇಗವಾಗಿ ಮೆಟ್ಟಲುಗಳನ್ನು ಕ್ರಮಿಸಲು ಆಗುವುದಿಲ್ಲವೆಂದು ಭಾವಿಸುವುದರಲ್ಲಿ ಹೀನತೆ, ನಿರಾಶೆ ಏನೂ ಇಲ್ಲ; ನಮ್ರತೆ ಅವಶ್ಯವಾಗಿ ಇದೆ. ಅಂತಲೆ ನಮ್ಮ ಋಷಿಗಳು ಮೋಕ್ಷವೆಂದರೆ ಶೂನ್ಯತೆ ಎಂದಿದ್ದಾರೆ. ಮೋಕ್ಷ ಬಯಸುವವರು ಶೂನ್ಯತೆಯನ್ನು ಪಡೆಯಲೇಬೇಕು. ಭಗವಂತನ ಅನುಗ್ರಹವಿಲ್ಲದೆ ಅದು ದೊರೆಯುವುದಿಲ್ಲ. ಶರೀರ ಇರುವವರೆಗೆ ಈ ಶೂನ್ಯತೆ ಆದರ್ಶರೂಪವಾಗಿಯೇ ಇರುತ್ತದೆ. ಈ ಮಾತನ್ನು ಟಾಲ್‌ಸ್ಟಾಯ್ ಅವರು ಸ್ಪಷ್ಟವಾಗಿ ಕಂಡುಕೊಂಡು ಬುದ್ಧಿಯಲ್ಲಿ ಅದನ್ನು ಅಂಕಿತಗೊಳಿಸಿಕೊಂಡು, ಎರಡು ಮೆಟ್ಟಲು ಮುಂಬರಿದರೋ ಇಲ್ಲವೋ ಅವರಿಗೆ 'ಸಿದ್ಧಿ' ದೊರೆಯಿತು. ಆ ಸಿದ್ಧಿಯನ್ನು ಅವರು ವರ್ಣಿಸಲಾರರು. 'ಸಿಕ್ಕಿತು' ಎಂದಷ್ಟೇ ಹೇಳಬಹುದು. ಆದರೂ 'ಸಿಕ್ಕಿತು ಎಂದು ಹೇಳಿಬಿಟ್ಟರೆ, ಅವರ ಜೀವನವೇ ಕೊನೆ ಮುಟ್ಟುತ್ತಿತ್ತು.

ಟಾಲ್‌ಸ್ಟಾಯ್ ಅವರ ಜೀವನದಲ್ಲಿ ಕಂಡುಬರುವ ವಿರೋಧಾಭಾಸ, ಅವರ ದೋಷ ಅಥವಾ ದೌರ್ಬಲ್ಯವಲ್ಲ; ನೋಡುವವರ ತಪ್ಪು. ಎಮರ್ಸನ್ ಹೀಗೆ ಹೇಳಿದ್ದಾನೆ-ಅವಿರೋಧ ಎಂಬುದು ಅಲ್ಪ ಮಾನವನನಪಿಶಾಚಿ. ನಮ್ಮ ಜೀವನದಲ್ಲಿ ಎಂದೂ ವಿರೋಧ ಬರುವುದೇ ಇಲ್ಲವೆಂದು ತೋರಬಯಸುವುದಾದರೆ, ನಾವು ಸತ್ತಂತೆಯೇ ಲೆಕ್ಕ. ಹಾಗೆ ಮಾಡುವುದರಲ್ಲಿ ನಿನ್ನೆಯ ಕೆಲಸದ ನೆನಪು ಮಾಡಿಕೊಂಡು ಇಂದಿನ ಕೆಲಸದೊಡನೆ ಅದನ್ನು ಕೂಡಿಸಲು ಮಾಡುವ ಕೃತ್ರಿಮ ಸಮನ್ವಯದ ಪ್ರಕ್ರಿಯೆಯಲ್ಲಿ ಅತ್ಯಾಚಾರಣೆ ನುಸುಳಿಕೊಂಡು ಬರುವುದು. ಯಾವ ಸಮಯದಲ್ಲಿ ಯಾವ ಸತ್ಯ ಭಾಸವಾಗುವುದೋ ಅದನ್ನು ಅನುಸರಿಸುವುದೇ ನೇರ ಮಾರ್ಗ. ನಮ್ಮದು ಉತ್ತರೋತ್ತರ ಪ್ರಗತಿಯೇ ಆಗಿ, ನಮ್ಮ ಕಾರ್ಯದಲ್ಲಿ ಬೇರೆಯವರಿಗೆ ವಿರೋಧ ಕಂಡು ಬಂದರೆ, ನಮಗೇನಂತೆ? ನಿಜಕ್ಕೂ ಅದು ನಮ್ಮ ವಿರೋಧವಲ್ಲ, ಉನ್ನತಿ. ಹಾಗೆಯೇ ಟಾಲ್‌ಸ್ಟಾಯ್ ಅವರ ಜೀವನದಲ್ಲಿ ಕಂಡು ಬರುವ ವಿರೋಧ ವಿರೋಧವಲ್ಲ; ನಮ್ಮ ಮನಸ್ಸಿನ ವಿರೋಧಾಭಾಸ. ಮನುಷ್ಯನ ಹೃದಯದಲ್ಲಿ ಎಷ್ಟು ಹೊಯ್ದಾಟ ನಡೆಯುವುದೆಂಬುದು, ರಾಮ-ರಾವಣ ಯುದ್ಧದಲ್ಲಿ ಎಷ್ಟು ವಿಜಯ ಪ್ರಾಪ್ತಿಯಾಗುವುದೆಂಬುದು ಅವನಿಗೇ ತಿಳಿಯುವುದಿಲ್ಲ; ನೋಡುವವರಿಗಂತೂ ತಿಳಿಯುವುದೇ ಇಲ್ಲ. ಆತ ಸ್ವಲ್ಪ ಜಾರಿ ಜಗತ್ತಿನ ದೃಷ್ಟಿಯಲ್ಲಿ ಯಃಕಶ್ಚಿತನೆನಿಸಿದರೆ, ಅದು ಒಳ್ಳೆಯದೆ. ಆಗ ಆತ ಜಗತ್ತನ್ನು ನಿಂದಿಸಬಾರದು, ಅಂತಲೆ ಸಂತರು ಇಂತೆಂದಿದ್ದಾರೆ-ಜಗತ್ತು

ನಮ್ಮನ್ನು ನಿಂದಿಸಿದಾಗ ನಾವು ಆನಂದ ಪಡಬೇಕು; ಸ್ತುತಿಸಿದಾಗ ನಡುಗಬೇಕು? ಜಗತ್ತು ಇನ್ನೇನು ಮಾಡೀತು? ಕೊಳೆ ಕಂಡಲ್ಲಿ ನಿಂದಿಸದೆ ಬಿಡದು, ಆದರೆ, ಮಹಾ ಪುರುಷರ ಜೀವನವನ್ನು ಪರೀಕ್ಷಿಸಲು ತೊಡಗುವುದಾದರೆ, ನಾನು ಹೇಳಿದ ಮಾತನ್ನು ನೆನಪಿನಲ್ಲಿಡಬೇಕು. ಅವರು ತಮ್ಮ ಹೃದಯದಲ್ಲಿ ಎಷ್ಟು ಹೋರಾಟ ನಡೆಸಿದಾರೋ, ಎಷ್ಟು ಜಯ ಗಳಿಸಿದಾರೋ ಅದಕ್ಕೆ ಭಗವಂತನೇ ಸಾಕ್ಷಿ. ಇದೇ ನಿಷ್ಫಲತೆ-ಸಫಲತೆಯ ಚಿಹ್ನೆ.

ಹೀಗೆಂದ ಮಾತ್ರಕ್ಕೆ ನೀವು ದೋಷಗಳನ್ನು ಮುಚ್ಚಿಟ್ಟುಕೊಳ್ಳಬೇಕು, ಗುರುತರವಾದ ದೋಷವನ್ನು ತೃಣವೆಂದೆಣಿಸಬೇಕು-ಎಂಬುದು ನನ್ನ ಅಭಿಪ್ರಾಯವೆಂದು ತಿಳಿಯಬಾರದು. ಈ ಮಾತನ್ನು ನಾನು ಬೇರೆಯವರ ವಿಷಯಕ್ಕೆ ಹೇಳಿದ್ದೇನೆ. ಬೇರೆಯವರ ಪರ್ವತ ಸಮಾನವಾದ ದೋಷವನ್ನು ಸಾಸುವೆಯಷ್ಟು ದೋಷವೆಂದು ಭಾವಿಸಬೇಕು; ನಮ್ಮ ಸಾಸುವೆಯಷ್ಟು ದೋಷವನ್ನು ಪರ್ವತದಷ್ಟು ದೋಷವೆಂದು ಭಾವಿಸಬೇಕು. ನಮ್ಮಿಂದ ದೋಷವೇನಾದರೂ ಆದರೆ, ತಿಳಿದೋ ತಿಳಿಯದೆಯೋ ಅಸತ್ಯವೇನಾದರೂ ಕಾಣಿಸಿಕೊಂಡರೆ, ನಾವು ನೀರಿನಲ್ಲಿ ಮುಳುಗಿ ಸತ್ತೆವೆಂದು ತಿಳಿಯಬೇಕು. ಹೃದಯದಲ್ಲಿ ಬೆಂಕಿ ಉರಿಯತೊಡಗಬೇಕು. ಹಾವು ಚೇಳುಗಳ ವಿಷ ಏನೇನೂ ಅಲ್ಲ; ಆ ವಿಷ ತೆಗೆಯುವವರು ಎಷ್ಟೋ ಮಂದಿ ಸಿಕ್ಕುತ್ತಾರೆ. ಆದರೆ ಅಸತ್ಯ ಹಾಗೂ ಹಿಂಸೆಯ ವಿಷದಿಂದ ನಮ್ಮನ್ನು ರಕ್ಷಿಸುವವರು ಯಾರು? ನಮ್ಮಲ್ಲಿ ಪುರುಷಾರ್ಥ ಇದ್ದಲ್ಲಿ ಮಾತ್ರ ನಮ್ಮನ್ನು ಭಗವಂತ ಅದರಿಂದ (ವಿಷ) ರಕ್ಷಿಸುವನು. ಆದಕಾರಣ, ನಮ್ಮ ದೋಷಗಳ ಬಗೆಗೆ ನಾವು ಎಚ್ಚರಿಕೆಯಿಂದಿರಬೇಕು ಅವನ್ನು ಎಷ್ಟು ದೊಡ್ಡವೆಂದು ಕಾಣಲು ಸಾಧ್ಯವೋ ಅಷ್ಟು ದೊಡ್ಡವೆಂದು ಕಾಣೋಣ. ಜಗತ್ತು ನಮ್ಮಲ್ಲಿ ದೋಷವೆನಿಸಿದರೆ, ನಮ್ಮ ಸಣ್ಣ ದೋಷಗಳನ್ನು ದೊಡ್ಡ ದೋಷಗಳಾಗಿ ಕಾಣುವಷ್ಟು ಕಾರ್ಪಣ್ಯವೇಕೆ. ಈ ಜಗತ್ತಿಗೆ ಅನ್ನುವುದು ಬೇಡ. ಟಾಲ್‌ಸ್ಟಾಯ್ ಅವರಿಗೆ ಯಾರಾದರೂ ಅವರ ತಪ್ಪನ್ನು ತೋರಿಸಿಕೊಟ್ಟರೆ, ಅದಕ್ಕೆ ಅವರು ಭಯಂಕರ ರೂಪ ಕೊಡುತ್ತಿದ್ದರು. ಅವರ ದೋಷವನ್ನು ತೋರಿಸಿಕೊಡುವ ಪ್ರಸಂಗ ಬೇರೆಯವರಿಗೆ ಬರುತ್ತಿದ್ದುದೇ ಅಪರೂಪ. ಏಕೆಂದರೆ, ಅವರು ಬಹಳ ಆತ್ಮ-ನಿರೀಕ್ಷಣೆ ಮಾಡಿಕೊಳ್ಳುತ್ತಿದ್ದರು. ಬೇರೆಯವರು ತಿಳಿಸುವ ಮೊದಲೇ, ತಮ್ಮ ದೋಷವನ್ನು ತಾವೇ ಕಂಡುಕೊಂಡು, ಅದಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತಿದ್ದರು. ಇದು ಸಾಧುತನದ ಲಕ್ಷಣ. ಅಂತಲೆ ಅವರಿಗೆ 'ಸಿದ್ಧಿ' ಸಿಕ್ಕಿತ್ತೆಂದು ನಾನು ಹೇಳುವೆ.

ಟಾಲ್‌ಸ್ಟಾಯ್ ಅವರು ಇನ್ನೂ ಒಂದು ಅದ್ಭುತ ವಿಷಯದ ಕಲ್ಪನೆಯನ್ನು ಬರೆದು, ಅದನ್ನು ತಮ್ಮ ಜೀವನದಲ್ಲಿ ಹಾಸು-ಹೊಕ್ಕಾಗಿಸಿಕೊಂಡಿದ್ದಾರೆ. 'ಬ್ರೆಡ್‌ಲೇಬರ್' ಎಂಬುದೇ ಆ ಕೃತಿ. ಅದು ಅವರೇ ಮಾಡಿದ ಶೋಧನೆಯಲ್ಲ, ಬೇರೆ ಯಾರೋ ಆ ವಿಷಯವನ್ನು ರಷ್ಯದ ಸರ್ವಸಂಗ್ರಹದಲ್ಲಿ ಬರೆದಿದ್ದರು. ಆ ಲೇಖಕರನ್ನು ಟಾಲ್‌ಸ್ಟಾಯ್ ಅವರು ಜಗತ್ತಿನ ಮುಂದೆ ತಂದು ನಿಲ್ಲಿಸಿ, ಅವರ ಮಾತನ್ನು ಬೆಳಕಿಗೆ ತಂದರು. ಜಗತ್ತಿನಲ್ಲಿ ಕಂಡುಬರುವ ಸಿರಿತನ ಬಡತನದ ವಿಷಮತೆಗೆ ನಾವು ಜೀವನದ ಧರ್ಮದವನ್ನು (ನೀತಿ) ಮರೆತಿರುವುದೇ ಕಾರಣ. ಆ ಧರ್ಮವೇ "ಬ್ರೆಡ್ ಲೇಬರ್" ಭಗವದ್ಗೀತೆಯ ಮೂರನೆಯ ಅಧ್ಯಾಯದ



ಆಧಾರದ ಮೇಲೆ ನಾನು ಅದನ್ನು 'ಯಜ್ಞ' ಎನ್ನುತ್ತೇನೆ. ಯಜ್ಞ ಮಾಡದೆ ಉಣುವವನು ಚೋರ, ಪಾಪಿ-ಎಂಬುದಾಗಿ ಗೀತೆ ಹೇಳುತ್ತದೆ. ಟಾಲ್‌ಸ್ಟಾಯ್ ಅವರೂ ಅದೇ ಮಾತನ್ನು ಹೇಳಿದ್ದಾರೆ. 'ಬ್ರೆಡ್ ಲೇಬರ್'ಗೆ ತಿರುಗ-ಮುರುಗ ಅರ್ಥಮಾಡಿ, ಅದನ್ನು ಹಾರಿಸಿಬಿಡಬಾರದು. ಶರೀರವನ್ನು ಸವೆಸಿ ಕೂಲಿ ಮಾಡದವನಿಗೆ ಉಣುವ ಅಧಿಕಾರವಿಲ್ಲ-ಎಂಬದೇ ಅದರ ಸರಳವಾದ ಅರ್ಥ. ನಾವು ನಮ್ಮ ಅಶನದ ಬೆಲೆಗೆ ಸರಿತೂಗುವಷ್ಟು ಪರಿಶ್ರಮ ಮಾಡಿದರೆ, ಜಗತ್ತಿನಲ್ಲಿ ಕಂಡು ಬರುವ ಬಡತನ ದೂರವಾದೀತು. ಸೋಮಾರಿಯಾದವನು ಸ್ವತಃ ಕೆಲಸ ಮಾಡಿಕೊಳ್ಳಲಾರದೆ, ಬೇರೆ ಇಬ್ಬರನ್ನು (ಹಸಿದವರು) ಅವರ ಜೀವ ಹಿಂಡುತ್ತಾನೆ. ಜನ ಪರೋಪಕಾರ ಮಾಡುವ ಪ್ರಯತ್ನಮಾಡಿ ಅದಕ್ಕಾಗಿ ಹಣ ಖರ್ಚುಮಾಡಿ ಕೀರ್ತಿ ಪಡೆಯುತ್ತಾರೆ. ಹಾಗೆ ಮಾಡುವ ಬದಲು ಅವರೇ ಸ್ವಲ್ಪ ಕಾಯಕಮಾಡಿದರೆ, ಅಂದರೆ ಬೇರೆಯವರ ಹೆಗಲಿನ ಮೇಲಿಂದ ಅವರು ಇಳಿದುಬಿಟ್ಟರೆ, ಅಷ್ಟೇ ಸಾಕು-ಎಂಬುದಾಗಿ ಟಾಲ್ ಸ್ಟಾಯ್ ಅವರು ಹೇಳಿದಾರೆ. ಇದೇ ಸತ್ಯವಾದ ಮಾತು. ನಮ್ರತೆಯ ವಚನ ಮಾಡುವುದೇನೋ ಪರೋಪಕಾರ-ಆದರೆ, ತಮ್ಮ ಭೋಗ-ವಿಲಾಸದಲ್ಲಿ ಲವಲೇಶವೂ ಬಿಟ್ಟುಕೊಡುವುದಿಲ್ಲ-ಎಂದರೆ ಆಕೋ ಭಗತ್ ಹೇಳುವಂತೆಯೇ "ಅಪಾರ ಕಳ್ಳತನ ಸೂಜಿಯಷ್ಟು ದಾನ"-ಆಗುವುದಿಲ್ಲವೆ? ಹೀಗೆ ಮಾಡಿದರೆ, ಸಗ್ಗ ಸಿಕ್ಕೀತೆ?

ಟಾಲ್‌ಸ್ಟಾಯ್ ಅವರು ಹೇಳಿದುದನ್ನು ಬೇರೆಯವರು ಹೇಳಿಲ್ಲವೆಂದಲ್ಲ. ಆದರೆ, ಅವರ ಭಾಷೆಯಲ್ಲಿ ಚಮತ್ಕಾರವಿತ್ತು; ಕಾರಣ ಅವರು ನುಡಿದಂತೆ ನಡೆಯುತ್ತಿದ್ದರು. ಮೆತ್ತನೆಯ ಹಾಸಿಗೆಯ ಮೇಲೆ ಒರಗು ದಿಂಬು ಇಟ್ಟುಕೊಂಡು ಕೂಡುತ್ತಿದ್ದವರು, ಕೂಲಿಮಾಡತೊಡಗಿದರು; ದಿನಕ್ಕೆ ಎಂಟು ಘಂಟೆ ಕಾಲ ಹೊಲದ ಕೆಲಸ ಅಥವಾ ಬೇರೆ ಯಾವುದಾದರೂ ಕೆಲಸ ಮಾಡಲಾರಂಭಿಸಿದರು. ಅಂದ ಮಾತ್ರಕ್ಕೆ ಅವರು ಸಾಹಿತ್ಯದ ಕೆಲಸ ಮಾಡಲಿಲ್ಲವೆಂದು ಭಾವಿಸಬಾರದು. ಅವರು ಶರೀರ ಶ್ರಮದ ಕೆಲಸ ಆರಂಭಿಸಿದಾಗಿನಿಂದ ಅವರ ಸಾಹಿತ್ಯ ಹೆಚ್ಚು ಶೋಭಾಯಮಾನವಾಯಿತು. ತಮ್ಮ ಪುಸ್ತಕಗಳಲ್ಲೆಲ್ಲ ಸರ್ವೋತ್ತಮವಾದುದೆಂದು ಅವರು ಹೇಳಿರುವ ಪುಸ್ತಕ, "ಕಲೆ ಎಂದರೇನು?"- ಎಂಬುದು. ಯಜ್ಞಕಾಲದ ಕೂಲಿ ಕೆಲಸ ಮಾಡಿದಮೇಲೆ ಉಳಿದ ಸಮಯದಲ್ಲಿಯೇ ಅವರು ಅದನ್ನು ಬರೆದರು. ಕೂಲಿ (ಶ್ರಮ) ಮಾಡಿದುದರಿಂದ ಅವರ ಶರೀರ ಸವೆಯಲಿಲ್ಲ; ಪ್ರತಿಯಾಗಿ

ಅದರಿಂದ ತಮ್ಮ ಬುದ್ಧಿ ಹೆಚ್ಚು ತೇಜೋಯುಕ್ತವಾಯಿತೆಂದು ಅವರೇ ಒಪ್ಪಿಕೊಂಡಿದ್ದಾರೆ. ಅವರ ಗ್ರಂಥಗಳನ್ನು ಓದುವವರಿಗೆ ಈ ಮಾತು ನಿಜವೆಂದು ತೋರುತ್ತದೆ.

ಟಾಲ್‌ಸ್ಟಾಯ್ ಅವರ ಜೀವನದಿಂದ ಲಾಭ ಪಡೆಯಬೇಕಾದರೆ, ಮೂರು ವಿಷಯಗಳನ್ನು ತಿಳಿಯಬೇಕು-ಯುವಕ ಸಂಘದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತ, ಅವರಿಗೆ ಈ ಮಾತನ್ನು ನೆನಪುಮಾಡಿಕೊಡಲು ಬಯಸುವೆ-ನಿಮ್ಮ ಮುಂದಿರುವುದು ಎರಡು ಮಾರ್ಗ: ಒಂದು ಸ್ವೇಚ್ಛಾಚಾರದ್ದು; ಇನ್ನೊಂದು ಸಂಯಮದ್ದು. ಟಾಲ್‌ಸ್ಟಾಯ್ ಅವರು ಉಳಿಯುವುದು ಅಳಿಯುವುದು ಎರಡನ್ನೂ ತಿಳಿದಿದ್ದರೆಂದು ನೀವು ಭಾವಿಸುವುದಾದರೆ, ಪ್ರಪಂಚದಲ್ಲಿ ಎಲ್ಲರಿಗೂ ವಿಶೇಷತಃ ತರುಣರಿಗೆ ಸಂಯಮದ ಮಾರ್ಗವೇ ಸರಿಯಾದ ಮಾರ್ಗ, ಎಂಬುದನ್ನು ಕಂಡುಕೊಳ್ಳಬಹುದು. ಹಿಂದೂಸ್ತಾನಕ್ಕೆ ವಿಶೇಷರೀತಿಯಲ್ಲಿ ಇದು ಅನ್ವಯಿಸುತ್ತದೆ. ಪಶ್ಚಿಮದಿಂದ ನಮ್ಮ ದೇಶಕ್ಕೆ ಒಂದು ವಿಧವಾದ ಗಾಳಿ-ನನ್ನ ದೃಷ್ಟಿಯಲ್ಲಿ ವಿಷಪೂರಿತವಾದ ಗಾಳಿ-ಬರುತ್ತದೆ. ಟಾಲ್‌ಸ್ಟಾಯ್ ಜೀವನದಂಥ ಚೆಂದವಾದ ಹವೆಯೂ ಬರುವುದುಂಟು; ಆದರೆ, ಅದು ಪ್ರತ್ಯೇಕವಾದ ಸ್ಟೀಮರಿನಲ್ಲಿ ಸ್ವಲ್ಪವೇ ಬರುತ್ತದೆ. ಪ್ರತಿದಿನ ಒಂದಲ್ಲ ಒಂದು 'ಸ್ಟೀಮರ್' ಬೊಂಬಾಯಿ ಅಥವಾ ಕಲ್ಕತ್ತೆಗೆ ಬರುತ್ತದೆ. ಅದರಲ್ಲಿ ಬೇರೆ ವಿದೇಶಿ ಸಾಮಾನುಗಳಂತೆ ಪರದೇಶಿ ಸಾಹಿತ್ಯವೂ ಬರುತ್ತದೆ. ಅವರ ವಿಚಾರ ಮನುಷ್ಯನನ್ನು ನಾಶಮಾಡುವಂಥವಾಗಿರುತ್ತದೆ; ಸ್ವೇಚ್ಛಾಚಾರದತ್ತ ಕೊಂಡೊಯ್ಯುವಂಥದಾಗಿರುತ್ತದೆ.... 'ಕಾನ್ಷನ್ಸ್' ಎಂಬ ಶಬ್ದಕ್ಕೆ ಸಮಾನಾರ್ಥಕ ಶಬ್ದ ನಮ್ಮಲ್ಲಿ ಇಲ್ಲವೆಂದು ತಿಲಕ ಮಹಾರಾಜರು ಹೇಳಿದಾರೆ. ಪ್ರತಿಯೊಬ್ಬ ವ್ಯಕ್ತಿಗೂ 'ಕಾನ್ಷನ್ಸ್' ಇರುವುದೆಂಬುದನ್ನು ನಾವು ಒಪ್ಪುವುದಿಲ್ಲ, ಪಾಶ್ಚಾತ್ಯರು ಆ ಮಾತನ್ನು ಒಪ್ಪುತ್ತಾರೆ. ವ್ಯಭಿಚಾರಿಗಳಿಗೆ, ಲಂಪಟರಿಗೆ ಎಲ್ಲಿಯ 'ಕಾನ್ಷನ್ಸ್'? ಅಂತಲೆ ತಿಲಕರು 'ಕಾನ್ಷನ್ಸ್'ನ ಬುಡವನ್ನೇ ಅಲ್ಲಾಡಿಸಿಬಿಟ್ಟರು. ಅಂತರ್ನಾದ ಕೇಳಲು ಅಂತರ್-ಕರ್ಣ ಬೇಕು; ಅಂತರ್-ಚಕ್ಷುವೂ ಬೇಕು; ಅದನ್ನು ಪ್ರಾಪ್ತಿಸಿಕೊಳ್ಳಲು ಸಂಯಮದ ಅವಶ್ಯಕತೆಯೂ ಇದೆ-ಎಂಬುದಾಗಿ ನಮ್ಮ ಋಷಿ-ಮುನಿಗಳು ಹೇಳಿದಾರೆ. ಅಂತಲೆ ಪಾತಂಜಲ ಯೋಗದರ್ಶನದಲ್ಲಿ ಯೋಗಾಭ್ಯಾಸಮಾಡುವವರಿಗೆ, ಆತ್ಮದರ್ಶನವನ್ನು ಅಪೇಕ್ಷಿಸುವವರಿಗೆ ಯಮ-ನಿಯಮದ ಪಾಲನೆ ಮಾಡುವುದನ್ನೇ ಮೊದಲನೆಯ ಪಾಠವಾಗಿ ತಿಳಿಸಿದಾರೆ. ಸಂಯಮದ ಹೊರತು ನನಗಾಗಲಿ, ನಿಮಗಾಗಲಿ, ಯಾರಿಗೇ ಆಗಲಿ ಬೇರೆ ಮಾರ್ಗವೇ ಇಲ್ಲ. ಟಾಲ್‌ಸ್ಟಾಯ್ ಅವರು ತಮ್ಮ ದೀರ್ಘ ಜೀವನದಲ್ಲಿ ಸಂಯಮಿಯಾಗಿದ್ದುಕೊಂಡು, ಇದನ್ನೇ ತಿಳಿಸಿದಾರೆ. ನನ್ನ ಇಚ್ಛೆ, ಪರಮಾತ್ಮನಲ್ಲಿ ನನ್ನ ಪ್ರಾರ್ಥನೆ ಇದುವೆ; ಕಣ್ಣೆದಿರುಗಿರುವ ದೀಪವನ್ನು ನೋಡುವಷ್ಟೇ ಸ್ಪಷ್ಟವಾಗಿ ಈ ವಸ್ತುವನ್ನು ನಾವು ನೋಡುವಂತಾಗಲಿ; ಎಲ್ಲರೂ ಒಟ್ಟಿಗೆ ಸೇರಿರುವ ಈ ಸಂದರ್ಭದಲ್ಲಿ, ಟಾಲ್‌ಸ್ಟಾಯ್ ಅವರ ಜೀವನದಿಂದ ಸಂಯಮದ ಪಾಠ ಕಲೆಯುವ ಸಂಕಲ್ಪ ತೆಗೆದುಕೊಂಡು, ಚದುರೋಣ.

ಸತ್ಯದ ಆರಾಧನೆಯನ್ನು ಬಿಡುವುದಿಲ್ಲವೆಂದು ನಿಶ್ಚಯಿಸಿರಿ, ಪ್ರಪಂಚದಲ್ಲಿ ಸತ್ಯದ ಸಿದ್ಧಿಗೆ ನಿಜವಾದ ಅಹಿಂಸಾ ಧರ್ಮಾಚರಣೆಯೇ ಸಾಧನ. ಅಹಿಂಸೆಯೆಂದರೆ ಪ್ರೇಮದ ಸಾಗರ. ಅದರಲ್ಲಿ ನಾವು ಮಿಂದೆವಾದರೆ, ಇಡೀ ಪ್ರಪಂಚವನ್ನು ಅದರಲ್ಲಿ ವಿಲೀನಗೊಳಿಸುವಷ್ಟು

ಔದಾರ್ಯ ನಮ್ಮಲ್ಲಿ ಉಂಟಾಗುವುದು. ಇದು ಕಠಿಣವಾದರೂ, ಸಾಧ್ಯವಾದ ಕೆಲಸ. ಅಂತಲೆ ನಾವು ಪ್ರಾರಂಭದಲ್ಲಿ ಹೀಗೆ ಪ್ರಾರ್ಥನೆ ಮಾಡಿದೆವು-ಶಂಕರನಾಗಲಿ, ವಿಷ್ಣುವಾಗಿರಲಿ, ಬ್ರಹ್ಮನಾಗಿರಲಿ, ಇಂದ್ರನಾಗಿರಲಿ, ಬುದ್ಧನಾಗಿರಲಿ, ಸಿದ್ಧನಾಗಿರಲಿ-ಯಾವನು ರಾಗ-ದ್ವೇಷ ರಹಿತನಾಗಿರುವನೋ, ಕಾಮವನ್ನು ಜಯಿಸಿರುವನೋ, ಅಹಿಂಸಾ-ಪ್ರೇಮದ ಪ್ರತಿಮೆ ಯಾಗಿರುವನೋ ಆತನ ಮುಂದೆಯೇ ನಾವು ತಲೆ ತಗ್ಗಿಸಿಯೇವು.

ಕುಂಟು ಪ್ರಾಣಿಗಳನ್ನು ಕೊಲ್ಲದಿರುವುದರಲ್ಲಿಯೇ ಅಹಿಂಸೆ ಮುಕ್ತಾಯವಾಗದು. ಆದರೂ ಧರ್ಮವೆನಿಸೀತು; ಆದರೆ ಪ್ರೇಮ ಅದಕ್ಕಿಂತಲೂ ಬಹಳ ಮುಂದೆ ಸಾಗಿದೆ. ಅದರ ದರ್ಶನ ಯಾರಿಗೆ ಆಗಿಲ್ಲವೋ, ಅವರು ಕುಂಟು ಪ್ರಾಣಿಗಳನ್ನು ರಕ್ಷಿಸಿದ ಮಾತ್ರಕ್ಕೆ ಆಗುವುದೇನು, ಹೋಗುವುದೇನು? ಭಗವಂತನ ಆ ಸ್ಥಾನದಲ್ಲಿ ಅದಕ್ಕೆ ಬೆಲೆ ಬಹಳ ಕಡಿಮೆ. ಮೂರನೆಯ ಮಾತು, 'ಬ್ರೆಡ್ ಲೇಬಲ್'- ಯಜ್ಞ, ಶರೀರವನ್ನು ದಂಡಿಸಿ, ಪರಿಶ್ರಮಮಾಡಿದರೆಯೇ ನಮಗೆ ಉಣುವ ಅಧಿಕಾರ. ಪಾರಮಾರ್ಥಿಕ ದೃಷ್ಟಿಯಿಂದ ಮಾಡಿದ ಕಾರ್ಯವೇ ಯಜ್ಞ, ಪರಿಶ್ರಮ ಮಾಡಿದರೂ, ಸೇವೆಯ ಉದ್ದೇಶದಿಂದಲೇ ಜೀವಿಸಬೇಕು.

ಲಂಪಟರಾಗಿರುವುದು, ಪ್ರಪಂಚದ ಭೋಗಗಳನ್ನು ಉಪಭೋಗಿಸುವುದು-ಅಷ್ಟೇ ಬಾಳುವೆಯಲ್ಲ. ಒಳ್ಳೆ ವ್ಯಾಯಾಮ ಪಟುವಾದ ತರುಣ, ಎಂಟು ಘಂಟೆ ಕಸರತ್ತು ಮಾಡಿದರೆ, ಅದು 'ಬ್ರೆಡ್ ಲೇಬರ್' ಎನಿಸಿಕೊಳ್ಳುವುದಿಲ್ಲ. ಕಸರತ್ತು ಮಾಡುವುದನ್ನು, ಶರೀರ ಬಲಪಡಿಸಿಕೊಳ್ಳುವುದನ್ನು ನಾನು ಉಪೇಕ್ಷಿಸುವುದಿಲ್ಲ. ಆದರೆ, ಟಾಲ್‌ಸ್ಟಾಯ್ ಹೇಳಿರುವ, ಗೀತೆಯ ಮೂರನೆಯ ಅಧ್ಯಾಯದಲ್ಲಿ ತಿಳಿಸಿರುವ ಯಜ್ಞ ಇದಲ್ಲ. ಜೀವನ ಇರುವುದು ಯಜ್ಞದ ಸಲುವಾಗಿ, ಸೇವೆಯ ಸಲುವಾಗಿ, ಈ ಭಾವನೆಯುಳ್ಳವನು ಭೋಗವನ್ನು ಕಡಿಮೆಮಾಡುತ್ತ ಹೋಗುವನು. ಈ ಆದರ್ಶ ಸಾಧನೆಯಲ್ಲಿಯೇ ಪುರುಷಾರ್ಥವಿದೆ. ಯಾರೂ ಆ ವಸ್ತುವನ್ನೂ ಪೂರ್ಣತಃ ಪ್ರಾಪ್ತಿಸಿಕೊಳ್ಳದೆ ಇರಬಹುದಾದರೂ ಅದು ದೂರ ದೂರವೇ ಸರಿಯುತ್ತಿರಬಹುದಾದರೂ, ಫರಹಾದನು ಶೇರಿಯ ಸಲುವಾಗಿ ಕಲ್ಲು ಒಡೆದಂತೆ, ನಾವೂ ಕಲ್ಲು ಒಡೆಯೋಣ. ಅಹಿಂಸೆಯೇ ನಮ್ಮ 'ಶೀರಿ'. ಅದರಲ್ಲಿ ನಮ್ಮ ಸ್ವರಾಜ್ಯವಂತೂ ಸೇರಿಯೇ ಇದೆ. ಜತೆಗೆ ಸರ್ವಸ್ವವೂ ಅದರಲ್ಲಿ ಅಡಗಿದೆ.

ಟಾಲ್‌ಸ್ಟಾಯ್ ದೊಡ್ಡ ಯೋಧರಾಗಿದ್ದರು. ಆದರೆ ಯುದ್ಧ ಒಳ್ಳೆಯದಲ್ಲವೆಂಬ ಅರಿವು ಅವರಿಗೆ ಆದಾಗ, ಅದನ್ನು (ಯುದ್ಧ) ನಿರ್ನಾಮ ಮಾಡಲು ಪ್ರಯತ್ನ ಮಾಡುತ್ತ ಮಾಡುತ್ತಲೆ ಅಸು ನೀಗಿದರು. ಅವರು ಹೀಗೆ ಹೇಳಿದ್ದಾರೆ-"ಪ್ರಪಂಚದಲ್ಲಿ ಎಲ್ಲಕ್ಕಿಂತ ದೊಡ್ಡ ಶಕ್ತಿಯೆಂದರೆ 'ಜನಮತ'. ಅದು ಸತ್ಯ ಹಾಗೂ ಅಹಿಂಸೆಯಿಂದಲೇ ಹುಟ್ಟುತ್ತದೆ.

ಮಹರ್ಷಿ ಟಾಲ್‌ಸ್ಟಾಯ್ ಅವರ ಜನ್ಮ-ಶತಾಬ್ಧಿಯ ಸಂದರ್ಭದಲ್ಲಿ ಸತ್ಯಾಗ್ರಹಾಶ್ರಮದಲ್ಲಿ ಮಾಡಿದ ಭಾಷಣದ ಸಾರ.

ಮಗುವೊಂದು ಗುರುವಾಗಿ...

ನನಗೆ ಮಕ್ಕಳಿಲ್ಲ
ಗಂಡನೂ ಇಲ್ಲ
ಪೊರೆಯಲಾರದ ಗಂಡ
ಗರ್ಭಪಾತದ ಕಮಟು
ಇನ್ನೂ ಮರೆತಿಲ್ಲ

ಗಂಡನಿಲ್ಲದ ಒಂಟಿತನ
ಮಕ್ಕಳಿಲ್ಲದ ಬೇನೆ
ಮನೆಯಿರದ ಬಯಲು
ತಾಳಿಯಿಲ್ಲದ ಖಾಲಿತನ
ಯಾವುದೂ ಕಾಡಲಿಲ್ಲ

ಹೆಣ್ಣ ಕಾಡುವ ಕ್ರೌರ್ಯ
ಜಗದಗಲ ತುಂಬಿ
ಹೆಣ್ಣ ಬೇಡುವ ನಾಜೂಕು
ಬೆನ್ನಲ್ಲಿ ಚೂರಿಯಾಗಿ
ಉಳಿದೆ ಒಂಟಿಯಾಗಿ

ಲಂಗರಿಲ್ಲದ ಹಾಯಿ ನಾನು
ಬದುಕು ದಿಕ್ಕಾಪಾಲು
ಬೇಲಿಯಿಲ್ಲದ ಬಯಲುನಾನು
ತುಟಿನೋವು ನಕ್ಕರೂ...
ಒಳಗೊಂದು ಅಗ್ನಿಪಿಂಡ

ಅನ್ಯರ ಮಗುವೊಂದಕ್ಕೆ
ಪಾಠ ಹೇಳಲು ಕುಳಿತೆ
ಅದರ ಮುಗ್ಧ ನಗುವಿಗೆ
ನನ್ನ ಸಿಗರೇಟಿನ ಕರಿತುಟಿ
ಅದುರಿ ಕಂಪಿಸಿ ಬೆಚ್ಚಿತು

ಸ್ಮಶಾನದಲ್ಲಿ ತಪ್ಪಿಸಿಕೊಳ್ಳುವ
ನನ್ನ ವಿಕ್ಷಿಪ್ತ ಮನಸ್ಸು
ಅದರ ಸಣ್ಣ ಸಣ್ಣ ಪ್ರಶ್ನೆಗೆ
ಉತ್ತರ ಹುಡುಕಲನುವಾಯ್ತು

ಹೂವು ಮೊಗ್ಗಿನ ರೂಪ
ಎದೆ ಹಾಲು ಉಕ್ಕಿಸಿತು
ಅಲೆವ ನನ್ನ ಬದುಕಿಗೆ
ಮಗುವೇ ಗುರುವಾಯ್ತು.

-ಎಸ್. ಮಾಲತಿ ಸಾಗರ

ಜೆ.ಪಿ. ನೆನಪು

ಕಥೆಗಾರ ಮತ್ತು ಕವಿ ಬಿದರಹಳ್ಳಿ ನರಸಿಂಹಮೂರ್ತಿಯವರ 'ಜೀವಹಂಸ' ಎಂಬ ಕಥೆ 'ಸುಧಾ'ದಲ್ಲಿ ಪ್ರಕಟವಾಗಿತ್ತು. ಪರಿಸರದ ದೃಷ್ಟಿಯಿಂದ ಅತ್ಯುತ್ತಮವಾದ ಕಥೆ. ಅದಕ್ಕೆ ಪ್ರತಿಕ್ರಿಯಿಸುವಾಗ ಈ ಪುಟ್ಟ 'ಜೆ.ಪಿ. ನೆನಪು ಮತ್ತು ಬುದ್ಧಗಾಥೆ'ಯನ್ನು ಕಳಿಸಿದ್ದಾರೆ. ಅವರಿಗೆ 'ಶೂದ್ರ' ಋಣಿಯಾಗಿದೆ.

ಸಂ.

ಬುದ್ಧ ಗಾಥೆ

ಪುಷ್ಪಕಲೆ
ಬಲ್ಲ ಕುಶಲ ಹೂಗಾರ
ಒಂದೊಂದು ಹೂವೂ
ಅಂದಗಾಣುವ ಹಾಗೆ
ಪವಣಿಸುತ್ತ
ಮಾಲೆ ಕಟ್ಟುವ ಹಾಗೆ
ಲೋಕೋತ್ತರ ಸಾಧನೆಗೆ
ಕರೆದೊಯ್ಯಬಲ್ಲ ಧರ್ಮಮಾರ್ಗ
ಬಲ್ಲ ಪ್ರಯತ್ನಶಾಲಿ ಸಾಧಕ
ಭೂಲೋಕವನ್ನೂ
ಯಮಲೋಕವನ್ನೂ
ಕಾಮಲೋಕವನ್ನೂ
ಮಾನವ ಲೋಕವನ್ನೂ
ದೇವಲೋಕವನ್ನೂ
ಒಂದೊಂದಾಗಿ ಗೆಲ್ಲುತ್ತಾನೆ

-ಭಗವಾನ್ ಬುದ್ಧ
(ಧಮ್ಮಪದ-ಪುಪ್ಫವಗ್ಗ-ಗಾಥೆ ೪೫)

ಅಕ್ಟೋಬರ್ ಹನ್ನೊಂದು ಜೆ.ಪಿ. ಅವರ ಜನ್ಮದಿನ. ಜೆ.ಪಿ. ಅಂದರೆ ಜನತೆಯ ಪ್ರಾಣ. ಜೆ.ಪಿ. ಎಂಬುದು ಬಿಹಾರದ ಸಬೋದಿವ್ಯೋರಾ ಎಂಬ ಹಳ್ಳಿಯಲ್ಲಿ ಹುಟ್ಟಿದ ಅಪ್ರತಿಮ ಗಾಂಧಿವಾದಿ, ಸಮಗ್ರಕ್ರಾಂತಿಯ ಹರಿಕಾರ ಜಯಪ್ರಕಾಶ್ ನಾರಾಯಣರ ಸಂಕ್ಷಿಪ್ತ ನಾಮ. ಪರತಂತ್ರ ಭಾರತದಲ್ಲಷ್ಟೆ ಅಲ್ಲದೆ, ಸ್ವತಂತ್ರ ಭಾರತದಲ್ಲೂ ದೇಶಕ್ಕಾಗಿ ಹೋರಾಡಿ ಸೆರೆಮನೆವಾಸ ಅನುಭವಿಸಿದ ಕೀರ್ತಿ ಅವರದ್ದು. ತುರ್ತುಪರಿಸ್ಥಿತಿಯಲ್ಲಿ ಬಂಧನಕ್ಕೊಳಗಾದಾಗ, ಅವರು ಬರೆದ 'ಸೆರೆಮನೆಯ ದಿನಚರಿ' ಹೀಗೆ ಪ್ರಾರಂಭವಾಗುತ್ತದೆ: "ನನ್ನ ಜಗತ್ತು ನನ್ನ ಸುತ್ತ ಛಿದ್ರಛಿದ್ರವಾಗಿ ಬಿದ್ದಿದೆ... ಭಾರತದ ಪ್ರಜಾಸತ್ತೆಯ ಶವಪೆಟ್ಟಿಗೆಗೆ ಹೊಡೆಯುತ್ತಿರುವ ಪ್ರತಿಯೊಂದು ಮೊಳೆಯೂ ನನ್ನ ಹೃದಯಕ್ಕೇ ಹೊಡೆಯುತ್ತಿರುವ ಮೊಳೆಯಂತಿದೆ." ನಾನೇ ದೇಶ ದೇಶವೇ ನಾನು ಎಂದು ಗುರ್ತಿಸಿಕೊಳ್ಳುವ ಸೃಷ್ಟ್ಯಾತ್ಮಕ ಮಾದರಿ ಇದು. ಸೆರೆವಾಸದಿಂದ ಬಿಡುಗಡೆಯಾದಾಗ ಜೆ.ಪಿ. ಪದೇ ಪದೇ ಡಯಾಲಿಸಿಸ್ ಚಿಕಿತ್ಸೆಗೆ ಮೊರೆ ಹೋಗಬೇಕಾದ ರೋಗಿಯಾಗಿದ್ದರು. ಒಗ್ಗೂಡಿ ಗೆದ್ದ ವಿರೋಧ ಪಕ್ಷಗಳ ನಾಯಕರು ಅಧಿಕಾರಕ್ಕಾಗಿ ನಡೆಸಿದ ಕ್ಷುಲ್ಲಕ ಕಾದಾಟಗಳಿಂದಾಗಿ ಜೆ.ಪಿ. ಅವರ ಕನಸುಗಳು ಮತ್ತೊಮ್ಮೆ ನುಚ್ಚುನೂರಾದವು.

ಆ ನೋವು ತಾಳಲಾರದೆ ಅವರು ಪ್ರಾಣಬಿಟ್ಟರು.

ಸಾಮಾಜಿಕ ಕ್ರಾಂತಿ ಕುರಿತ ಜೆ.ಪಿ. ಅವರ ಈ ಸುಪ್ರಸಿದ್ಧ ಹೇಳಿಕೆಯನ್ನು ಕೇಳಿದ್ದೀರಾ?: "ರಾತ್ರಿಯ ನಂತರ ಬೆಳಕು ಮೂಡುವ ಪ್ರಾಕೃತಿಕ ಕ್ರಾಂತಿಯ ಹಾಗೆಯೇ ಸಾಮಾಜಿಕ ಕ್ರಾಂತಿಯೂ ಆಗುವುದಿದ್ದರೆ, ಸಾಮಾಜಿಕ ಪ್ರಗತಿ ಹಾಗು ಬದಲಾವಣೆಗಾಗಿ ಮಾನವ ಪ್ರಯತ್ನದ ಅಗತ್ಯವೇ ಇರುತ್ತಿರಲಿಲ್ಲ." ಈ ಮಾತು ಹೇಳಿರುವ ಅರ್ಥಕ್ಕಿಂತ ಹೇಳದೆ ಬಿಟ್ಟಿರುವ ಅರ್ಥಗಳೇ ಹೆಚ್ಚಾಗಿವೆ. ಅವನ್ನೆ ನಾವು ಇಂಗಿತಗಳು ಅನ್ನುವುದು. ಪ್ರಕೃತಿ ತನ್ನದೇ ಆದ ಸೃಷ್ಟಿ, ಪಾಲನೆ ಸಂಹಾರ ನಿಯಮಗಳನ್ನು ಅನುಸರಿಸುತ್ತದೆ. ಆದರೆ ಪ್ರಕೃತಿಯ ಸೃಷ್ಟಿಯೆ ಆದ ಮಾನವ ತಾನೆ ಒಂದು ಪ್ರತಿಸೃಷ್ಟಿಯಲ್ಲಿ ನಿರತನಾಗಿದ್ದಾನೆ. ಅವ ಸೃಜಿಸಿಕೊಂಡಿರುವ ಸಮಾಜ ವ್ಯವಸ್ಥೆಗೆ ಒಂದು ಪ್ರತ್ಯೇಕ ನ್ಯಾಯ ಸಂಹಿತೆ ನಿರ್ಮಾಣವಾಗಿದೆ. ಇದರ ಪ್ರಕಾರ ಮಾನವ ಅಸಮಾನತೆ, ಪರಸ್ಪರ ಹಿಂಸೆ-ಕ್ರೌರ್ಯ-ಅನ್ಯಾಕ್ರಮಣ ಇವು ನಿಷಿದ್ಧ. ಇವುಗಳ ವಿರುದ್ಧ ಹೋರಾಟಮಾಡಲು ನಾವು ಬದ್ಧರಾಗಿದ್ದೇವೆ. ಸಮಾನತೆಯ ಆಧಾರದ ಮೇಲೆ ಸಮಾಜ ವ್ಯವಸ್ಥೆಯನ್ನು ಮತ್ತೆ ಮತ್ತೆ ಕಟ್ಟುವುದು ನಮ್ಮ ಆಜನ್ಮ ಸಿದ್ಧ ಹಕ್ಕು. ಇದಕ್ಕೆ ಧಕ್ಕೆ ಬಂದಾಗೆಲ್ಲ ಸಂಘಟನೆ, ಹೋರಾಟ ಅನಿವಾರ್ಯವಾಗುತ್ತದೆ. ಇದಕ್ಕೆ ಧಕ್ಕೆ ಉಂಟುಮಾಡುವ ಶಕ್ತಿಗಳನ್ನು ಸಂಘಟಿತ ಸಾಮುದಾಯಿಕ ಸತ್ಯಾಗ್ರಹ ರೂಪಿ ಶಾಂತಿಯುತ ಹೋರಾಟಗಳಿಂದ ಮಣಿಸುವ ಶುದ್ಧರಾಜಕಾರಣದ ಪಾಠವನ್ನು ಜೆ.ಪಿ. ಭಾರತದ ಯುವಕರಿಗೆ ಬೋಧಿಸಿದರು. ಇದೆ ಅವರ ಸಮಗ್ರಕ್ರಾಂತಿಯ ತಂತ್ರವೂ ಆಗಿತ್ತು. ಆದರೆ ಅದಿನ್ನೂ ಪೂರ್ತಿ ಕೈಗೂಡಿಲ್ಲ.

ತಾವು ಅಧಿಕಾರ ಬಯಸದೆ, ಅಧಿಕಾರಕ್ಕೆ ಬಂದವರನ್ನು ಕೈಹಿಡಿದು ನಡೆಸಿದ ಕೃಷ್ಣ, ಬುದ್ಧ ಅಲ್ಲಮ, ಗಾಂಧಿ, ಜೆ.ಪಿ, ವಿನೋಬಾರಂಥವರು ನಿಜವಾದ ಅರ್ಥದಲ್ಲಿ ರಾಜಗುರುಗಳು. ಇವರಿಗೆ ವಿಶ್ವದ ಉಳಿವು, ಜನಸಮುದಾಯದ ಸುಖಸಂತೋಷಗಳು ವೈಯಕ್ತಿಕ ತುರ್ತಿನ ಸಂಗತಿಗಳಾಗಿರುತ್ತವೆ.

●

ಸ್ನೇಹಿತರಿಗೆ ಒಳ್ಳೆಯದನ್ನು ಮಾಡು, ಸ್ನೇಹ ಉಳಿಯುತ್ತದೆ.
ಶತ್ರುವಿಗೆ ಒಳ್ಳೆಯದನ್ನು ಮಾಡು ಸ್ನೇಹ ದೊರಕುತ್ತದೆ.

-ಬೆಂಜಮಿನ್ ಫ್ರಾಂಕ್ಲಿನ್

ನಿನ್ನ ಬಗ್ಗೆ ಜನರೇನೆನ್ನುತ್ತಾರೆ, ಪ್ರಪಂಚ ಏನೆನ್ನುತ್ತದೆ
ಎಂದೆನ್ನುವುದಕ್ಕಿಂತ ನಿನ್ನ ಆತ್ಮಸಾಕ್ಷಿ ಏನೆನ್ನುತ್ತದೆ ಎಂಬುದಕ್ಕೆ
ಹೆಚ್ಚು ಬೆಲೆ ಕೊಡು.

-ಸುಭಾಷಿತ



ನಾ ಕಂಡ 'ಬನ್ನಂಜೆ'

❐ ಚಂದ್ರಿಕಾ

ಶೀರ್ಷಿಕೆ ನೋಡಿ ಅನೇಕರ ಹುಬ್ಬು ಮೇಲೇರಬಹುದು. ಆದರೆ ಇದು ಬರೀ ಶಬ್ದಾರ್ಥಕ್ಕೆ ಮಾತ್ರ ಮೀಸಲಿಡಬೇಕಾದದ್ದು ಅಷ್ಟೆ. ಬೇರೆ ಯಾವುದೇ ಅರ್ಥವೂ ಇದಕ್ಕಿಲ್ಲ. 'ಒಬ್ಬರನ್ನ ಪೂರ್ತಿ ಅರ್ಥ ಮಾಡಿಕೊಂಡಿದ್ದೇನೆ' ಅನ್ನುವುದೇ ಬರೀ ಮೂರ್ಖತನವಾದೀತು ಅಥವಾ ಒಣಜಂಭ ಅನ್ನಿಸಿಕೊಳ್ಳ ಬಹುದು. ಹಾಗಾಗಿ ನಾನು ಆ ದಾರ್ಷ್ಟ್ಯಕ್ಕೆ ಕೈಹಾಕದೇ ಬರೀ ನನ್ನ ಅವರ ಪರಿಚಯದ ಕುರಿತು ಈ ಶೀರ್ಷಿಕೆಯನ್ನ ಬಳಸಿಕೊಂಡಿದ್ದೇನೆ.

'ಆಕಸ್ಮಿಕ'ವೊಂದು ವಾಸ್ತವದ ನೆಲಗಟ್ಟಿಗೆ ಬಂದಾಗ, ಬದುಕನ್ನು ಆತುಕೊಂಡಾಗ ಮನುಷ್ಯ ಆಶ್ಚರ್ಯ ಚಕಿತನಾಗುತ್ತಾನೆ, ಸಂಭ್ರಮಪಡ್ತಾನೆ, ದುಃಖಪಡ್ತಾನೆ, ರೋಮಾಂಚಿತನಾಗ್ತಾನೆ ಇನ್ನೂ ಹೀಗೆ ಏನೇನೋ ಆಗಬಹುದು. ಅದು ಅವನ ಅನುಭವಕ್ಕೆ ಬಂದ ಹಾಗೇ.

ಆ ರೀತಿಯ "ಆಕಸ್ಮಿಕ ಗಳಿಗೆ" ಯೊಂದು ಜೀವನದ ಎಷ್ಟೋ ಸಾಮಾನ್ಯಗಳಿಗೆಗಳಲ್ಲಿ ಸಾಮಾನ್ಯವಾಗಿ ಸೇರಿ ಹೋಗಿ ಬಿಡಬಹುದಾದ 'ಆ ಗಳಿಗೆ' ಯೊಂದು ಹಾಗಾಗಲಿಲ್ಲ. 'ನನ್ನ ಅವರ ಭೇಟಿ' ಆದದ್ದು ಹೀಗೇ.

ಆತ್ಮೀಯರೊಬ್ಬರು ನನಗೆ ಆ ಗಳಿಗೆಯ ಸ್ವಲ್ಪ ಹಿಂದೆ ಫೋನಾಯಿಸಿ ಹೇಳಿದ್ದರು. "ಚಂದ್ರಿಕಾ ಬನ್ನಂಜೆ ಗೋವಿಂದಾ ಚಾರ್ಯರ ಉಪನ್ಯಾಸ ಇದೆ ಸಂಜೆ. ಖಂಡಿತಾ ಬನ್ನಿ ತಪ್ಪಿಸಬೇಡಿ"- ಆದರೆ ಹೋಗುವುದಕ್ಕೆ ಬಹಳಷ್ಟು ಕಾಲ ಮೀನಾ ಮೇಷಾ ಎಣಿಸಿದ್ದೆ. ಕಾರಣ ನಾನು ಸ್ವಲ್ಪ 'ಮನೆ ಮೂಳಿ'ತರಹ. ಮಕ್ಕಳ ಹೋಂವರ್ಕ್, ರಾತ್ರಿ ಅಡಿಗೆ... ಹೀಗೇ ಏನೇನೋ ನೆಪಗಳೆಂಬ ಕರ್ತವ್ಯದ ಕರೆಯಲ್ಲಿ ಹೋಗಲೋ ಬೇಡವೋ ಅಂತ ಲೆಕ್ಕಾಚಾರ ಹಾಕ್ತಾ ಇನ್ನರ್ಧ ಗಂಟೆ ಕಳೆದೆ. ಅದುವರೆಗೆ ಬನ್ನಂಜೆಯವರ ಬಗ್ಗೆ ಕೇಳಿದ್ದೆ, ಓದಿದ್ದೆ, ಆ ವ್ಯಕ್ತಿಯ ಬಗ್ಗೆ ಏನೋ ಒಂದು ರೀತಿಯ ಸ್ಪಷ್ಟ ರೂಪವನ್ನೂ ಕಲ್ಪಿಸಿಕೊಂಡಿದ್ದೆ, ಆದರೆ ಮುಖತಃ ಭೇಟಿ ಆಗಿರಲಿಲ್ಲ. ಅರೆ ನನ್ನ ಯೋಚನಾ ಲಹರಿ ತುಂಡರಿಸಿತು.

ಮತ್ತೊಮ್ಮೆ ಫೋನಿನ ಕರೆ. ಪುನಃ ಅದೇ ಆತ್ಮೀಯರು 'ರೀ ಯಾಕೆ ಹೊರಡ್ಲಿಲ್ಲವಾ ಶುರು ಆಗ್ಹೋಗ್ತಾ ಇದೆ ಬೇಗ ಬನ್ನಿ'.

ಸರಿ ಇನ್ನು ಅವರಿಗೆ ನೋವಾಗಬಾರದು ಅಂತ ನನ್ನ ಚಿಕ್ಕಮಗಳನ್ನೂ ಕರ್ಕೊಂಡು ಉಪನ್ಯಾಸಕ್ಕೆ ಹೊರಟೆ. ನಾನು ಹೋದಾಗ ಸಭಾಭವನವೆಲ್ಲಾ ಕಿಕ್ಕಿರಿದು ತುಂಬಿತ್ತು. ಕಾರ್ಯಕ್ರಮದ ಪ್ರಾರಂಭೋತ್ಸವದ ಅಂಗವಾಗಿ ದೀಪ ಬೆಳಗುವುದು ನಡೆದಿತ್ತು. ನನಗೆ ಫೋನಾಯಿಸಿದ್ದ ಆತ್ಮೀಯರು ದೂರದಿಂದಲೆ ಬನ್ನಂಜೆಯವರನ್ನು ತೋರಿಸಿದರು. ಅರೆ! ನನ್ನ ಕಲ್ಪನೆಯಲ್ಲಿದ್ದ 'ಪುರಾಣ ಪುರುಷ' ಬನ್ನಂಜೆ ದೊಪ್ಪನೆ ಬಿದ್ದು ಹೋದರು. ಅಂದುಕೊಂಡಿದ್ದಕ್ಕಿಂತ ಬೇರೆಯಾಗಿ ವಿಚಿತ್ರವಾಗಿ ಕಂಡ ಈ ಬನ್ನಂಜೆ ಮುಂದೆ ಅವರ ಮಾತಿನ ಮೋಡಿಯ ಪ್ರವಾಹದಲ್ಲಿ ನನ್ನನ್ನ ಎಲ್ಲಿಗೋ ಕೊಂಡೊಯ್ದಿದ್ದರು. ಆ "ಆಕಸ್ಮಿಕ ಗಳಿಗೆ" ಆಕಸ್ಮಿಕವಾಗದೇ ಇಂದಿನವರೆಗೂ ವಾಸ್ತವಿಕ ಜೀವನದ ಅನುಭವವಾಗಿಯೇ ಉಳಿದಿದೆ.

'ಬನ್ನಂಜೆ'ಯವರು ನಮಗೆಲ್ಲಾ ಆಪ್ತರು. ಅವರ ಆಧ್ಯಾತ್ಮ ಪ್ರಪಂಚದ ಪ್ರಜೆಗಳು ನಾವು. ಅವರ ಪ್ರವಚನವೆಂದರೆ ಅವರದ್ದೆ. ಅದಕ್ಕೆ ಸರಿ ಸಾಟಿಯಾದವರನ್ನು ನಾನು ಕಂಡಿಲ್ಲ.

ಅವರನ್ನು ಕುರಿತು ಮಾತನಾಡುವುದು, ಅವರ ಬರವಣಿಗೆ / ಲೇಖನಗಳ ಕುರಿತು ಮಾತನಾಡುವುದು ಎಂದರೆ ಅವರನ್ನು ಅರ್ಥ ಮಾಡಿಕೊಂಡಿದ್ದೇವೆ ಅನ್ನುವವರಿಗೂ, ಅರ್ಥ ಆಗಿಲ್ಲ ಅನ್ನುವವರಿಗೂ ಇಬ್ಬರಿಗೂ ಒಂದು ರೀತಿಯ ಮುಜುಗರದ ವಿಷಯ. ಅರ್ಥಆಗದವರಿಗೆ ಅದು ಅರ್ಥ ಆಗದ್ದರಿಂದಲೆ ಹೇಳುವುದು ಕಷ್ಟ, ಅರ್ಥ ಆದವರಿಗೆ ಅದು ಅರ್ಥ ಆದ್ದರಿಂದಲೆ ಹೇಳುವುದು ಕಷ್ಟ. ಹಾಗಾಗಿ ಗೊತ್ತಿದ್ದವರಿಗೂ ಗೊತ್ತಿಲ್ಲದವರಿಗೂ ಇಬ್ಬರಿಗೂ ಅವರ ಕುರಿತು ಹೇಳಲು ಕಷ್ಟ ಅಥವಾ ಗೊತ್ತಿಲ್ಲ. ಹೇಳಬೇಕಾದ್ದನ್ನು ಹೇಳದೇ ಬಿಟ್ಟು ಅದಕ್ಕೆ ಸುತ್ತು ಹೊಡೆಯುವುದು, ಗರ್ಭಗುಡಿಯಲ್ಲಿ ದೇವರನ್ನು ಬಿಟ್ಟು ಪ್ರಾಕಾರದಲ್ಲಿ ಪ್ರದಕ್ಷಿಣೆ ಬಂದ ಹಾಗೆ ಆಗುತ್ತೆ. ಆದರೂ ದೇವರ ಸುತ್ತು ಪ್ರದಕ್ಷಿಣೆ ಬಂದೆವು ಅನ್ನುವುದೊಂದೆ ಸಮಾಧಾನ ಅಥವಾ ಭ್ರಮೆ ಅಂತಹ ಸಾಹಸ ಇಲ್ಲಿ, ನನ್ನದು.

ಹೊರನೋಟಕ್ಕಷ್ಟೆ ಪಂಡಿತರೆನಿಸಿಕೊಳ್ಳುವವರಿಂದ, ಮಡಿವಂತರಿಂದ ಬನ್ನಂಜೆಯವರು ಬಹಳ ದೂರ. ಶುಷ್ಕ ಪಾಂಡಿತ್ಯ ಪ್ರದರ್ಶನದಿಂದ ಜನರನ್ನು ಮರುಳುಗೊಳಿಸುವವರೂ ಅಲ್ಲ. ತನ್ನ ವ್ಯಕ್ತಿತ್ವದ ಆಳ-ಹರಹುಗಳನ್ನು ಅವರು ಎಂದಿಗೂ ಬಿಟ್ಟು ಕೊಡುವವರೂ ಅಲ್ಲ. ನೇರ ನಡೆ, ನುಡಿ, ಸರಳ ವ್ಯಕ್ತಿತ್ವ ಇಷ್ಟೆ ಎಲ್ಲರಿಗೂ ಚಿರಪರಿಚಿತ, ಉಳಿದದ್ದೆಲ್ಲಾ ಅವರವರ ಭಾವಕ್ಕೆ ಅವರವರ ಭಕುತಿಗೆ, ಅವರವರ ನೋಟಕ್ಕೆ ತಕ್ಕ 'ಬನ್ನಂಜೆ' ಯಾಗಿ ಬಿಡ್ತಾರೆ. ಈ ರೀತಿಯ ವಿಶಿಷ್ಟ ವ್ಯಕ್ತಿಯನ್ನು ನಾನು ಪೂರ್ತಿಯಾಗಿ ಯಥಾರ್ಥವಾಗಿ ಕಂಡಿದ್ದೇನೆ ಎನ್ನುವಷ್ಟು ಧೈರ್ಯ ನನಗೂ ಇಲ್ಲ, ಆದರೂ-

"ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣ ಮುದಚ್ಯತೇ
ಪೂರ್ಣಸ್ಯ ಪೂರ್ಣಮಾದಾಯ-
-ಪೂರ್ಣಮೇವಾವಶಿಷ್ಯತೇ"

ಅವರೊಂದು ಅನಂತಜ್ಞಾನದ ಕಡಲು, ಅಪರಂಪಾರ ನಾನೋ ಕಡಲತೀರದಲ್ಲಿ ಕೂತು ಕಡಲನ್ನೆ ವಿಸ್ಮಯದಿಂದ ನೋಡುತ್ತಿರುವ ವೀಕ್ಷಕಳು, ಅಷ್ಟೆ. ನನ್ನ ಯೋಗ್ಯತೆಯ ತಕ್ಕ ಪಾತ್ರೆಯಲ್ಲಿ ಮಾತ್ರ ಆ ಜ್ಞಾನ ವಾಹಿನಿಯನ್ನು ಹಿಡಿಯಲು ಸಾಧ್ಯವಾಗಿದೆ. ಎಷ್ಟು ಸಿಕ್ಕಿತೋ ಎಷ್ಟು ದಕ್ಕಿತೋ ಅಷ್ಟೆ ನನ್ನ ಪುಣ್ಯ.

ಬನ್ನಂಜೆಯವರು ಸಮಕಾಲೀನ ಸಂಸ್ಕೃತ ಪಂಡಿತರಲ್ಲಿ ಪ್ರೌಢರಾಗಿರುವಂತೆಯೇ ಶ್ರೇಷ್ಠ ವಿದ್ವಾಂಸರೂ, ಪ್ರವಚನಕಾರರೂ ಕೂಡಾ. ಇಂದಿನ ಕರ್ನಾಟಕದ ಪಂಡಿತ-ಕವಿ -ಸಾಹಿತಿ-ಪತ್ರಕರ್ತ-ಕಲಾವಿಮರ್ಶಕ ವರ್ತುಲದಲ್ಲಿ ಬಹಳ ಎತ್ತರದಲ್ಲಿರುವವರು ಬನ್ನಂಜೆಯವರು, ಅಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಕಾರಣ ಇಷ್ಟೆ, ಅವರು ಒಬ್ಬ ಕಲಾವಿದ-ಸಾಹಿತಿ-ಕವಿ ಎಲ್ಲವೂ ಎನ್ನುವುದು ಬಹಳಷ್ಟು ಜನಕ್ಕೆ ಗೊತ್ತೇ ಇಲ್ಲ.

ಲಹರಿ ಬಂದಾಗ ಅವರು ಬಿಡಿಸುವ ರೇಖಾಚಿತ್ರಗಳನ್ನು ಕಾಣುವ ಭಾಗ್ಯ ನನಗೆ ಒದಗಿದೆ. ಹಾಗೇ ಭಾವ ತುಂಬಿ ಬಂದಾಗ ನನಗಾಗಿಯೇ ಬರೆದುಕೊಟ್ಟ ಅನೇಕ ಕವಿತೆಗಳು ನನ್ನ ಎದೆಯಾಳದಲ್ಲಿ ಅಚ್ಚಾಗಿವೆ. ಸಾಹಿತಿಯಾಗಿ ನನ್ನ ಸಾಹಿತ್ಯಾರಾಧನೆಯನ್ನು ಮೆಚ್ಚಿ (ನನ್ನದೋ ಬರೀಬರಡು ಸಾಹಿತ್ಯ ಅವರದೋ ಜನ್ಮಜಾತವಾಗಿ ಬಂದ ಗುಣ) ಸಾಹಿತ್ಯದ ಆಳ ಅಗಲಗಳನ್ನೂ ತೆರೆದಿಟ್ಟದ್ದಿದೆ. ಅನೇಕ ಶಬ್ದಗಳ ನಿರ್ವಚನವನ್ನ ನಿರರ್ಗಳವಾಗಿ ಸುಲಲಿತವಾಗಿ ಹೇಳಿ ಆಶ್ಚರ್ಯದ ಕಡಲಲ್ಲಿ ಮುಳುಗಿಸಿ ಆನಂದವನ್ನುಂಟು ಮಾಡಿರುವ ಪ್ರಸಂಗಗಳೂ ಅನೇಕ.

ಹೀಗಾಗಿ ಬನ್ನಂಜೆಯವರ ಧಾರ್ಮಿಕ-ತಾತ್ವಿಕ-ಸಾಹಿತ್ಯಿಕ ಉಪನ್ಯಾಸಗಳನ್ನು ಆಲಿಸಿದವರೆಲ್ಲರೂ ಮತ್ತೆ ಮತ್ತೆ ಅವರ ಮಾತುಗಳನ್ನು ಕೇಳುತ್ತಿರಬೇಕು ಎಂದು ಬಯಸುತ್ತಾರೆ. ಅವರ ಅಧ್ಯಯನ ಆಳವಾದದ್ದು. ಅವರೇ ಹೇಳುವಂತೆ ಅವರು ಕಣ್ಣುಮುಚ್ಚಿ ಓದಿದ್ದೇ ಹೆಚ್ಚು (ನಮ್ಮ ಹಾಗೆ ಕಣ್ಣು ಕಣ್ಣು ಬಿಟ್ಟು ಉರು ಹೊಡೆಯುವ ಅಧ್ಯಯನವಲ್ಲ) ಹಾಗೇ ಓದಿದ್ದೆಲ್ಲಾ 'ಸರಿ' ಎನ್ನುವ ಜಾಯಮಾನವೂ ಅವರದ್ದಲ್ಲ. ತರ್ಕದ ಬುದ್ಧಿಗೆ ಒರೆಹಚ್ಚಿ ಸಾಧುವೆಂದು ಕಂಡಿದ್ದು ಮಾತ್ರ ಸಮ್ಮತ ಅವರಿಗೆ. ಕೆಲವು ಸಲ ಅವರಾಡುವ ಮಾತುಗಳು ಯಾವ ಪುಸ್ತಕದಲ್ಲೂ ಇರುವುದಿಲ್ಲ, ವೇದಾಂತ ಗ್ರಂಥದಲ್ಲೂ ಕೂಡಾ. ಹಾಗೇ ಅವರು ಒಂದು ವಿಷಯವನ್ನು ಹತ್ತು ಸಲ ಹೇಳಿದಾಗಲೂ ಹತ್ತುಸಲವೂ ಹತ್ತು ಬಗೆಯ ವಿವರಣೆ. ಅದು ಎಲ್ಲೂ ನಿಲ್ಲದ ವಾಕ್‌ಪ್ರವಾಹ, ಕೆಲವು ಸಲ ಹೀಗಾದದ್ದೂ ಉಂಟು. ಅವರ ಗೀತಾ ಪ್ರವಚನ ನಡೆಯುತ್ತಿದ್ದಾಗ ನಾನೇ ಕಿವಿಯಾರೆ ಕೇಳಿದ ಪ್ರಸಂಗವಿದು. ಪ್ರತಿದಿನವೂ ಬರುತಿದ್ದ ಕೆಲವು ಮಂದಿ ಗೀತಾ ಪ್ರವಚನದ ಕಡೆಯ ದಿನ "ಇದೇನಿದು ಗೀತೆ ಹೇಳ್ತಾರೆ ಅಂತ ಬಂದಿದವನೂ ಹೇಳಲೇ ಇಲ್ಲ, ಯಾವ ಅಧ್ಯಾಯ ಯಾವ ಶ್ಲೋಕ ಒಂದೂ ಗೊತ್ತಾಗಲೇ ಇಲ್ಲ" ಅಂತ ಮಾತನಾಡಿದ್ದು ಕೇಳಿ ನನಗೆ ನಗಬೇಕೋ ಅಳಬೇಕೋ ಗೊತ್ತಾಗಿರಲಿಲ್ಲ.

ಇದರ ಒಟ್ಟು ಅರ್ಥ 'ಬನ್ನಂಜೆ ಬೆಳೆದಷ್ಟು ಅಥವಾ ಅವರು ಸಾಗಿದ ದಾರಿಯಷ್ಟು ನಾವು ಸಾಗಿಲ್ಲ, ಬೆಳೆದಿಲ್ಲ, ಕುರುಡ ಗೋಡೆಗೆ ಡಿಕ್ಕಿ ಹೊಡೆದರೆ ಗೋಡೆಯ ತಪ್ಪಲ್ಲ ಕುರುಡನ ಕುರುಡುತನ ಅಷ್ಟೆ. ಹಾಗೇ ಬನ್ನಂಜೆ ನಮಗೆ ಅರ್ಥ ಆಗದಿದ್ದರೆ ಅದು ನಮ್ಮ ತಪ್ಪು.

ಅವರ ಉಪನ್ಯಾಸಗಳಲ್ಲಿ ಅಗ್ಗದ ಮನರಂಜನೆಯೂ ಇಲ್ಲ. ಅಸಂಗತ ವಿಷಯಗಳ ಜೋಡಣೆಯೂ ಇಲ್ಲ. ಎಲ್ಲವೂ ನೇರ, ಸ್ಪಷ್ಟ, ಸ್ವಚ್ಛ, ಸರಳ. ನಮ್ಮ ದೇಶದ ಸನಾತನ ಸಾಂಸ್ಕೃತಿಕ ಮೌಲ್ಯಗಳನ್ನೂ, ಪ್ರಾಚೀನ ಶಾಸ್ತ್ರಗ್ರಂಥಗಳನ್ನೂ ಈ ಕಾಲದ ಯುವ ಜನಾಂಗಕ್ಕೆ ಹಾಗೂ ಜಿಜ್ಞಾಸುಗಳಿಗೆ ಹೇಳುವ ಕಲೆಯಲ್ಲಿ ಬನ್ನಂಜೆ ಅದ್ವಿತೀಯರು. ಈ ದಿಕ್ಕಿನಲ್ಲಿ ಅವರು ದೇಶ ವಿದೇಶಗಳ ಅನೇಕ ಜಿಜ್ಞಾಸು ವಿದ್ಯಾರ್ಥಿಗಳನ್ನು ಆಕರ್ಷಿಸಿದ್ದಾರೆ.

ಇನ್ನು ಸಾಹಿತ್ಯಿಕ ಬೆಳವಣಿಗೆಯಲ್ಲಿ ಇವರ ಕವನ ಸಂಕಲನಗಳು, ಬಿಡಿಕವನಗಳು, ಅನುವಾದ ಗ್ರಂಥಗಳೂ, ರೂಪಕಗಳೂ (ರೇಡಿಯೋ ನಾಟಕ) ಎಲ್ಲದರ ಬಗ್ಗೆ ಮಾತನಾಡುವ ಬದಲು ಇವರ ಅನುದಾನ ಗ್ರಂಥವಾದ ಬಾಣಭಟ್ಟನ ಕಾದಂಬರಿಯ ಬಗ್ಗೆ ಬೇಂದ್ರೆಯವರು ಆಡಿದ ಮಾತುಗಳನ್ನೆ ಉಲ್ಲೇಖಿಸಿದರೆ ಸರಿಯಾದೀತು: "ಶ್ರೀ ಬನ್ನಂಜೆಯವರ ಕನ್ನಡ ಸಂಸ್ಕೃತ ಅಧ್ಯಯನ ಸಾರ್ಥಕವಾಗಿವೆ. ಅವರಿಂದಾಗಿ ಇಲ್ಲಿಯ ಶೃಂಗಾರವು ಬಯಲ ಬಂಗಾರವಾಗಿದೆ. ಅದ್ಭುತವು ರಮ್ಯವಾಗಿದೆ ವಿಪ್ರಲಂಬವು ಆಸ್ವಾದ್ಯವಾಗಿದೆ. ಈ ತರುಣಕೃತಿಗಾರನಿಂದ ಇದೇ ತೂಕದ ಹೆಚ್ಚಿನ ಪ್ರಬಂಧಗಳು ಬರಲಿ" ಎಂದು.

ಬೇಂದ್ರೆಯವರ ಕಾವ್ಯ ಸೃಷ್ಟಿಯಾದರೋ ಅವರೇ ಹೇಳುತ್ತಿದ್ದ ಹಾಗೆ ಅವು 'ವೈದಿಕ ಕಾವ್ಯಗಳು: ವೈದಿಕ ಆರ್ಷ ದೃಷ್ಟಿಯಿಲ್ಲದೆ ತಮ್ಮ ಕಾವ್ಯ ಯಾರಿಗೂ ಪೂರ್ಣ ಅರ್ಥವಾಗಲಾರದು. ಅಂಬಿಕಾತನಯದತ್ತನನ್ನು ಯಾರೂ ಪೂರ್ತಿಯಾಗಿ ಹಿಡಿದೇ ಇಲ್ಲ ಎನ್ನುತ್ತಿದ್ದ ಬೇಂದ್ರೆಯವರ ಆ ಉನ್ನತಿಕೆಯ ಮಟ್ಟವನ್ನು ಮುಟ್ಟಿ ಅರ್ಥೈಸುವ ಪ್ರಾಮಾಣಿಕ ಪ್ರಯತ್ನವನ್ನು ಅವರ 'ನಾಕು ತಂತಿ'ಯ ಬಗ್ಗೆ ಬನ್ನಂಜೆಯವರು ದಾಖಲಿಸಿರುವುದು ಅರ್ಥೈಸಿರುವುದು ಸಮರ್ಥವಾಗಿದೆ, ಸಮರ್ಪಕವಾಗಿದೆ ಸಾಹಿತ್ಯ ವಲಯದಲ್ಲಿ.

ಕವಿಯಾಗಿ - ಸಾಹಿತಿಯಾಗಿ - ಶ್ರೇಷ್ಟ ವಿದ್ವಾಂಸರಾಗಿ - ಪ್ರವಚನಕಾರರಾಗಿ ಭಾರತೀಯ ಸಂಸ್ಕೃತಿಯ ಮೇಲೆ ಅಧಿಕೃತವಾಗಿ ಮಾತನಾಡಬಲ್ಲ ಹಾಗೂ ಆಧುನಿಕ ಜ್ಞಾನವನ್ನು ವೈದಿಕ ಮತ್ತು ಸಾಂಪ್ರದಾಯಿಕ ಜ್ಞಾನದೊಂದಿಗೆ ಸಮನ್ವಯಗೊಳಿಸಿ ವಿವರಿಸಬಲ್ಲ ಶ್ರೇಷ್ಠವಾಗ್ಮಿ 'ಬನ್ನಂಜೆ.' ಈಗಾಗಲೇ ದೇಶ ವಿದೇಶಗಳಲ್ಲಿ ಅವರ ವಿಚಾರವಾಹಿನಿ ಶಕ್ತಿಶಾಲಿಯಾಗಿ ಪ್ರವಹಿಸುತ್ತಿದೆ. ಜನಮನವನ್ನ ಆಕರ್ಷಿಸುತ್ತಿದೆ.

ಚಿಂತನೆ ಬೆಳೆದ ಹಾಗೆಲ್ಲಾ ಮಾತು ಮಿತವಾಗತ್ತೆ ಮಾತು ಮಿತವಾದಾಗ ಅದು ಬರೀ ಅಕ್ಷರವಾಗಿ ಬಿಡುತ್ತದೆ. (ಬನ್ನಂಜೆಗೆ ಅತಿಪ್ರಿಯವಾದದ್ದು 'ಮೌನ') ಬನ್ನಂಜೆಯವರಿಂದ ನಮಗೀಗ ಬೇಕಾಗಿರುವುದು ಚಿಂತನೆಗೆ ಹಚ್ಚುವ ವೈಚಾರಿಕ ಶಾಸ್ತ್ರಬದ್ಧ ಪ್ರಾಮಾಣಿಕ ಕೃತಿಗಳು.

ಕಡೆಯದಾಗಿ ಅವರದೇ ಮಾತುಗಳಿಂದ ಮುಕ್ತಾಯ:

ಹೊರಕಣ್ಣು ತೆರೆದರೆ ಸಾಲದು
ಒಳಗಣ್ಣು ತೆರೆಯಬೇಕು
ತೆರೆಯಬೇಕೆನ್ನುವುದೂ ಮತ್ತೆ ತಿಳಿಯಬೇಕು
ಸತ್ಯದ ಸ್ಪರ್ಶದಿಂದ ಬದುಕು ತಿಳಿಯಾಗಬೇಕು.

ಸುದ್ದಿಯ ಸುತ್ತ

-ಎಂ. ಮಹ್ಮದ್ ಬಾಪಗೂಳ್ಯಂ

ಗೋಡೆಯ ಕಾಡಲ್ಲಿ ಓಡುತ್ತಿರುವ ಜೇಡ
ಬಳುವಳಿಯ ಬೇಗುದಿಗೆ ಬೆದೆಗೊಂಡಸೂರ್ಯ
ಮೆದುಳಿನ ಬಿಳಿಪದರು ಸರಿಸಿ
ನಳನಳಿಸುತ್ತಿರುವ ಯೋಚನೆ
ಮೆಜೆಸ್ಟಿಕ್ಕಿನ ಮುಂದೆ ರಕ್ತದ ರಂಗಾದ
ವ್ಯಕ್ತಿಯ ಸುತ್ತ ದೂಳು, ಓಡುತ್ತಿರುವ ಜನ
ಉಸಿರಾಡದ ಆತನ ಸೊಳ್ಳೆಗಳ ಸುರಂಗದಲ್ಲಿ
ಸಂಸಾರ ನಡೆಸಲು ಸಾಲುಗಟ್ಟಿದ ನೊಣ!
ಪಕ್ಕದಲ್ಲೇ ಪುಡಿ ಪುಡಿಯಾಗಿ ಬಿದ್ದಿದ್ದ
ಎಳ್ಳುಂಡೆ, ಕರಿಗಡಬು, ಬಿಳಿ ಕರ್ಜಿಕಾಯಿ

"ಹುಡುಗಾ..! ನಿನಗೆ ಹೇಗೆ
ಹೇಳಬೇಕೋ ಗೊತ್ತಾಗ್ತಿಲ್ಲ
ಸಂಜೆ ಸೂರ್ಯನ ಸವಿಗೆಂಪಿನಧರಕ್ಕೆ
ಸವರಿ, ಹುಡಗರಸ್ತರಕ್ಕೆ ಪ್ರೀತಿಯ
ರಸ ಉಕ್ಕಿಸುವ ಹುಡುಗಿಯರ ಬಗ್ಗೆ
ಬರಿ! ಭುಕುಟಿಯಾಗಲಿಸಿ ಆಗಸದ
ಮುಂದೆ ಅನಾಥಶವ; ಎಳ್ಳುಂಡೆ ಕರಿಗಡಬು
ಬಿಳಿಕರ್ಜಿಕಾಯಿ, ಏನಿದೆಲ್ಲ...? ಹುಚ್ಚುಡುಗಾಹೋಗು!

ಮತ್ತದೇ ಅಲೆದಾಟ! ರಕ್ತಾಸುರನ
ಸಂತಾನವಾಗುತ್ತಿರುವ ವಾಹನಗಳು
ಹ್ಲಾದತರದ ಹ್ರಾದ ಹೊಗೆ ಸ್ವಾಶಕೋಶಕನವರಿಕೆ

ಎಂಜಿರೋಡಿನಿಂದ ಬನಶಂಕರಿಯವರೆಗೆ
ಒಂದೇ ಸಮನೆ ಓಡಾಟ ಸುದ್ದಿ ಹೊಸ ಹೊಸ.. ಸುದ್ದಿಗೆ
ಪಕ್ಕದ ಮನೆಯ ಹುಡುಗಿಯ ಹೂನಗೆಗೆ
ಮುದುಕನ ಸಿರಿವಂತಿಕೆಯ ಹೊಲ್ಲ ಮೆಲ್ಲ ಮೆಲ್ಲನೆ
ಮುಚ್ಚಲೆತ್ನಿಸುವ ಮೃತ್ಯುಮುಖ..!

ಆತ್ಮರತಿಯ ಈ ವರದಿಯನ್ನು ಪ್ರೀತಿಯಲ್ಲಿ
ಪರಿಮಳಿಸಲೆತ್ನಿಸಿದಂತೆಲ್ಲ ಪ್ರಪಾತವಾಗಿ
ಹೋದವಳ ಪ್ರಳಯ ಪ್ರತ್ಯಕ್ಷವಾಗುತ್ತದೆ!
ಪ್ರೀತಿಯಲ್ಲಿ ಪ್ರೀತಿ ಇದೆಯೋ... ಬಿಡು ಬಿಡು...!
ಝಗ ಝಗಿಸುವ ಜ್ವಾಲೆಯನಡುವೆ
ರೈತನ ರೋದನ! ಬಡ ಬುರುಖಾದ
ಬೆವರಿಗೆ ಮುದ ತುಂಬಿ ಮುತ್ತಿಟ್ಟ ಮೌಲ್ವಿಯ
ಮತ್ತೆ ಮತ್ತೆ ಮದುವೆ ಬಹುಪರಾಕ್ ತಲಾಖ್...!
ಕೊಲೆಯಾದ ಕ್ರಿಸ್ತ... ಪ್ರಲಾಪಿಸಿದ ಪೈಗಂಬರ
ಮಮ್ಮಲ ಮರುಗಿದ ರಾಮ! ಹರಮಹಾದೇವ
ಹರ ಹರಮಹಾದೇವ ಪಂಜಿನ ಮೆರವಣಿಗೆ...!

ಆತನ ಜೊತೆಗೆ ವಾದಿಸಿ ಪ್ರಯೋಜನವಿಲ್ಲ!
ಪ್ರಲಾಪಿಸುವ ಪೆನ್ನು! ಲೋಹಿಯಾ! ಲೆನಿನ್ನು ಝಿನ್..
ತುಂಬಿದ ಚೀಲ ಹೆಗಲಿಗೆ ಚರ್‌ಪುರ್ ಗುಡುವ ಚಪ್ಪಲಿ ಹಾಗೆ
ಕಾಲಿಗೆ. ಅಳು; ಅತ್ಯಾಚಾರ, ಹಸಿವು ಅಜ್ಞಾನ ಅಂಧಕಾರ
ತುಂಬಿದ ಊರಿಗೆ ಟಕಟಕವಲ್ಲವಿದು... ನನ್ನನಡಿಗೆ
ಸೀಳು ನಕ್ಷತ್ರವಾದ ಸೂರ್ಯವೀರ್ಯ ಬೆಂದಬುವಿ
ಯ ನೊಂದ ಯೋನಿಯೆಡೆಗೆ ಚಿಮ್ಮುತ್ತಿರುವಾಗ
"ಎದ್ದೇಳ್ರಿ.. ಅದೇನ್ ಗೊಣಗ್ತೀರೋ.. ಯಾವುದೋ ಪ್ರೆಸ್
ಮೀಟ್ ಇದೆಯಂದ್ರಲ..." ಮುಖ ತೊಳೆಯಲು ಹೊರಟ
ಮೃದುಮೃದುವಾದ ಕನಸು... ಮತ್ತದೇ
ಸುದ್ದಿಗೆ... ಸುತ್ತಾಟದ ಸುಳಿಯಲ್ಲಿ....!

ಅನುಭಾವಿಗಳು ಕಂಡ ಯಂತ್ರಜಗತ್ತು

❐ ಡಾ॥ ಟಿ. ಗೋವಿಂದರಾಜು

ಇಟಲಿಯಲ್ಲಿ ಪ್ರಾರಂಭವಾಗಿ ಯುರೋಪನ್ನು ವ್ಯಾಪಿಸಿಕೊಂಡ ಪುನರುತ್ಥಾನ ಚಳುವಳಿ, 15ನೇ ಶತಮಾನದಲ್ಲಿ ಮಾನವನ ನಾಗರಿಕ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ಮಹತ್ತರ ಬದಲಾವಣೆಗಳಿಗೆ ಕಾರಣವಾಯಿತು. ಫ್ರೆಂಚರು, ಬ್ರಿಟಿಷರು ಮೊದಲಾದ ವಿದೇಶೀಯರ ವಸಾಹತು ಬದುಕಿನಿಂದ ಭಾರತೀಯ ಬದುಕಿನ ಮೇಲೂ ಪರಿಣಾಮಗಳಾಗತೊಡಗಿದವು. ವಿಶೇಷವಾಗಿ ಬ್ರಿಟಿಷರು ತಮ್ಮ ಹಿತಾಸಕ್ತಿ, ಲಾಭಗಳಿಗಾಗಿ ಯಂತ್ರನಾಗರಿಕತೆಯ ವಿಸ್ತರಣೆಯ ಮೂಲಕ ಇಲ್ಲಿ ದೃಢವಾಗಿ ನೆಲೆನಿಲ್ಲುವ ಪ್ರಯತ್ನ ಮಾಡಿದರು. ಆವರೆಗೆ ಕಂಡು ಕೇಳದ ರೂಪ, ಕಾರ್ಯವೈಖರಿಯ ಯಂತ್ರಗಳು, ವಾಹನಗಳು ಭಾರತೀಯರ ಕಣ್ಣ ಮುಂದೆಯೇ ಪ್ರತ್ಯಕ್ಷವಾಗಿ, ಬೆರಗನ್ನುಂಟು ಮಾಡಿದವು.

ಹೊರಲೋಕ, ಜ್ಞಾನ-ಬದುಕಿಗೆ ಹೆಚ್ಚು ತೆರೆದುಕೊಳ್ಳುವ ಅವಕಾಶದಿಂದ ವಂಚಿತರಾಗಿದ್ದ ನಮ್ಮ ಗ್ರಾಮೀಣ ಜನ ತಮ್ಮ ಮುಂದೆಯೇ ಬಂದ ಹೊಸ ಸಾಧನಗಳಿಗೆ ಹೇಗೆಲ್ಲಾ ಪ್ರತಿಕ್ರಿಯಿಸಿದರೆಂಬುದೇ ಒಂದು ಕುತೂಹಲದ ಅಧ್ಯಯನವಾಗುತ್ತದೆ. ಗೌಡರು 'ಬೀಸೇ ಕಲ್ಲಿನ ಸವಾರಿ' ಮಾಡುವುದನ್ನು ಸುತ್ತಲ ನಾಲ್ಕಾರು ಮೈಲ್ ದೂರದ ಗ್ರಾಮೀಣರು ಬಂದು ನೋಡಿ ಸೋಜಿಗ ಪಟ್ಟುದರ ಸ್ವಾರಸ್ಯದ ವರ್ಣನೆ ಕುವೆಂಪು ಅವರ ಕಾದಂಬರಿಯಲ್ಲಿ ಬರುತ್ತದೆ. 'ಬೈಸ್ಕಪ್ಪು' ನೋಡುತ್ತಿದ್ದಾಗ (ವಿಶಾಲ ಪರದೆಯ ಮೇಲೆ) ನಾಗಾಲೋಟದಿಂದ ಬಂದ ಕುದುರೆದಂಡನ್ನು ಕಂಡು, ಬೆಚ್ಚಿ "ಚಿಕ್ಕೀರಣ್ಣ... ಚಿಕ್ಕೀರಣ್ಣ... ಅಲ್ನೋಡು, ಕುದ್ರೆ ಮ್ಯಾಲೇನೇ ಬಂದೋ... ಓಡು, ಓಡು..." ಎಂದು ಎದ್ದು ಓಡಿದ ಮುನಿಯಣ್ಣ ನಮ್ಮೂರಿನ ಒಬ್ಬ ಮುಗ್ಧನೇ. 'ಕುಟ್ಟುಟ್ಟು ಮೋಟಾರು' ಬಂದರೆ ಭಯ-ಬೆರಗಿನಿಂದ ನೋಡುತ್ತಿದ್ದ ಸ್ಥಿತಿಯಲ್ಲಿ ಬೆಂಗಳೂರಿಗೆ ಕೇವಲ 25 ಮೈಲಿದೂರದ ನಮ್ಮೂರು ಕಳೆದ 30 ವರ್ಷಗಳ ಹಿಂದಿನಲ್ಲಿತ್ತು. 'ಮುಂದೆ ಎತ್ತುಗಳೇ ಕಟ್ಟಿಲ್ಲ; ಈ ಗಾಡಿ (ಬಸ್) ಹೆಂಗೋಗ್ತದೆ...?' ಎಂದು ಕೇಳಿದವರೂ ಇಲ್ಲಿದ್ದರು.

ಇಂಥಾ ಏನೆಲ್ಲಾ ಅದ್ಭುತಗಳನ್ನು ತಮ್ಮ ನಾಡಿಗೆ ಬ್ರಿಟಿಷರು ತಂದರೂ, ತಮ್ಮ ಸ್ವಾತಂತ್ರ್ಯ ಸ್ವಾಭಿಮಾನದ ಉಳಿಯುವಿಕೆ ಅತಿ ಮುಖ್ಯವೆಂದು ನಂಬಿದ ಜನ ಇಡೀ ದೇಶದ ಉದ್ದಗಲಕ್ಕೆ ಬ್ರಿಟಿಷರ ವಿರುದ್ಧ ಚಳವಳಿ ಹೂಡಿದ್ದರು.

ಆ ಕಡೆ ಜನ ಬ್ರಿಟಿಷರನ್ನು ನೇರವಾಗಿ ವಿರೋಧಿಸುವಲ್ಲಿ ಮುಂದಾಗಿದ್ದರೆ, ಅದೇ ಸಂದರ್ಭದಲ್ಲಿ ನಮ್ಮ ದೇಸೀ ಚಿಂತನೆಯ ಅನುಭಾವಿಗಳು (ತತ್ವ ಪದಕಾರರು) 'ತಾತ್ವಿಕ'ವಾಗಿ ಸೃಜನಶೀಲನೆಯಲ್ಲಿ ಬ್ರಿಟಿಷರಿಗೆ ಪ್ರತಿಕ್ರಿಯಿಸತೊಡಗಿದ್ದದ್ದು ಕಂಡು ಬರುತ್ತದೆ. ಈ ಪ್ರತಿಕ್ರಿಯೆ ಎರಡು ಮಾದರಿಯಲ್ಲಿದ್ದಂತೆ ಕಾಣಬರುತ್ತದೆ.

ಇವುಗಳಲ್ಲಿ ಮೊದಲ ಮಾದರಿ ಎಂದರೆ ತಾವು ಕಂಡ ವಿನೂತನ ಸಾಧನಗಳ ಬಗ್ಗೆ ಬೆರಗಿನ ಪ್ರತಿಕ್ರಿಯೆಯಾಗಿ ಲಾವಣಿ ಮಾದರಿಯ ಆಶುಕವಿತ್ವ ರಚನೆ ಮಾಡಿರುವುದು. ಇದರಲ್ಲಿ 'ಬ್ರಿಟಿಷರ' ಚಮತ್ಕಾರ ಪ್ರತಿಭೆಯ ಪ್ರಶಂಸೆಯೂ ಇರುತ್ತದೆ. ಈ ಸಂಬಂಧ ಲಭ್ಯವಿರುವ ಎರಡು ನಿದರ್ಶನಗಳನ್ನು-ಅಪ್ರಕಟಿತ-ಇಲ್ಲಿ ಸಾರ್ವತ್ರಿಕ ಅವಗಾಹನೆ, ಅಧ್ಯಯನಕ್ಕೆ ಪ್ರಸ್ತುತ ಪಡಿಸಲಾಗುತ್ತಿದೆ. ಅವುಗಳಲ್ಲಿ ಒಂದು -'ಬೈಸ್ಕಲ್ ಲಾವಣಿ' ಎಂಬ ಶೀರ್ಷಿಕೆಯ ರಚನೆ. ಅದರ ಪೂರ್ಣಪಾಠ ಹೀಗಿದೆ:

"ಬೈಸ್ಕಲ್, ಬೈಸ್ಕಲ್ ಕಾಲ ತಪ್ಪಿದ ಮೇಲೆ ಪೈಸಲ್
ಬೈಸ್ಕಲೆಂಬುದು ಅಂದ ಅದು ಹೋಗೋದು ಬಹು ಅಂದ
ಸವಾರಿ ಮಾಡಲು ಬರದವಗೆ ಅದನೆತ್ತಲು ಬಹುಭಂಗ
ಕೈ ತಪ್ಪಿ ಬಿದ್ದರೆ ಸಾಕಪ್ಪಾ ಸಾಕು
ಬೈಸ್ಕಲ್ ಕೈ ತಿರುಗಿಸಬೇಕು ಕಾಲಾಡಿಸಬೇಕು
ಕೈಕಾಲ್ ತಪ್ಪಲು ಬಲುಮೋಸ ಅದಕ್ಕಾಗಾಕ್ಕೆ
ಕೊಡಬೇಕು ಕಾಸ ಬೈಸ್ಕಲ್..

ದುಂಡಿನ ಚಕ್ರವು ವುಂಡಾಡುತ ಪೋಪುದು
ಚರಂಡಿಯೋಳ್ ಬಿದ್ದರೆ ಮಂಡಿ ಮುರಿಯೋದು

ಬಾಟಾರಸ್ತೆಯೊಳೋಟದಿ ವೋಡುತ
ತಾಟಿಸಿ ಬಿದ್ದರೆ ಕಾಟವೆ ತೀರಿತು
ಹತ್ತಲು ಭಂಗ ಇಳಿಯಲು ಭಂಗ
ಜೋರೊಳು ಬಿಟ್ಟರೆ ದಾರಿಲೇ ಭಂಗ ಬೈಸ್ಕಲ್..."

ಇನ್ನೊಂದು "ಮೋಟಾರ್ ಗಾಡಿ ಲಾವಣಿ" ಶೀರ್ಷಿಕೆ ರಚನೆ ಅದು ಹೀಗಿದೆ:

"ಮೋಟರ ನೋಡ್ಯೆ ಮೋಟಾರ್ ಗಾಡಿಯು
ಇದೇ ದೇವತ ವಿಮಾನವೂ
ಬಿಟ್ಟರೆ ಘಂಟೆಗೆ ಯಪ್ಪತ್ಮೈಲಿ ಪೋಗೊದೆ ನಿದಾನಾ

ಜಲಹಗ್ನಿಯಿಂದಲೇ ಜರುಗುತಲಿರ್ಪುದು
ವಾಯುವಿಗೆ ಸಮಾನಾ

ಥಳಥಳಯೆನುತ ಹೊಳೆಯುತಲಿರ್ಪುದು
ಇದಕ್ಕಾಕಿರುವ ತಗಡು, ಗಾಜು ಮೋಟರ ನೋಡ್ಶೈ...

ನೋಡಲಚ್ಚರಿಯು ಕೂಡಲಾನಂದವು
ಶಹಬ್ಬಾಸ್ ಯಾರಿಲ್ಲ ಇದಮಾಡಿದ ಆಂಗ್ಲರ ಸಮಾನಾ

ರಬ್ಬರ್ ಸಾಯದಿ ಕಬ್ಬಿಣದಿಂದ ಮಾಡಿಹ ಯಂತ್ರ ವಿಧಾನಾ
ಅಬ್ಬಬ್ಬಾ ಇದು ಒಂದು ಯುಕ್ತಿ ಸಂದಾನಾ ಮೋಟರ ನೋಡ್ಶೈ

ಬರುತಲಿ ಇರುವ ಭರದಲಿ ಧೂಳು
ಏರುತಲಿರ್ಪುದು ಗಗನದ ಪರಿಯೂ
ಅಜ ಸುರ ದಿಕ್ಪಾಲಕರೆಲ್ಲರು ನೋಡಲಚ್ಚರಿ
ವೈಕರಿಯೂ ಮೋಟರ ನೋಡ್ಶೈ...

ನಿಂತಕಡೆಯಲಿ ಅದುರುತಲಿರ್ಪುದು
ಅಶ್ವ ಪಕ್ಷಿ ಸಮಾನಾ
ದಾರಿಲಿ ಬರುವರ ದೂರದಿಕಂಡು
ಕೂಗುತಲಿರ್ಪುದು ಪೋಗೆಂದು
ದಾರಿಯಬಿಟ್ಟು ಪೋಗದೆಯಿರಲು
ತೀರಿಸುವುದು ಪ್ರಾಣಕೊಂದು ಮೋಟರ ನೋಡ್ಶೈ..."

ಈ ಲಾವಣಿಗಳ ರಚನಾಕಾರರಾರೆಂದು ತಿಳಿದುಬಂದಿಲ್ಲ. ಈ ಎರಡೂ ರಚನೆಗಳು ಪ್ರಾಚೀನ ತತ್ವ ಪದಗಳ ಒಂದು ಹಸ್ತಪ್ರತಿಯಲ್ಲಿ ಲಿಖಿತವಾಗಿರುವುದು ಕಂಡುಬಂದಿದೆ. ಕಾಗದದ ಮೇಲೆ ರಾಗಿಮಸಿಯಲ್ಲಿ ಬರೆದಿರಬಹುದಾದ ಈ ಕೈಬರಹದ ಸಂಗ್ರಹದ ಪ್ರಾರಂಭದಲ್ಲಿ –"ಸನ್ 1918ನೇ ಇಸ್ವಿ ಜುಲೈ ತಾರೀಖು 25ರಲ್ಲು ಬುಕ್ಕಿಗೆ ತತ್ವಗಳು ಬರೆಯುವುದಕ್ಕೆ ಶುಭಮಸ್ತು. ಪಂಚ-ಭಾಷೆ: ಕಲ್ಯಾಣಪುರಿ ತತ್ವಗಳು:" ಎಂಬುದಾಗಿ ಒಕ್ಕಣೆಯಿದೆ.

ಆನಂತರ 'ಗಣಸ್ತುತಿ' (ಗಜಾನನಂ...) ಯಿಂದ ಪ್ರಾರಂಭವಾಗಿ "ಶ್ರೀಕೃಷ್ಣನು ಗೊಲ್ಲನಾರಿಯನ್ನು ಕೆಡಿಸಿದ ಲಾವಣಿ" ಎಂಬ ದೀರ್ಘಗೀತೆ, ಕೆಲವು ತತ್ವಪದಗಳು, ಕೀರ್ತನೆಗಳು ಮೊದಲಾದ ರಚನೆಗಳು ಸಂಕಲಿತವಾಗಿವೆ. ಇವುಗಳಲ್ಲಿ ಕೆಲವು ಕನಕ, ಪುರಂದರರ ಕೀರ್ತನೆಗಳೂ ಇವೆ."ಅರಸಿಕೆರೆ ಬಸವನ" ಅಂಕಿತವಿರುವ ಒಂದು ತತ್ವಪದವೂ ಇದೆ. (ಈತ ಅಪ್ರಕಟಿತ ಕೀರ್ತನಕಾರ ಇದ್ದಿರಬಹುದು. ಈತ ಶತಕ ಬರೆದದ್ದರ ಸೂಚನೆ" ಕ್ಷಿತಿಯೊಳರಸಿಕೆರೆ ಬಸವನ ಶತಕವನುನೆಸದೆ..." ಎಂಬ ಮಾತಿನಲ್ಲಿ ದೊರೆಯುತ್ತದೆ)

'ಮಠ'ಕ್ಕೆ ಸೇರಿ ಗುರುದೀಕ್ಷೆ ಪಡೆದ ತತ್ವಪದ ಹಾಡುಗಾರರು ತಮ್ಮ ಹಾಡುಗಾರಿಕೆ ಸಹಾಯಕ್ಕಾಗಿ ಹೀಗೆ ವಿವಿಧ ಹಾಡುಗಳನ್ನು ಬರೆದಿಟ್ಟುಕೊಳ್ಳುವ ನಡವಳಿ ಉಂಟು. ಶಿವಗಂಗೆ ತಪ್ಪಲಿನ ಭೈರಸಂದ್ರಹಳ್ಳಿಯ ನನ್ನ ತಾತ ದಿವಂಗತ ಹನುಮಂತಯ್ಯ ಅವರೂ ಇಂತಹ 'ಮಂಡಲಿ' ಸೇರಿದವರಾಗಿದ್ದು, ಅವರ ಸಂಗ್ರಹದ ಕೆಲ ಕೈಬರಹದ ಪುಸ್ತಿಕೆಗಳನ್ನು ನನ್ನ ಅಜ್ಜಿ ನನಗೆ ನೀಡಿದ್ದರು. ಅವುಗಳಲ್ಲಿ ಒಂದು ಈ ಹಸ್ತಪ್ರತಿ. ಉಲ್ಲೇಖಿತ ದಿನಾಂಕದಲ್ಲಿ ವಿವಿಧ ಮೂಲದ ಈ ಹಾಡುಗಳನ್ನು ಈ ಪುಸ್ತಕದಲ್ಲಿ ನಕಲು ಮಾಡಲು ಪ್ರಾರಂಭಿಸಿದ್ದಿರಬಹುದು. ಅಂದರೆ, 1918ಕ್ಕೆ ಮುಂಚೆಯೇ ಈ ಹಾಡುಗಳು ರಚಿತವಾಗಿ, ಜನರಲ್ಲಿ ಬಹುಜನ ಪ್ರಿಯವಾಗಿದ್ದಿರಬಹುದೆಂದು ಊಹಿಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಸು. 100 ವರ್ಷಗಳ ಹಿಂದೆ ಈ ಶತಮಾನದ ಆದಿಯಲ್ಲಿ-ತಾನು ಕಂಡ 'ಬೈಸಿಕಲ್' ಹಾಗೂ 'ಮೋಟಾರ್ ಗಾಡಿ'ಗಳೆಂಬ ಚಮತ್ಕಾರೀ ವಾಹನಗಳ ಬಗ್ಗೆ ಲಾವಣಿಕಾರ ಬೆರಗಾಗಿ ವರ್ಣಿಸಿದ್ದಾನೆ. ಈ ಎರಡೂ ಒಬ್ಬನವೇ ರಚನೆ ಇದ್ದಿರಬಹುದಾದರೂ 'ಬೈಸಿಕಲ್' ಲಾವಣಿಗಿಂತ 'ಮೋಟಾರ್' ಲಾವಣಿ ಹೆಚ್ಚು ರಂಜನೀಯವಾಗಿದೆ.

ಈ ರೀತಿಯ ಹೊಸ ಆವಿಷ್ಕಾರಗಳಿಗೆ ಸಮಕಾಲೀನ ಕವಿಗಳು ತೋರಿದ ಇನ್ನೊಂದು ಮಾದರಿಯಾಗಿ ಖ್ಯಾತ ಅನುಭಾವಿ ಕವಿ-ತತ್ವಪದ ರಚನೆಕಾರ-ಶಿಶುನಾಳ ಶರೀಫ ಸಾಹೇಬರ "ಗೀರಣಿ ವಿಸ್ತಾರ ನೋಡಮ್ಮಾ" ಎಂಬ ಗೀತೆ ಉತ್ತಮ ನಿದರ್ಶನವಾಗುತ್ತದೆ. ಕ್ರಿ.ಶ. 1819 ರಿಂದ 1889ರ ವರೆಗೆ ಜೀವಿಸಿದ್ದ ಈ ಸಂತ ಧಾರವಾಡ ಜಿಲ್ಲೆಯ ಶಿಶುವಿನಾಳದಲ್ಲಿ ಹುಟ್ಟಿ ಬಾಳಿದವನೆಂದು ತಿಳಿದುಬಂದಿದೆ.

ಹುಬ್ಬಳ್ಳಿಯಲ್ಲಿ ಪ್ರಾರಂಭವಾದ ದೊಡ್ಡ ನೂಲಿನ ಗಿರಣಿ (ಕಾರ್ಖಾನೆ) ಆ ಪ್ರಾಂತ್ಯದ ಜನರಿಗೆ ಒಂದು ಅದ್ಭುತ-ಆಕರ್ಷಣೆಯ-ಕೇಂದ್ರವಾಗಿದ್ದಲ್ಲಿ ಆಶ್ಚರ್ಯವಿಲ್ಲ. ಆ ವಿಸ್ತಾರವಾದ ಕಟ್ಟಡ, ನಡುವೆ ಆಕಾಶಕ್ಕೂ ಭೂಮಿಗೂ ಒಂದೇ ಎಂಬಂತೆ ಬೃಹತ್ತಾಗಿ ತಲೆ ಎತ್ತಿ ನಿಂತ ಹೊಗಿಕೊಳವಿ, ಕಾರ್ಖಾನೆಯೊಳಗೆ ಏನೇನೋ ಆಕಾರದ ಯಂತ್ರಗಳು, ತಿರುಗುವ ಚಕ್ರಗಳು, ನೋಡು ನೋಡುತ್ತಿದ್ದಂತೆ ಕಚ್ಚಾ ಅರಳೆ ಹಿಂಜಿ ಹಿಂಜಿ, ನೂಲಾಗಿ, ಒಂದೇ ನಮೂನೆಯ ಥಾನುಥಾನು ಬಟ್ಟೆಯಾಗಿ ಹೊರಬರುವ ಆ ಚಮತ್ಕಾರ ಸಾಮಾನ್ಯ ಜನರಿಗೆ ಕೇವಲ

ಕುತೂಹಲದ, ಅಚ್ಚರಿಯ ಒಂದು ಸಂಗತಿಯಾಗಿ ಅಷ್ಟೇ ಉಳಿದರೆ ದಾರ್ಶನಿಕ ಶರೀಫನಿಗೆ ಸೃಷ್ಟಿಯ ಇನ್ನೊಂದು ಮಹದಚ್ಚರಿ ತಕ್ಷಣ ಹೋಲಿಕೆಯಾಗಿ ಕಣ್ಣ ಮುಂದೆ ಸುಳಿಯುತ್ತದೆ! ಯಾವುದದು? ಶರೀಫನ ಈ 'ಗಿರಣಿ ಹಾಡು' ಓದಿ:

"ಗಿರಣಿ ವಿಸ್ತಾರ ನೋಡಮ್ಮ ಇದಕೆ
ಪರಾಕು ಮಾಡಮ್ಮ ॥ ಪ ॥

ಧರಣೀಪತಿ ಮಹಾರಾಣಿ ದೊರೆಗಳು
ಕರ್ನಾಟಕ ರಾಜ್ಯದಿ
ಮೆರೆಸಿದ ಮಹಾ ಚೋದ್ಯವಿದ್ಯ ಅರಿಯದಾಯಿತು
ನರರಿಗೆಲ್ಲಾ । ಅ.ಪ ।

ಜಲ ಅಗ್ನಿ ವಾಯು ಒಂದಾಗಿ
ಕಲೆತು ಚಂದಾಗಿ
ಜಲ ಅಗ್ನಿ ವಾಯು ಒಂದಾಗಿ
ನೆಲದಿಂದ ಗಗನಕ್ಕೆ ಮುಟ್ಟದಂತೆ ಕಾಂಬುದು ॥೧॥
ಚಲುವ ಮಧ್ಯದ ಕಂಬವೊ, ಹೊಗಿ ಬಿಂಬವೊ

ಒಳಗೊಂದು ಬೇರೆ ಆಕಾರ
ತಿಳಕೋ ಚಮತ್ಕಾರ
ಒಳಗೊಂದು ಬೇರೆ ಆಕಾರ
ದಳಗಳೊಂಬತ್ತು ಚಕ್ರ ಸುಳಿವ ಸೂತ್ರವ ದಾರದಲ್ಲಿ
ಒಳಗೆ ಹೊರಗೆ ನವ ಕೊಳಿವೆಯೋ ಇದರೊಳಿವೆಯೋ ॥೨॥

ಆಲಿಯೊಳಿಟ್ಟರಳಿ ಹಿಂಜ
ಅಲ್ಲಾದವೋ ಹಂಜಿ
ಆಲಿಯೊಳಿಟ್ಟರಳಿ ಹಿಂಜಿ
ಗಾಲಿಯೊಂದರ ಮೇಲೆ ಬ್ರಹ್ಮದ ಕೀಲ
ಮೂಲ ಸುಷುಮ್ನದಲಿ ಜೋಲು ತಿರುವುದು ನಾಡಿ
ಅಲ್ಲಾಯ್ತು ಕುಕ್ಕಡಿ ॥೩॥

ಪರಬೊಮ್ಮನ ಪಟ್ಟವೊ ಅಲ್ಲೆ
ಪ್ರಾಣವನು ಮರೆವೆಟ್ಟವೊ
ಪರಬೊಮ್ಮನ ಪಟ್ಟವೊ
ಧರಣೀಲಿ ಶಿಶುವಿನಾಳ ದೇವಾಂಗ ಋಷಿಯಿಂದ
ನೇಸಿ ಹಚ್ಚಡ ಹೊಚ್ಚಿತೋ ಲೋಕವೆಲ್ಲಾ ಮೆಚ್ಚಿತೊ ॥೪॥

ಮೇಲುನೋಟಕ್ಕೆ ಈ ಕವಿತೆ ಹತ್ತಿಗಿರಣಿಯ ಅದ್ಭುತಗಳ ಒಂದು ಚಿತ್ರಣದಂತೆ ಕಂಡರೂ ಕವಿಯ ನುಡಿ ಎಳೆಗಳಲ್ಲಿ ಇಲ್ಲಿನ ಪ್ರತಿಯೊಂದು ವಿವರಗಳಿಗೆ ತಾತ್ವಿಕ ಅರ್ಥ, ಆಧ್ಯಾತ್ಮದ ಮೆರುಗು ಇರುವುದೂ ನಮ್ಮ ಅರಿವಿಗೆ ಬರುತ್ತದೆ. ಹಾಗಾಗಿ ಒಟ್ಟು ಕವಿತೆ ಪರಮಾರ್ಥ ಚಿಂತನೆಯ ಪ್ರತಿಮೆಯಾಗುತ್ತದೆ.

ಕಚ್ಚಾ ಅರಳೆ ನೂಲಾಗುವ, ನೂಲು ವಸ್ತ್ರವಾಗುವ ಈ ಯಂತ್ರದ ಕಾರ್ಯವೈಖರಿ ಅಚ್ಚರಿ ಎನಿಸಿದರೂ, ಅದಕ್ಕಿಂತ ಪರಬ್ರಹ್ಮನು ನೇಯುವ ಈ ದೇಹವೆಂಬ ವಸ್ತ್ರ ಅತಿ ಅದ್ಭುತ ಎಂದು ಕವಿ ಪರಿಭಾವಿಸುತ್ತಾನೆ. ನೂಲಿನ ಕಾರ್ಖಾನೆಯೂ ಗಾಳಿ, ನೀನು, ಬೆಂಕಿ (ಶಕ್ತಿ) ಯಂತಹ ಪಂಚಭೂತಗಳನ್ನು ಬಳಸಿಕೊಂಡು ಕಾರ್ಯನಿರ್ವಹಿಸುತ್ತದೆ. ಬ್ರಹ್ಮನಿಂದ ಸೃಷ್ಟಿಯಾದ ಈ ಶರೀರವೆಂಬ ಯಂತ್ರವೂ ಪಂಚಭೂತಗಳನ್ನು ಯುಕ್ತವಾಗಿ ಬಳಸಿಕೊಂಡೇ ನಿರ್ಮಿತವಾಗಿದೆ. ಮುಖ್ಯ ವ್ಯತ್ಯಾಸವೆಂದರೆ- ಕಾರ್ಖಾನೆಯಲ್ಲಿ ಸಿದ್ಧವಾದ ಬಟ್ಟೆ ಎಷ್ಟೇ ಸುಂದರವಾಗಿದ್ದರೂ ಅದಕ್ಕೆ ಜೀವವಿಲ್ಲ, ಆದರೆ, ದೇವಾಂಗ ಋಷಿಯಿಂದ ಸೃಷ್ಟಿಯಾದ ಈ ದೇಹವೆಂಬ ಬಟ್ಟೆಗೆ ಜೀವ, ಜ್ಞಾನ ಎರಡೂ ಇವೆ! ಇವನ ಈ ಅದ್ಭುತ ನಿರ್ಮಿತಿಯನ್ನು ಲೋಕವೇ ಮೆಚ್ಚಿದೆ.

ಹೀಗೆನ್ನುವಾಗಲೂ ಒಂದು ಸೂಕ್ಷ್ಮವನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಭಕ್ತಿ ಪಂಥದ ಎಲ್ಲ ಭಕ್ತ ಕವಿಗಳ ಹಾಗೆ ಇಲ್ಲಿ ಶಿಶುನಾಳರೂ ದೈವೀ ಸಾಮರ್ಥ್ಯವನ್ನು, ಅವನ ಅನನ್ಯತೆಯನ್ನು ಕೊಂಡಾಡಿದ್ದಾರೆ- ಎಂದು ಮೊದಲ ಓದಿಗೆ ಅನ್ನಿಸಬಹುದಾದರೂ, ಅಂತರ್ಯದ ಪದರುಗಳಿಗೆ, ಚಾರಿತ್ರಿಕ ಸಂದರ್ಭದ ಹಿನ್ನೆಲೆಯಲ್ಲಿ ಇಳಿದು ನೋಡಿದಾಗ ಅದು 'ಧರಣಿಪತಿ ಮಹಾರಾಣಿ'ಯಾಗಿ ಬೀಗುತ್ತಿರುವ ಬ್ರಿಟಿಷ್ ಚಕ್ರಾಧಿಪತ್ಯದ 'ಅಹಂ'ಗೆ ಒಡ್ಡಿದ ಪಾರಮಾರ್ಥಿಕ ನೆಲೆಯ ಸವಾಲು ಎಂದೂ ಗ್ರಹಿಸಲು ಸಾಧ್ಯವಿದೆ.

ಹೀಗೆ, ಹೊಸ ಶತಮಾನ, ಸಹಸ್ರಮಾನಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಕ್ರಮಿಸಿದ ಶತಮಾನದಲ್ಲಿ ಆದ ಯಾಂತ್ರಿಕ ಬೆಳವಣಿಗೆಗಳಿಗೆ ನಮ್ಮ ಜನಪದರು, ಅನುಭಾವಿಗಳು ಹೇಗೆ ಪ್ರತಿಕ್ರಿಯಿಸಿದರು ಎಂಬುದು ದಾಖಲೆಗೆ ಅರ್ಹವಾಗುತ್ತದೆ.

ಮರು ಜೇವಣಿ

-ಎಸ್. ಜಿ. ಸಿದ್ಧರಾಮಯ್ಯ

ಸಿದ್ಧರಾಮಯ್ಯನವರ ಈ 'ಮರು ಜೇವಣಿ' ದೀರ್ಘ ಕವನವನ್ನು
ವಿಶೇಷ ಕವನವಾಗಿ ಪ್ರಕಟಿಸುತ್ತಿದ್ದೇವೆ.
ಈ ಕವನ ನನಗೆ ತುಂಬ ಇಷ್ಟವಾಯಿತು. ಸಂ.

ಕರಿಕಲ್ಲು ದೊಣೆಸಾಲು ಹುಲಿಗವಿಯ
ತ್ರಬಸಿ ಗುಡ್ಡಗಳಲ್ಲಿ ಎಲ್ಲೆಂದರಲ್ಲಲ್ಲಿ
ಎಂತದೋ ಗೊಂಬೆ ಮಾಡಿ
ಓಚಯ್ಯ ಓಚಯ್ಯ ಎಂದು ಹಾಡಿ
ಹಗಲೂ ಇರುಳೂ ತಿನ್ನುಣ್ಣೋದ ಮರೆತು
ಏನು ಕಲಿಕೆಯೊ ಶಿವನೆ

ಗಾಳಿ ಸುಯ್ಯಲಿನಲ್ಲಿ ಗುರುತು ಹಚ್ಚುವ ಜಾಡು
ಕಣೆ ತುದಿಯ ಸಂಚಿನಲಿ
ಮಿಂಚಿ ಹೊಂಚುವ ಕಣ್ಣು
ಹುಲಿಸಿಂಹ ಕಾಡಾನೆ ಕಡವೆ ಕೋಣಗಳೇನು
ಯಾವ ದನಿಗೂ ಕಿವಿಯೆ
ಕೂನು ಕುಂದ್ರಿನ ಜಾಣು

ಅವರಪ್ಪ ಆವನಜ್ಜ ಅಜ್ಜನಜ್ಜನ ಸಾಲು
ಒಬ್ಬರೊಬ್ಬರ ಮೀರಿಸಿದ ಬಿಲ್ಲುಗಾರರೆ ಎಲ್ಲ
ಬಳಿಸಾಲಿನಲಿ ಇವರೆಲ್ಲರನು ಮೀರಿಸಿದ
ಎದೆಗಾರ ನನಕಂದ

ಜಿಂಕೆ ಮಿಂಚಿನ ಓಟ
ಹುಲಿಯ ಗರ್ಜನೆಯಾಟ
ಕೊಂಬು ಕೂಗಿನ ವೇಗ
ಮಿಗಿಲೆನಿಸಿದಾವೇಗ ಕಣೆಯ ವೇಗ

ಎಲ್ಲ ಕಲಿತನು ಹೇಗೆ?
ನೀರೊಳಗಿನಾ ಮೀನು
ಕೇಳಿದರದೊಂದೆ ನುಡಿ
'ಓಚಯ್ಯನಾ ದಯೆಯು
ಓಚಯ್ಯನಾ ಕರುಣೆ'

ದಿಕ್ಕು ದಿಕ್ಕಿನ ಕಿಬ್ಬಿ ಬಾರೆಗಳಲ್ಲಿ
ಅರೆಮೇಲೆ ತರುವಿನಡಿ ಹಳುವು ಸರುವುಗಳಲ್ಲಿ
ಮಣ್ಣಗೊಂಬೆ ಕಲ್ಲಗೊಂಬೆ ಬಚ್ಚನೆಗೊಂಬೆ

ಮನೆದೈವ ಬೆಟ್ಟಪ್ಪನೆಂದಿದ್ದೆ
ಬಳಿಯ ಕಾವಲ ದೈವ ನಂಬಿ ಕೆಟ್ಟವರಿಲ್ಲ

ಬಳಿಸಾಲ ದೈವದಿಂಡಿರಿಗೆಲ್ಲ
ಮುಟ್ಟು ಚಿಟ್ಟನು ಮಾಡಿ
ಎಂತು ಬಂದಿತೊ ಶಿವನೆ
ಆ ನಾಡ ನರದೈವ?

ಬಳಿಗೆ ತಲೆಮಣಿಯಾಗಿ ಕಳ್ಳುಬಳ್ಳಿ
ಯ ಸೋಲು ಕಾಣದ ಜಲುಮ
ಈ ಮಲೆಕುಡಿಯ ಎದೆ ಧರುಮ

ಬಳಿದೈವ ಬೆಟ್ಟಪ್ಪ ಮುಟ್ಟುಚಿಟ್ಟಿಗೆ
ತಪ್ಪು ದಂಡವನ್ನೊಪ್ಪಿಸುವೆ ನನ್ನಪ್ಪ
ಉಘೆ ಉಘೇ ಮಾಸ್ವಾಮಿ
ಮುನಿಯದಿರು ಕುಲದ ದೀವಿಗೆ ಬೆಳಗು

ನೆಲವು ಹರಿದು ಮಡಕೆ ಒಡೆದಾ ಹೆಪ್ಪು
ಗೂಡ ಸೂಡಿದ ಕಿಚ್ಚು
ಬಡಿದೆಬ್ಬಿಸಿದೆ ಕಾಡಿ ಬಲಗಣ್ಣು ಹಾರಿ

ಬಳಿಯ ಬಲಸಿರಿ ತಂದೆ
ಕುಲದೇವಿ ಬಂದವ್ವ
ಹುಲಿಹಾವು ನರಿಹಂದಿ
ಅಡವಿ ಜಂತುಗಳೆಲ್ಲ
ಕಾಡೊಡಲ ಕಳ್ಳುಬಳ್ಳಿಯ ಸದರ

ನಾಡ ನಡುವಿನ ನರದೈವವಂತೆ
ನನ್ನೊಡಲ ಕುಡಿಯ ನಿಷ್ಠೆಗೆಲ್ಲಿಯ ಅನಿಷ್ಠ

ಕುಡಿಕೆ ಉಪ್ಪಿಗೆ ಹುಟ್ಟಿಗಟ್ಟಲೆ ಜೇನು
ತುಂಡು ಅರಿಬೆಗೆ ಬುಟ್ಟಿಗಟ್ಟಲೆ ಮೆಣಸು
ಬಾಚಿಕೊಳ್ಳುವ ನಾಡು ನಾಚುಗೇಡಿನ ಬೀಡು

ಮುಂಜಾಲೆ ಹೋದವನು
ನೆತ್ತಿ ಕಾಯುವ ಹೊತ್ತು ಮತ್ತೆಲ್ಲಿ ಮರೆಯಾದ
ಕರಿಕಲ್ಲು ಹೊಳೆಸಾಲು ಹುಲಿಗವಿಯ
ಹೊಕ್ಕು ಬಂದರು ಸಿಕ್ಕ

ಹತ್ತತ್ತಿ ಗುಡ್ಡ ಇಳಿದಿಳಿದು ಕಣಿವೆ
ಕೈಕಾಲು ಸೋತು ಹೋದು
ಹುಡು ಹುಡುಕಿದಂತೆ ಕರಿನೆರಳ ಬಣ್ಣ
ಕಣ್ಣೆಲ್ಲ ಬೆಳ್ಳಗಾದೋ

ಕಿಚ್ಚಾಗಿ ಕನಸು ಸುಡುತಿರುವುದೆನ್ನ
ಎದೆಯೊಳ ತುಂಬ ಕರಿನೆರಳ ಭಯವೋ

ಯಾರಲ್ಲಿ ದೂರ ಆ ಬಂಡೆ ತೀರ
ಮುಗಿಲತ್ತ ಮುಖದ ಮುನಿಯೋ?
ಏನೆಂಥ ಮಾಟ ಅಲ್ಲಲ್ಲೆ ಬದಿಗೆ
ಮರಿಸಿಂಗದಾಟ ನೋಟ

ಹಸಿವಿನಾತುರದಲ್ಲಿ ಬಲವೊಂದೆ ಗೆಲುವು
ಮಿಕ್ಕಂತೆ ಎಲ್ಲ
ಉಂಟಲ್ಲಿ ಒಲವು ನಂಟಲ್ಲಿ ಜಲವು
ಇದು ನಮ್ಮ ಅಡವಿಯಾ ನಿಯತಿ

ಮುಗಿಲತ್ತ ಮುಖದ ಮುನಿಯೇಕೆ ಎದ್ದ
ಬರುತಿರುವನಲ್ಲ ಇತ್ತ
ಅಲ್ಲಲ್ಲಿ ಅವನು ಮುನಿಯಲ್ಲ ಅಲ್ಲ
ನನ್ನೊಡಲ ಕುಡಿಯ ನಡೆಯೆ

ಅರೆರೆ ಬೀಸುಗೈಯ್ಯಲಿ ಅರೆಯಿಂದ
ಅರೆಗೆ ನೆಗೆದು ಕುಪ್ಪಳಿಸುತ್ತ
ಕಾಕು ದನಿಯಲಿ ಓಡಿ ಅಬ್ಬೆ ಅಚ್ಚಿ
ಎನುತ ತಬ್ಬಿ ಹಿಡಿಯುವ ಕಂದ

ಗೂಡು ಮೈಲಿಗೆಯಲ್ಲಿ ಗುಬ್ಬಿಮರಿ
ಬೆದರಿ ಜಿಂಕೆಗೊಂಡಾ ಗತಿಯು
ಅಡವಿಗೇ ಎರವಾದ
ಅಡ್ಡತಿಡ್ಡದ ನಡೆಯು

ಅಯ್ಯಯ್ಯೊ ನನಕಂದ
ಏನು ಬೇಗುದಿ ಬೇಗೆ?
ಕನಸ ಕಳವಳದಲ್ಲಿ ಶಂಕೆ
ಬೆಂಕಿಯದಾಯ್ತು

ಬಿಲ್ಲಂಬು ಬತ್ತಳಿಕೆ ಎಲ್ಲಿ
ಬಿಟ್ಟಿಯೋ ಕಂದ?
ಬಳಿದೈವ ಬೆಟ್ಟಪ್ಪ
ಕರುಳಕುಡಿ ಕಾಯಪ್ಪ

ಎಲೆಕೂಸೆ ಎನ್ನಪ್ಪ ಏನಾಯ್ತೊ ಯಡವಟ್ಟು?
ದನಿಸತ್ತ ನಡೆಯಲ್ಲಿ
ಎದೆಯ ಅಳಲನು ಮುಚ್ಚೆ
ಮೇಲ್ದುಟಿಯ ಸಟಿ ನಗುವೆ?

ಕಣ್ಣಾಳದೊಳಗೆಲ್ಲ ಮಡುಗಟ್ಟಿದಾ ನೋವು
ಏನೆಂಥ ಬಾವು?

ಅಯ್ಯಯ್ಯೋ ಸೊಂಟದಂಚಿನ ಬಟ್ಟೆ
ನೆತ್ತರಂಬಿನ ಕೂನು
ಎಲ್ಲೆಲ್ಲಿ ಬೆಂಗಡೆಗೆ ಕೈಯೇಕೆ?

ಹೆತ್ತೊಡಲ ಎದುರಲ್ಲೆ ಮತ್ತೆಂಥ
ಸಟೆ ಮಾಟ?
ಮರುಳು ನಗೆ ಮುಚ್ಚುವುದೆ
ಹುಚ್ಚಾದ ಸಂಕಟವ?

ಅಯ್ಯಯ್ಯೋ ಕಂದಯ್ಯ ಬೆರಳೆಲ್ಲೋ
ನಿನ್ನ ಹೆಬ್ಬೆರಳೆಲ್ಲೋ?
ದಮ್ಮಯ್ಯ ದಕ್ಕಯ್ಯ ಏನೆಂಥ ಯಮಗಂಡ?

ಮಾತ ಸೂತಕದಲ್ಲಿ ದಿಟವ ಕೊಲ್ಲದಿರಯ್ಯ
ಉರಿಯೋ ದೇವರ ಎದುರು
ಕರಿಕಾಳ ನಿಲ್ಲುವುದೆ?

ಹೇಳು ಹೇಳಿಲೆ ಮಗನೆ
ನನ್ನಾಣೆ ನಿನ್ನಾಣೆ ಬಿಳಿದೈವ ಬೆಟ್ಟಪ್ಪಾನಾಣೆ
ಅನ್ನಿಗನ ಬಲಕಿಲ್ಲ ಮೈಯ ಮುಟ್ಟುವ ಸದರು

ಕೆಟ್ಟೆನಪ್ಪೊ ಕೆಟ್ಟೆ
ಹೊಟ್ಟೆಕಿಚ್ಚಿನ ಕೇಡು ಬಲಿಯ ಕೊಂಡಿಹುದಲ್ಲ
ಬೆರಳು ಬಲಿಗೊಂಡಾ ಕೊರಳು
ಕಡಿದು ಬೀಳಲಿ ಹಾಳು

ಹೆಬ್ಬೆರಳು ಹೆಬ್ಬೆರಳು ಅಯ್ಯಯ್ಯೋ
ಓಚಯ್ಯ ಗೀಚಯ್ಯನೆಂದೆಂಥ ಭೂತ
ಬಡಿಯಿತೊ ನಿನಗೆ ಪ್ರಾಣಗೊಂಬುವ ಪೀಡೆ

ನಾಡ ನಡುವಿನ ಕೇಡು
ಮರುಳು ಮಾಡಿತು ಹೇಗೆ
ನನ್ನೊಡಲ ಕುಡಿಯ?

ಕರುಳ ಸಂಕಟವೆಲ್ಲ ಕಾಡೊಡಲ ಉರಿಯಾಗಿ
ಹೊಟ್ಟೆಕಿಚ್ಚಿನ ಕರುಳ ಸುಟ್ಟುಹಾಕಲಿ ಶಿವನೆ

ಬಿಲ್ಲಂಬು ಬೆರಳ ಬಲಿಗೊಂಡ
ಮಣ್ಣಸೂತಕದಲ್ಲಿ
ಕೆನ್ನೆಯುಪ್ಪಿಗೆ ಎರವಾಗದ
ಸೊಪ್ಪುಸೆದೆ ತಾಯೆ

ಎಲ್ಲಿರುವೆ ನನ್ನವ್ವೇ
ಮರುಜೇವಣೀ ಅಡ್ಡಿಕೆಯೇ
ಅಡ್ಡದಾರಿಗೆ ಬಿದ್ದ ಕರುಳ ಕಾಯುವ ಅರಿವೇ

ಹೊಸ ಸಮಾಜವಾದದ ಇಣುಕುನೋಟಗಳು

-ಎಲ್.ಎನ್. ಗೋಪಾಲಕೃಷ್ಣ

ಕರ್ನಾಟಕದ ಸಮಾಜವಾದಿ ಚಿಂತಕರಲ್ಲಿ ಬಾಪು ಹೆದ್ದೂರಶೆಟ್ಟಿಯವರದು ಸಾಕಷ್ಟು ಕೇಳಿಬಂದಿರುವ ಹೆಸರು. 'ಭಾರತೀಯ ಸಮಾಜವಾದದ ಹೆಜ್ಜೆಗುರುತುಗಳು', 'ಸಮಾಜವಾದ ಅಂದಿನಿಂದ ಇಂದಿನವರೆಗೆ' ಹಾಗೂ 'ಸಮಾಜವಾದ, ಜನತಂತ್ರ ಮತ್ತು ಕಮ್ಯೂನಿಸಂ' ಎಂಬ ಮೂರು ಪ್ರಮುಖ ಪುಸ್ತಕಗಳನ್ನು ಅವರು ಬರೆದಿದ್ದಾರೆ. ಮೊದಲೆರಡು ಪುಸ್ತಕಗಳು ಅನುಕ್ರಮವಾಗಿ ಭಾರತೀಯ ಸಮಾಜವಾದಿ ಚಳುವಳಿಯ ಇತಿಹಾಸ ಹಾಗೂ ಪಶ್ಚಿಮ ರಾಷ್ಟ್ರಗಳ ಸಮಾಜವಾದಿ ಚಳುವಳಿಯ ಇತಿಹಾಸವನ್ನು ಗುರುತಿಸಿದರೆ, ಮೂರನೆಯ ಪುಸ್ತಕ ಅವರು ಆಗಿಂದಾಗ್ಗೆ ಬರೆದ ಸಮಾಜವಾದಿ ಲೇಖನಗಳ ಸಂಗ್ರಹ. ಸಮಾಜವಾದದಲ್ಲಿ ಆಸಕ್ತರಾದವರಿಗೆ ಇವು ಮುಖ್ಯ ಪುಸ್ತಕಗಳು.

'ಹೊಸ ಸಮಾಜವಾದದ ಇಣುಕು ನೋಟಗಳು'- ಅವರ ಇತ್ತೀಚಿನ ಪುಸ್ತಕ-ಸಮಾಜವಾದದ ಬಗ್ಗೆ ಒಳನೋಟಗಳಿರುವ ಒಂದು ಗಮನಾರ್ಹ ಪುಸ್ತಕ.

ಪುಸ್ತಕದ ಹರಹು ದೊಡ್ಡದೇ. ಮಾರುಕಟ್ಟೆ, ಗ್ರಾಹಕ ಸ್ವಾತಂತ್ರ್ಯ ಭೂಸುಧಾರಣೆ, ಸಹಕಾರಿ ಚಳುವಳಿ, ಕಾರ್ಮಿಕ ಚಳುವಳಿ, ಪಂಚಾಯತ್ ರಾಜ್ ವ್ಯವಸ್ಥೆ ಜಾತಿವ್ಯವಸ್ಥೆ ಹಿಂದುಳಿದ ವರ್ಗಗಳ ರಾಜಕಾರಣ, ನ್ಯಾಯಾಂಗ, ಸಾಮಾನ್ಯ ಸಿವಿಲ್ ಕಾನೂನು, ಪ್ರಾದೇಶಿಕ ಅಸಮಾನತೆ, ಭಾಷಾ ರಾಜ್ಯಗಳ ಸಂಬಂಧ-ಹೀಗೆ ವೈವಿಧ್ಯಮಯ ವಿಷಯಗಳನ್ನು ಹೊಸಸಮಾಜವಾದಿ ನೆಲೆಯಿಂದ ಚರ್ಚಿಸುತ್ತದೆ.

ಪುಸ್ತಕದಲ್ಲಿ ಒಟ್ಟು ಇಪ್ಪತ್ತು ಲೇಖನಗಳಿವೆ. ಮೊದಲ ನಾಲ್ಕು ಲೇಖನಗಳು 'ಹೊಸ ಸಮಾಜವಾದಿ ಚಿಂತನೆ', 'ಸಮಾಜವಾದದ ಏಳುಬೀಳು', 'ಸಮಾನತೆಗಾಗಿ ಸಂಘರ್ಷ ಹೊಸ ಆಯಾಮಗಳು', ಹಾಗೂ 'ಗಾಂಧಿಯೂ ಒಬ್ಬ ಸಮಾಜವಾದಿಯೇ?'- ಸಮಾಜವಾದವನ್ನು ಒಂದು ಬೀಸಿನಲ್ಲಿ ಸಮಗ್ರವಾಗಿ ಪರಿಗ್ರಹಿಸಿ, ಅದರ ವಿವಿಧ ಆಯಾಮಗಳ ಬಗ್ಗೆ ಆಳವಾದ ಒಳನೋಟಗಳನ್ನು ನೀಡುತ್ತವೆ. ಈ ನಾಲ್ಕು ಲೇಖನಗಳು ಇಡೀ ಪುಸ್ತಕಕ್ಕೆ ಪ್ರಸ್ತಾವನೆ ರೂಪದಲ್ಲಿದ್ದು ಅವರು ನಿರೂಪಿಸಲು ಯತ್ನಿಸುವ ಹೊಸ ಚಿಂತನೆಯ ಹೊಳಹುಗಳನ್ನು ನೀಡುತ್ತವೆ.

ಸಮಾಜವಾದಿ ಸಿದ್ಧಾಂತ, ನೀತಿ ಹಾಗೂ ಕಾರ್ಯಕ್ರಮಗಳನ್ನು ಪುನರೂಪಿಸುವ ಅಗತ್ಯವನ್ನು ಒತ್ತಿಹೇಳುತ್ತಾ, ಬಾಪು ಈ ರೀತಿ ಬರೆಯುತ್ತಾರೆ:

"ಸಮಾಜವಾದಿ ಅಭಿವೃದ್ಧಿಯ ಯಾವುದೋ ಹಂತದಲ್ಲಿ ರೂಪಿಸಲಾದ ಕಾರ್ಯಕ್ರಮವನ್ನೇ ನಾವು ಸಮಾಜವಾದವೆಂದು ಭಾವಿಸುವ ಅವಶ್ಯಕತೆ ಇಲ್ಲ. ಸಮಾಜವಾದ ಹೊಸ ಸಮಾಜವೊಂದರ ನೀಲನಕ್ಷೆಯಾಗಬೇಕಿದ್ದರೆ.... ಸಮಾಜವಾದಿ ಸಿದ್ಧಾಂತದ ಪುನರ್ವಿಮರ್ಶೆಯ ಅವಶ್ಯಕತೆ ಇದೆ" (ಪುಟ. 6)



ಬಾಪುರವರು ಈ ಪುಸ್ತಕದಲ್ಲಿ ವಿವಿಧ ವಿಷಯಗಳನ್ನು ಮೂಲಭೂತ ನೆಲೆಯಲ್ಲೇ, ಪಟ್ಟುಹಿಡಿದು, ಹೊಸಸಮಾಜವಾದಿ ದೃಷ್ಟಿಕೋನದಿಂದ ಪರಿಭಾವಿಸುವ ವಿಸ್ತøತ ಪ್ರಯತ್ನವನ್ನು ಮಾಡುತ್ತಾರೆ. ಆದರೆ ಅವರು ಸೂಚಿಸುವ ಸೈದ್ಧಾಂತಿಕ ಹಾಗೂ ನೀತಿನಿರೂಪಣಾ ಬದಲಾವಣೆಗಳು ತೀವ್ರ ವಿವಾದಕ್ಕೆ ಎಡೆಮಾಡಿಕೊಡುವಂಥವು. ಅವು ವಿವಾದಾತ್ಮಕವಾಗಿದ್ದೂ ಮೂಲಭೂತವಾದವುಗಳಾದ್ದರಿಂದಲೇ ಇಡೀ ಪುಸ್ತಕವನ್ನು 'ಸಮಾಜವಾದಿ ವಾಗ್ವಾದಕ್ಕೆ ಆಹ್ವಾನ ನೀಡುವ ಹೊತ್ತಿಗೆ' ಎಂದು ಕರೆಯಬಹುದು.

ನಮ್ಮ ಯುಗದಲ್ಲಿ ರಾಜ್ಯವ್ಯವಸ್ಥೆಯಲ್ಲಿ ಅಪಾರ ಅಧಿಕಾರ ಕೇಂದ್ರೀಕೃತವಾಗಿರುವ ಬಗ್ಗೆ ಬಾಪು ಸೂಕ್ತವಾಗಿಯೇ ತಮ್ಮ ಆತಂಕ, ವಿರೋಧಗಳನ್ನು ವ್ಯಕ್ತಪಡಿಸುತ್ತಾರೆ. ಪುಸ್ತಕದಲ್ಲಿ ಮತ್ತೆ ಮತ್ತೆ ಈ ಪ್ರಶ್ನೆಯನ್ನು ಬಾಪು ಎತ್ತುತ್ತಾರೆ. ಶತಮಾನಗಳಿಂದ ಸಮಾಜವಾದಿಗಳಿಗೆ ಇದೊಂದು ತೀವ್ರ ಕಾಳಜಿಯ ಪ್ರಶ್ನೆಯಾಗಿಯೇ ಮುಂದುವರೆದಿದೆ. ಆದರೆ, ಬಾಪುರವರು ಸೂಚಿಸುವ ಪರ್ಯಾಯ ಮಾತ್ರ ತೀವ್ರ ವಿವಾದಕ್ಕೆ ಎಡೆಮಾಡಿಕೊಡುವಂಥದು. ಅವರು ಹೀಗೆ ಸೂಚಿಸುತ್ತಾರೆ:

"ಇದುವರೆಗೆ ರಾಜ್ಯವ್ಯವಸ್ಥೆ ಜನತೆಗೆ ಕೊಡುತ್ತಿದ್ದ ರಕ್ಷಣೆಯ ಹಾಗೂ ಹೆಮ್ಮೆಯ ಭಾವನೆಗಳನ್ನು ಈ ಕಂಪೆನಿಗಳು (ರಾಷ್ಟ್ರೀಯ ಹಾಗೂ ಬಹುರಾಷ್ಟ್ರೀಯ ಕಂಪೆನಿಗಳು) ಜನರಿಗೆ ಕೊಡಲು ಪ್ರಾರಂಭಿಸಿವೆ.... ಹಿಂದೆ ರಾಜ್ಯವ್ಯವಸ್ಥೆ ಮಾನವನ ಬದುಕನ್ನು ಸಂಪೂರ್ಣವಾಗಿ ಆವರಿಸಿಕೊಂಡಿದ್ದಂತೆ ಇಂದು ಕಂಪೆನಿಗಳು ಮಾನವನ ಬದುಕನ್ನು ಆವರಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಸಮಾಜವಾದಿಗಳು ಇಂದು ರಾಜ್ಯವ್ಯವಸ್ಥೆಯ ಬದಲಿಗೆ ಕಂಪೆನಿಗಳನ್ನು ಕೇಂದ್ರವಾಗಿಟ್ಟುಕೊಂಡು ತಮ್ಮ ಸಿದ್ಧಾಂತವನ್ನು ಪುನರ್ನಿರೂಪಿಸುವುದು ಅವಶ್ಯವಾಗಿದೆ. ಇದೇ ಬಹುಶಃ ಹೊಸಸಮಾಜವಾದದ ಮೂಲನೆಲೆಗಟ್ಟಾಗಲಿದೆ" (ಪು. 6)

ಇದೊಂದು ದಿಟ್ಟವಾದ ಪ್ರಸ್ತಾವನೆ. ಇಂತಹ ಪ್ರಸ್ತಾವನೆಯಲ್ಲಿರುವ ಹತ್ತಾರು ಸಮಸ್ಯೆಗಳನ್ನು ಇಲ್ಲಿ ಚರ್ಚಿಸಲು ಸಾಧ್ಯವಾಗಲಾರದು. ಆದರೆ ಒಂದು ಮಾತನ್ನಂತೂ

ಹೇಳಬಹುದು: ರಾಷ್ಟ್ರಸಮಾಜದ ಎಲ್ಲೆಯೊಳಗಿರುವ ಅಧಿಕಾರ ಕೇಂದ್ರಗಳನ್ನು ನಿಯಂತ್ರಿಸಲು, ಅವುಗಳಲ್ಲಿ ಭಾಗವಹಿಸಲು ಸಾಧ್ಯವಿಲ್ಲದಂತಹ ಅಸಹಾಯಕ ಪರಿಸ್ಥಿತಿ ಜನಸಾಮಾನ್ಯರಿಗುಂಟಾಗಿದೆ. ಹಾಗಿರುವಾಗ, ರಾಷ್ಟ್ರಸಮಾಜಗಳಾಚೆ ಊಹಿಸಲೂ ಸಾಧ್ಯವಿಲ್ಲದಷ್ಟು ಬೃಹತ್ತಾಗಿ ಬೆಳೆದಿರುವ, ಆರ್ಥಿಕ ಶಕ್ತಿಯಲ್ಲಿ ರಾಷ್ಟ್ರಗಳನ್ನೇ ಪಿಗ್ಮಿಗಳನ್ನಾಗಿಸುವ ಬಹುರಾಷ್ಟ್ರೀಯ ಕಂಪೆನಿಗಳನ್ನು ರಾಜ್ಯಶಕ್ತಿಗೆ ಪರ್ಯಾಯವಾಗಿ ಒಪ್ಪಿಕೊಂಡರೆ, ಅವುಗಳಲ್ಲಿ ಜನತೆಯ ಸ್ಥಾನವೇನು ಎಂಬ ಮೂಲಪ್ರಶ್ನೆ ಏಳುತ್ತದೆ.

ಜನತೆಯನ್ನು ನಿಯಂತ್ರಿಸುವ ಬಹುರಾಷ್ಟ್ರೀಯ ಕಂಪೆನಿಗಳ ಬೃಹತ್ ಶಕ್ತಿಯನ್ನು, ಅವುಗಳ ಕಾಣದ ಅಸಂಖ್ಯ ಕಬಂಧ ಬಾಹುಗಳನ್ನು, ಅವುಗಳ ಅಂತರಾಷ್ಟ್ರೀಯ ರಾಜಕೀಯ ಪಗಡೆಯಾಟವನ್ನು, ಅವುಗಳ ನವವಸಾಹತುಶಾಹಿ ಐತಿಹಾಸಿಕ ಕಾರ್ಯಕ್ರಮವನ್ನು ಗಣನೆಗೆ ತೆಗೆದುಕೊಳ್ಳದೆ, ಒಳಹೊಕ್ಕು ವಿವೇಚಿಸದೆ, ಬಾಪುರವರು ಆತುರವಾಗಿ, ಮುಗ್ಧವಾಗಿ ಮಾತನಾಡುತ್ತಿದ್ದಾರೆ ಅನ್ನಿಸುತ್ತದೆ. ಅತ್ಯಂತ ಪ್ರಮುಖವಾದ ಈ ಪ್ರಸ್ತಾವನೆಯನ್ನು ಪುಸ್ತಕದ ಯಾವ ಲೇಖನದಲ್ಲೂ ವಿವರಿಸಿ, ತಮ್ಮ ಹೊಸ ಸಮಾಜರಾದದ ನೀಲನಕ್ಷೆಯನ್ನು ಅವರು ನಮ್ಮ ಮುಂದಿಡುವುದಿಲ್ಲ ಎಂಬುದು ಪುಸ್ತಕದ ಒಂದು ದೊಡ್ಡ ಕೊರತೆ.

ಬಾಪುರವರು ಭಾರತೀಯ ಸಮಾಜವಾದಕ್ಕೆ ಮಾಡಲು ಇಚ್ಛಿಸುವ ಇನ್ನೊಂದು ತಿದ್ದುಪಡಿ ಎಂದರೆ ಅನುಭೋಗವಾದಿ ವಿರೋಧಿ ನೆಲೆಯಿಂದ ಭಾರತೀಯ ಸಮಾಜವಾದವನ್ನು ವಿಮುಖಗೊಳಿಸುವುದು. ಅವರು ಹೀಗೆ ಬರೆಯುತ್ತಾರೆ:

"…. ಅನುಭೋಗದಿಂದ ಓಡಿಹೋಗುವುದಾಗಲೀ, ಅಥವಾ ಗಾಂಧಿಯ ಅಪರಿಗ್ರಹವನ್ನು ವೈಭವೀಕರಿಸುವುದಾಗಲೀ ಸಲ್ಲದು. ನಮ್ಮ ಹತ್ತಿರ ಇರುವ ಸಮೃದ್ಧಿಯನ್ನೇ ಆಗಲೀ ಅಥವ ಬಡತನವನ್ನೇ ಆಗಲೀ, ಸಮನಾಗಿ ಹಂಚಿಕೊಳ್ಳುವುದೇ ಸಮಾಜವಾದ ಎಂದು ಧೈರ್ಯದಿಂದ ಹೇಳುವ ಕಾಲ ಈಗ ಬಂದಿದೆ." (ಪುಟ. 9)

ಬೇರೆ ಮೂಲಗಳಲ್ಲಿ ಹೇಳುವುದಾದರೆ, ಗಾಂಧೀಪ್ರಭಾವದಿಂದ ಭಾರತೀಯ ಸಮಾಜವಾದವನ್ನು ಮುಕ್ತಗೊಳಿಸಲು ಬಾಪುರವರು ಇಚ್ಛಿಸುತ್ತಾರೆ ಹಾಗೂ ಗ್ರಾಹಕವಾದಿ ನವನಾಗರೀಕತೆಯ ಓಟದಲ್ಲಿ ನಾವೂ ಭಾಗಿಯಾಗುವುದರಲ್ಲಿ ಯಾವ ಮಹಾಪರಾಧವೂ ಇಲ್ಲ ಎಂದು ಅವರು ಸೂಚಿಸುತ್ತಾರೆ. ನವನಾಗರೀಕತೆಯ ಪುನರ್ವಿಮರ್ಶೆ ಅಗತ್ಯವೆಂದು ಅವರಿಗೆ ಅನ್ನಿಸುವುದಿಲ್ಲ. ಇದಕ್ಕೆ ಪೂರಕವಾಗಿಯೇ ಅವರು ತಮ್ಮ ಇನ್ನೆರಡು ಲೇಖನಗಳಲ್ಲಿ- "ಸಮಾಜವಾದದಲ್ಲಿ ಗ್ರಾಹಕನ ಸ್ವಾತಂತ್ರ್ಯ ಮತ್ತು ಸಮಾನತೆ" ಹಾಗೂ



"ಜನರಿಗಾಗಿ ಮಾರುಕಟ್ಟೆಗಳು"- ಗ್ರಾಹಕವಾದವನ್ನು ಸಮಾಜವಾದಿ ವ್ಯವಸ್ಥೆಯಲ್ಲಿ ಸಹ ಸಮಾನತೆಗೆ ಧಕ್ಕೆಯಾಗದಂತೆ ಹೇಗೆ ಕಾರ್ಯರೂಪಕ್ಕೆ ತರಲು ಸಾಧ್ಯ ಎಂಬುದನ್ನು ವಿವರವಾಗಿ ವಿವೇಚಿಸುತ್ತಾರೆ. ತಮ್ಮ ನಿರ್ಮಿತ ಚೌಕಟ್ಟಿನೊಳಗೆ, ಅವರ ಚಿಂತನೆ ಹೊಸತಾದುದೇ. ಆದರೆ ಸಮಸ್ಯೆ ಇರುವುದು ಮಿತಿಯಿಲ್ಲದ ಗ್ರಾಹಕವಾದವನ್ನು ಸಮಾಜವಾದವು ಒಪ್ಪಿಕೊಳ್ಳುವುದರಲ್ಲಿ ಯಾವುದೇ ವ್ಯವಸ್ಥೆ ಇರಲಿ, ಅದರಲ್ಲಿ ಸಮಾನತೆ ತರುವುದಷ್ಟೇ ಸಮಾಜವಾದವೇ ಅಥವ ಸಮಾಜವಾದವು ಒಂದು ವಿಶಿಷ್ಟ ದರ್ಶನವೇ ಎಂಬ ಅತಿಮುಖ್ಯ ಪ್ರಶ್ನೆ ಎದುರಾಗುತ್ತದೆ.

ರಾಜ್ಯವ್ಯವಸ್ಥೆಯಲ್ಲಿನ ಅಧಿಕಾರ ಕೇಂದ್ರೀಕರಣವನ್ನು ಕುಗ್ಗಿಸಲು ಬಾಪುರವರು ಸದಾ ಹೊಸದಾರಿಗಳನ್ನು ಹುಡುಕುತ್ತಿರುತ್ತಾರೆ. "ಸಾಮಾನ್ಯ ಸಿವಿಲ್ ಕಾನೂನು ಅವಶ್ಯವಿದೆಯೇ?" ಎಂಬ ಲೇಖನದಲ್ಲಿ ಅವರು ಹೀಗೆ ಬರೆಯುತ್ತಾರೆ:

"ರಾಜ್ಯವ್ಯವಸ್ಥೆ ಸಾಮಾನ್ಯ ಸಿವಿಲ್ ಕಾನೂನನ್ನು ಮಾಡಬೇಕು ಎಂದು ಹೇಳುವ ಮೂಲಕ... ಧರ್ಮವನ್ನು ಬಲಹೀನಗೊಳಿಸುವುದರ ಜೊತೆಗೆ ರಾಜ್ಯವ್ಯವಸ್ಥೆಯನ್ನು ಬಲಪಡಿಸಲು ಪ್ರಯತ್ನಿಸುವುದು ಒಂದು ಸೈದ್ಧಾಂತಿಕ ವಿಪರ್ಯಾಸವೇ ಆಗಿದೆ. ರಾಜ್ಯವ್ಯವಸ್ಥೆಯನ್ನು ಹದ್ದುಬಸ್ತಿನಲ್ಲಿಡಲು ಅದಕ್ಕೆ ಎದುರಾಗಿ ಸಮತೋಲಕ ಶಕ್ತಿಗಳನ್ನು ನಿರ್ಮಿಸಿ ಬೆಳೆಸಬೇಕಾಗುತ್ತದೆ. ತನ್ನ ಎಲ್ಲಾ ಕೊರತೆಗಳೊಂದಿಗೆ ಕೂಡ ಧರ್ಮ ಇಂದಿಗೂ ಅಂಥ ಒಂದು ಶಕ್ತಿಯಾಗಿದೆ" (ಪುಟ 98¥99)

ರಾಜ್ಯವ್ಯವಸ್ಥೆಗೆ ಪರ್ಯಾಯವಾದ, ಸಮತೋಲನದ ಶಕ್ತಿಗಳನ್ನು ಸೃಷ್ಟಿಸಬೇಕೆಂಬುದು ಉದಾತ್ತ ಚಿಂತನೆಯೇ ಸರಿ. ರಾಜಕಾರಣವೇ ಸಮಾಜದ ಎಲ್ಲ ಆಗುಹೋಗುಗಳನ್ನು ನಿಯಂತ್ರಿಸುವಂತಹ ವ್ಯವಸ್ಥೆ ನಿಜಕ್ಕೂ ರೋಗಿಷ್ಟ ವ್ಯವಸ್ಥೆಯೇ ಸಮಾಜವು ರಾಜ್ಯಶಕ್ತಿಗಿಂತಲೂ ಮಹತ್ವದ್ದು, ವಿಸ್ತೃತವಾದದ್ದು. ಆದರೆ, ಧರ್ಮವೆಂಬ ಸಂಸ್ಥೆಯ ಸ್ವರೂಪವನ್ನು ಅದರಲ್ಲಿ ಉದ್ದಗಲ ಆಳಗಳಲ್ಲಿ ಪರಿಶೀಲಿಸದೆ ಅದನ್ನು ಸಮತೋಲಕ ಶಕ್ತಿಯಾಗಿ ಒಪ್ಪಿಕೊಳ್ಳುವುದು ಎಷ್ಟು ಸೂಕ್ತವಾದದ್ದು? ಅದು ಕೆಲವೇ ಹಿತಾಸಕ್ತಿಗಳ ಮುಷ್ಠಿಹಿಡಿತದಿಂದಾಗಿ ರಾಜ್ಯವ್ಯವಸ್ಥೆಗಿಂತಲೂ ಹೆಚ್ಚು ಕೆಡುಕಿನ ಸಂಘಟನೆಯಾಗಿ ರೂಪುಗೊಂಡಿಲ್ಲವೇ? ಎಂಬ ಪ್ರಶ್ನೆಗಳು ಏಳುತ್ತವೆ. ಬಾಪುರವರ ಚಿಂತನೆ ಮೇಲ್ಪದರದ ಸರಳೀಕೃತ, ಅಪಾಯಕಾರಿ ಚಿಂತನೆಯಾಗಿ ಕಾಣುತ್ತದೆ.

ಬಾಪುರವರ ದೃಷ್ಟಿಕೋನ ಜಾಗತೀಕರಣ ಪ್ರಣೀತ ನಗರೀಕತತೆಯ (ಕಾಸ್ಮೋಪಾಲಿಟನ್) ದೃಷ್ಟಿಕೋನವೆಂಬ ತೀವ್ರ ಅನುಮಾನ ನನ್ನದು. ಸಾಮುದಾಯಕ ಸ್ವವ್ಯಕ್ತಿತ್ವ, ಸ್ಮೃತಿ, ಪರಂಪರೆ, ಸ್ಥಳೀಯ ಸೃಜನಶೀಲತೆ ಇತ್ಯಾದಿಗಳಲ್ಲಿ ಮೌಲಿಕತೆಯನ್ನು ಗುರುತಿಸದ, ಕೇವಲ ತಂತ್ರಜ್ಞಾನ ಪ್ರೇರಿತ ಆರ್ಥಿಕ ದೃಷ್ಟಿಕೋನ ಇದಾಗಿದೆ. "ಕರ್ನಾಟಕ ನೆರೆ ರಾಜ್ಯ ಸಂಬಂಧಗಳು" ಹಾಗೂ "ಉತ್ತರ ಕರ್ನಾಟಕ ಕಡೆಗಣಿಸಲ್ಪಟ್ಟಿದೆಯೇ?"- ಲೇಖನಗಳಲ್ಲಿ ಬಾಪುರವರ ಮುಂದಿಡುವ ವಾದಗಳು ಇದನ್ನು ಪುಷ್ಟೀಕರಿಸುತ್ತವೆ.

ಭಾಷಾವಾರು ಪ್ರಾಂತ್ಯಗಳನ್ನು ಅವರು ಕೇವಲ ರಾಜಕೀಯ ಘಟಕಗಳು ಮಾತ್ರ



ಎಂದು ಪರಿಭಾವಿಸುತ್ತಾರೆ. ಭಾಷೆಗಳು ಭಾಷಾವಾರು ಪ್ರಾಂತ್ಯಗಳ ಗಡಿಮೀರಿ ಬೆಳೆಯುವುದಕ್ಕೆ ಮಾನವನ ಅಪರಿಮಿತ ಒತ್ತಾಸೆಗಳು, ಇತಿಹಾಸಿಕ ಅನಿವಾರ್ಯತೆಗಳು ಕಾರಣ, ಭಾಷೆಗಳು ಬೆಸೆದು ಹೊಸ ಭಾಷೆಗಳ ಸೃಷ್ಟಿಯಾಗುವ ಕಾಲ ದೂರವಿಲ್ಲ, ಅದಕ್ಕೆ ನಾವು ಒತ್ತಾಸೆ ನೀಡಬೇಕೆಂದು ಬಾಪು ಸೂಚಿಸುತ್ತಾರೆ. "ನಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಂಡು ಬರುವುದೇ ನಮ್ಮ ದೊಡ್ಡಸ್ತಿಕೆಯಾಗಬಾರದು" (ಪುಟ 106-107) ಎಂದು ಅವರು ವಾದಿಸುತ್ತಾರೆ.

ಕಾಸ್ಮೋಪಾಲಿಟನ್ ದೃಷ್ಟಿಕೋನವು ಮೂಲದಲ್ಲಿ ನವ್ಯಯುಗದ ತಾಂತ್ರಿಕ ಆರ್ಥಿಕ-ಗ್ರಾಹಕ ಹಿತಾಸಕ್ತಿಗಳೇ ಮಾನವನನ್ನು ಪರಿಭಾವಿಸುವ ನೆಲೆಯಾಗುತ್ತದೆ. ಮಾನವನ ಇತರ ಆಯಾಮಗಳನ್ನೂ, ಆಕಾಂಕ್ಷೆಗಳನ್ನೂ ಅದು ಪೂರ್ಣವಾಗಿ ಮೂಲೆಗುಂಪು ಮಾಡುತ್ತದೆ. ಭಾಷೆಯು ಒಂದು ಸಾಮುದಾಯಿಕ ಸಂಸ್ಕೃತಿಯ ಸೃಜನಶೀಲ ಸೃಷ್ಟಿ ಮತ್ತು ಅಭಿವ್ಯಕ್ತಿ. ಒಂದು ಭಾಷೆಯ ಇಂದಿನ ಅಸ್ತಿತ್ವದ ಹಿನ್ನೆಲೆಯಲ್ಲಿ ಒಂದು ಇಡೀ ಸಮುದಾಯದ ಪಾರಂಪರಿಕ ಸ್ಮೃತಿ ಇರುತ್ತದೆ. ಒಂದು ಜನಾಂಗದ ಸ್ಮೃತಿ ಮತ್ತು ಪರಂಪರೆ ಅದರ ವ್ಯಕ್ತಿತ್ವದ ಒಂದು ಭಾಗ. ಹಾಗೆಯೇ ಸ್ವವ್ಯಕ್ತಿತ್ವವೆಂಬುದ ಮಾನವನ, ಅವನ ಸಮುದಾಯಗಳ ಮಹತ್ವವೂ ಅಮೂಲ್ಯವೂ ಆದ ಆಕಾಂಕ್ಷೆಗಳಲ್ಲಿ ಒಂದು. ಬಹುರೂಪತೆ ಮತ್ತು ವೈವಿಧ್ಯತೆಗಳನ್ನು ಸಮಾಜವಾದಿಗಳು ತಮ್ಮ ದರ್ಶನದ ಒಂದು ಪ್ರಮುಖ ಅಂಶವಾಗಿ ಎಂದಿನಿಂದಲೂ ಒಪ್ಪಿಕೊಂಡು ಬಂದಿದ್ದಾರೆ.

ಹಾಗೆಯೇ 'ಪ್ರದೇಶ'ವೆಂಬುದು ಕೇವಲ ಸರಹದ್ದು ಇರುವ ಭೌಗೋಳಿಕ ಅಸ್ತಿತ್ವ ಮಾತ್ರವಲ್ಲ, ಅದಕ್ಕೆ ಅದರದೇ ಆದ ಸಾಮುದಾಯಿಕ ಹಾಗೂ ಸಾಂಸ್ಕೃತಿಕ ಅಸ್ತಿತ್ವವಿರುತ್ತದೆ. ಕಾಸ್ಮೋಪಾಲಿಟನ್ ದೃಷ್ಟಿಕೋನಕ್ಕೆ ಇವೆಲ್ಲ ಗೌಣವಾಗುತ್ತದೆ. ನ್ಯಾಯಾಂಗದ ಕ್ರಿಯಾಶೀಲತೆಯನ್ನು ತೀವ್ರವಾಗಿ ಟೀಕಿಸುವ ಅವರು, ಅದು "ಕಾನೂನುಬದ್ಧ ಆಡಳಿತವಾದ ಪರಿಕಲ್ಪನೆಯನ್ನು ನಗೆಪಾಟಲು ಮಾಡುವುದರ ಜೊತೆಗೆ, ಭಾರತದ ಸಂವಿಧಾನದ ಮೇಲೆ ಮಿತಿಮೀರಿದ ಪ್ರಹಾರ ಮಾಡಿದೆ, ಪ್ರಜಾಪ್ರಭುತ್ವವನ್ನು ಗಂಡಾಂತರಕ್ಕೀಡು ಮಾಡಿದೆ ಹಾಗೂ ದೇಶವನ್ನು ಅಪಾಯದ ಅಂಚಿಗೆ ತಳ್ಳಿದೆ" (ಪು. 86)

ಎಂದು ಖಾರವಾಗಿ ಬರೆಯುತ್ತಾರೆ ಮುಂದುವರೆದು ಅವರು,

"ನ್ಯಾಯಾಂಗದ ಕ್ರಿಯಾಶೀಲತೆಯು" ಅದರ (ನ್ಯಾಯಾಂಗದ) ಸ್ವನಿಯಂತ್ರಣವನ್ನು ಹೊಸಕಿ ಹಾಕಿದೆ... ಇಂದು ದೇಶ ಎದುರಿಸುತ್ತಿರುವ ಸಮಸ್ಯೆಗಳಿಗೆ ನ್ಯಾಯಾಂಗದ ಕ್ರಿಯಾಶೀಲತೆ ಪರಿಹಾರವಲ್ಲ" (ಪು. 91)

ಎಂದು ಬರೆಯುತ್ತಾರೆ ಆದರೆ, ನ್ಯಾಯಾಂಗದ ಕ್ರಿಯಾಶೀಲತೆಯ ಅನಿವಾರ್ಯತೆ ನಮ್ಮ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಏಕೆ ಉಂಟಾಯಿತು ಎಂಬುದನ್ನು ಅವರು ಒಳಹೊಕ್ಕು ನೋಡಬೇಕಿತ್ತು. ಭ್ರಷ್ಟತೆಯ ರಾಜಕೀಕರಣ ಇಂದು ರಾಜಕಾರಣದ ಅಪರಾಧೀಕರಣದ ಅಪಾಯಕಾರಿ ಹಂತ ತಲುಪಿದೆ. ಜನತಾಂತ್ರಿಕ ಸಂಸ್ಥೆಗಳೇನೋ ಇವೆ, ಆದರೆ ಅವುಗಳನ್ನು ಶಕ್ತಿವಂತರು, ಹೆಚ್ಚೂ ಕಡಿಮೆ ಪೂರ್ಣವಾಗಿ, ತಮಗೆ ಬೇಕಾದಂತೆ ತಿರುಚಿ ಉಪಯೋಗಿಸುತ್ತಿದ್ದಾರೆ. ಜನತಂತ್ರವೇ ಇಂದು ದುರ್ಬಲವೂ, ಕೇವಲ ಔಪಚಾರಿಕವೂ ಆದ ಕ್ರಿಯೆಯಾಗಿ ಶಿಥಿಲಗೊಳ್ಳುವ ಸ್ಥಿತಿ ತಲುಪಿದೆ. ಇಂತಹ ದೈನೇಸಿ ಸ್ಥಿತಿಯಲ್ಲಿ ನ್ಯಾಯಾಂಗದ ಕ್ರಿಯಾಶೀಲತೆ ಸಾಮಾನ್ಯ ಜನರಿಗೆ ದೊರಕಿರುವ ನಕಾರಾತ್ಮಕ ಸಾಧ್ಯತೆಗಳಲ್ಲಿ ಒಂದಾಗಿದೆ.

ಬಾಪುರವರ ಚಿಂತನಾವಿದಾನದ ಸಮಸ್ಯೆ ಎಂದರೆ, ಅವರು ಹರಿತವಾಗಿ, ತರ್ಕಬದ್ಧವಾಗಿ ಚಿಂತಿಸಬಲ್ಲರು, ಆದರೆ ಅವರ ಚಿಂತನೆ ಔಪಚಾರಿಕ ಚೌಕಟ್ಟಿನಲ್ಲೇ, ಶಾಸ್ತ್ರಾರ್ಥ-ವೈಧಾನಿಕ ಚೌಕಟ್ಟಿನಲ್ಲೇ ಸಿಕ್ಕಿಹಾಕಿಕೊಂಡು ಬಿಡುತ್ತದೆ. ಘನೀಭೂತ ವಾಸ್ತವವನ್ನು ಒಳಹೊಕ್ಕು ಅವರು ನೋಡುವುದಿಲ್ಲ ಅದನ್ನು ಭೇದಿಸುವ ಮೂಲಕ ಹೊರಹೊಮ್ಮ ಬೇಕಾದ ಚಿಂತನಾ ವಿಧಾನ ಅವರದಲ್ಲ.

"ಗಾಂಧಿಯೂ ಒಬ್ಬ ಸಮಾಜವಾದಿಯೇ?" ಎಂಬ ಲೇಖನದಲ್ಲಿ, ಗಾಂಧಿಯವರ ಕಾರ್ಯವನ್ನು ಸಮಾಜ ಸುಧಾರಣೆ ಎನ್ನಬಹುದೇ ಹೊರತು, ಸಮಾಜವಾದಿ ಕ್ರಿಯಾಶೀಲತೆ ಎಂದು ಕರೆಯಲಾಗದು ಎಂದು ಸೂಚಿಸುತ್ತಾರೆ. ಭಾರತೀಯ ಸಮಾಜವಾದವು ತಾತ್ವಿಕತೆ ಮತ್ತು ತಂತ್ರಗಳಲ್ಲಿ ಗಾಂಧೀಜಿಯವರಿಗೆ ಗಮನಾರ್ಹವಾಗಿ ಋಣಿಯಾಗಿದೆ ಎಂಬ ಸರ್ವವ್ಯಾಪಿ ನಂಬುಗೆಯ ಹಿನ್ನೆಲೆಯಲ್ಲಿ, ಅವರ ಲೇಖನವು ಪ್ರಚೋದನಕಾರಿಯಾಗಿರುವಷ್ಟೇ ಚಿಂತನಶೀಲವೂ ಆಗಿದೆ. ಪ್ರಗತಿಪರ ಕಾರ್ಯಕ್ರಮಕ್ಕೂ, ಸಿದ್ಧಾಂತಕ್ಕೂ, ಸಮಾಜಸುಧಾರಣೆಗೂ ಇರುವ ವ್ಯತ್ಯಾಸ-ಸಂಬಂಧಗಳನ್ನು ಅವರು ಮಾರ್ಮಿಕವಾಗಿ ಈ ಲೇಖನದಲ್ಲಿ ಚರ್ಚಿಸುತ್ತಾರೆ. ಒಬ್ಬ ಪ್ರಗತಿಪರ ಕ್ರಿಯಾಶೀಲನನ್ನು ಸಮಾಜವಾದಿ ಎಂದು ಗುರುತಿಸಲು ಮಾನದಂಡಗಳಾವುವು ಎಂಬ ಇಂದಿನ ತೀವ್ರ ಗೊಂದಲದಲ್ಲಿ ಅವರು ಎತ್ತಿರುವ ಪ್ರಶ್ನೆ ಮುಖ್ಯವಾದುದೇ ಅವರು ಹೀಗೆ ಬರೆಯುತ್ತಾರೆ:

"ಒಂದು ಕಾರ್ಯಕ್ರಮಕ್ಕೆ ಒಂದು ಸಿದ್ಧಾಂತದ ನೆಲಗಟ್ಟಿಲ್ಲದಿದ್ದರೆ, ಆ ಕಾರ್ಯಕ್ರಮವು ಕಾರ್ಯಗತವೇನೋ ಆಗುತ್ತದೆ. ಆದರೆ ಬದಲಾವಣೆ ಪ್ರಕ್ರಿಯೆ ಅಲ್ಲಿಯೇ ನಿಂತು ಹೋಗುತ್ತದೆ. ಸಿದ್ಧಾಂತದ ನೆಲೆಗಟ್ಟಿದ್ದರೆ, ಅದು ಮುಂದಿನ ಕಾರ್ಯಕ್ರಮಕ್ಕೆ ತಾಯಿಯಾಗಿ ಬದಲಾವಣೆಯ ಪ್ರಕ್ರಿಯೆಯನ್ನು ಮುಂದುವರೆಸುತ್ತದೆ..." (ಪು. 26)

ಈ ಲೇಖನದಲ್ಲಿ ಬಾಪು ಹೇಳುವ ಮಾತುಗಳು ನಿರ್ದಿಷ್ಟಶೀಲವಾಗಿದ್ದೂ ಪ್ರಾಥಮಿಕವಾದವು. ಇತಿಹಾಸದ ಓಟದಲ್ಲಿ ಸಿದ್ಧಾಂತ-ಕ್ರಾಂತಿಕಾರಿ ಕಾರ್ಯಕ್ರಮ ಹಾಗೂ ಸಮಾಜ ಸುಧಾರಣೆಗಳ ಮಧ್ಯೆ ಸಂಕೀರ್ಣ ಸಂಬಂಧಗಳಿವೆ. ಸಮಾಜ ಸುಧಾರಣೆಗಳು ದೀರ್ಘಾವಧಿಯಲ್ಲಿ ಕ್ರಾಂತಿಕಾರಿ ಕಾರ್ಯಕ್ರಮಗಳಾಗಿ ಮಾರ್ಪಟ್ಟದ್ದಕ್ಕೂ ಹಾಗೂ ಸಮಾಜ

ಸುಧಾರಣೆಗಳು ಕ್ರಾಂತಿಕಾರಿ ಕಾರ್ಯಕ್ರಮಗಳಿಗೆ ಬಿತ್ತನೆಯ ಭೂಮಿಯಾಗಿ ಕೆಲಸ ಮಾಡಿದ್ದಕ್ಕೂ ಇತಿಹಾಸದಲ್ಲಿ ಸಾಕ್ಷಿಗಳಿವೆ. ಮದರ್ ತೆರೆಸಾರ ಸಮಾಜ ಸುಧಾರಣಾ ಕಾರ್ಯಕ್ರಮಗಳನ್ನು ಕ್ರಾಂತಿ ನಿಧಾನಗೊಳಿಸುವ ಕ್ರಿಯೆಗಳೆಂದೂ, ವ್ಯವಸ್ಥೆ ಗಟ್ಟಿಗೊಳಿಸುವ ಕಾರ್ಯಕ್ರಮಗಳೆಂದೂ ಹಿಂದೊಮ್ಮೆ ಹೀಗೆಳೆಯುತ್ತಿದ್ದ ಕಮ್ಯುನಿಸ್ಟರು, ನಿಧಾನವಾಗಿ ಅವುಗಳ ಉಪಯುಕ್ತತೆಯನ್ನೂ ಒಪ್ಪಿಕೊಳ್ಳಬೇಕಾಯಿತು. ಒಟ್ಟಿನಲ್ಲಿ, ವಿಷಯದ ಸಂಕೀರ್ಣತೆ ಗಹನವಾಗಿದ್ದು, ಅದರ ಬಗ್ಗೆ ನಿರ್ದಿಷ್ಟ ಚಿಂತನೆ ಅಭಿವೃದ್ಧಿಗೊಳಿಸುವ ಅಗತ್ಯವಿದೆ. ಬಾಪು ಇಲ್ಲಿ ಮಾಡಿರುವುದು ವಿಷಯದ ಪ್ರಾರಂಭಿಕ ಚರ್ಚೆ.

ಒಂದು ಸಾಮಾಜಿಕ ಸಂಸ್ಥೆಯಾಗಿ 'ಜಾತಿ'ಯ ಬಗ್ಗೆ ಭಾರತೀಯ ಸಮಾಜವಾದಿಗಳು ಮಹಾ ಸೂಕ್ಷ್ಮಮತಿಗಳು. 'ಚಲನಶೀಲ ಜಾತಿಯೇ ವರ್ಗ, ಚಲನ ಹೀನ ವರ್ಗವೇ ಜಾತಿ' ಎಂಬ ಲೋಹಿಯಾ ಸೂತ್ರೀಕರಣದ ನಂತರ, ಸಮಾಜವಾದಿಗಳು ತಮ್ಮ ಸಿದ್ಧಾಂತವನ್ನು 'ಜಾತಿ'ಯ ಮೂಲಘಟಕಾಂಶದಿಂದಲೇ ಸ್ಪಷ್ಟೀಕರಿಸಲು ಇಚ್ಛಿಸಿದರು. ಮಾರ್ಕ್ಸ್ 'ವರ್ಗ'ದ ಮೂಲಕ ಮಾಡಿದಂತೆ, ಲೋಹಿಯರವರು 'ಜಾತಿ'ಯ ಮೂಲಕ ಇಡೀ ಸಮಾಜ, ಇತಿಹಾಸ ಹಾಗೂ ನಾಗರೀಕತೆಗಳನ್ನು ಅರ್ಥೈಸಲು ಪ್ರಯತ್ನಿಸಿದರು. ಇತಿಹಾಸ ಚಕ್ರ ಮುರಿಯುವುದೆಂದರೆ ಜಾತಿಪದ್ಧತಿ ಮತ್ತು ಬಂಡವಾಳವಾದಿ ತಂತ್ರಜ್ಞಾನಗಳ ನಿರ್ಮೂಲನ ಮಾಡುವುದೆಂಬ ನಿಲುವಿಗೆ ಸಮಾಜವಾದಿಗಳು ತಲುಪಿದರು. ಈ ತೀವ್ರವಾದಿ ಹಿನ್ನೆಲೆಯಲ್ಲಿ, ಬಾಪುರವರು 'ಬಸವಣ್ಣ ಬಯಸಿದ್ದೇನು?' ಲೇಖನದಲ್ಲಿ ಜಾತಿನಿರ್ಮೂಲನದ ಅಗತ್ಯವನ್ನು ಪ್ರಶ್ನಿಸುತ್ತಾರೆ.

"ಜಾತಿ-ಜಾತಿಗಳ ನಡುವೆ ಸಾಮಾಜಿಕ ಸಮಾನತೆ ತರುವುದು ನಮ್ಮ ಧ್ಯೇಯವಾಗಬೇಕು,..... ಹಾಗೆ ಮಾಡಿದಾಗ ಜಾತಿಪದ್ಧತಿ ಒಂದು ಅನಿಷ್ಟವಾಗಿ ಉಳಿಯುವುದಿಲ್ಲ, ಸಾಮಾಜಿಕ ಬಹುಳತೆಯ ಒಂದು ಪ್ರಕಾರವಾಗಿ ಉಳಿಯುತ್ತದೆ. ಜಾತಿಗಳ ನಡುವೆ ಅಸಮಾನತೆಯನ್ನು ತೆಗೆದು ಹಾಕುವುದು ಅಸಾಧ್ಯ ಎಂದಾಗ ಮಾತ್ರ ಜಾತಿಗಳನ್ನು ತೆಗೆದು ಹಾಕಬಹುದು.... ಜಾತಿಯಲ್ಲಿರುವಷ್ಟು ಜನರನ್ನು ಸಂಘಟಿಸುವ ಶಕ್ತಿ.... ರಾಜಕೀಯ ಸಿದ್ಧಾಂತಗಳಿಗೂ ಇಲ್ಲ.... (ಜಾತಿ) ಸಮಾಜದ ಏಳಿಗೆಗೆ ಕಾರಣವೂ ಆಗಬಹುದು" (ಪು. 80-81)

ಎಂದು ಬಾಪು ವಾದಿಸುತ್ತಾರೆ. ಹಿಂದೆ, ಎಲ್.ಜಿ. ಹಾವನೂರವರೂ ಜಾತಿಪದ್ಧತಿ ನಿರ್ಮೂಲನೆ ಅಸಾಧ್ಯವೆಂದೂ, ಜಾತಿಗಳ ಸಮಾನತೆಗಾಗಿ ನಾವು ಹೋರಾಡಬೇಕೆಂದು ಸೂಚಿಸಿದ್ದರು. ಬಾಪು ಸೂಚಿಸುವಂತೆ ಜಾತಿ ಎಂಬುದನ್ನು ಅನನ್ಯ ಸಾಂಸ್ಕೃತಿಕ-ಸಾಮಾಜಿಕ ಘಟಕವಾಗಿ ಪರಿಭಾವಿಸುವುದು ಒಂದು ಆಕರ್ಷಕವಾದವೇ ಸರಿ. ಆದರೆ, ಅಸಮಾನತೆ ಎಂಬುದು ಜಾತಿ ಪರಿಕಲ್ಪನೆಯ ಸಂರಚನೆಯಲ್ಲೇ ಅಂತರ್ಗತವಾಗಿದೆಯೇ, ಅಸಮಾನತೆಯ ಅಂಶಗಳನ್ನು ಜಾತಿ ಎಂಬ ಮೂಲಘಟಕದಿಂದ ಬೇರ್ಪಡಿಸಲು ಸಾಧ್ಯವೇ, ಐತಿಹಾಸಿಕವಾಗಿ ಮತ್ತು ಪ್ರಸ್ತುತದಲ್ಲಿ 'ಜಾತಿ' ಎಂಬ ಘಟಕದ ಸ್ವರೂಪ ಲಕ್ಷಣಗಳೇನು ಎಂಬ ಬಗ್ಗೆ ನಿರ್ವಿಕಾರ ಚರ್ಚೆ ನಡೆಯಬೇಕಿದೆ.

●

ನನ್ನೊಳಗೆ ನಾನು

ಭರದಿಂದ ಸಾಗಿತ್ತು ಚರ್ಚೆ
ನಕ್ಸಲೀಯರ ಕೃತಿ ಕುರಿತ ವಿಮರ್ಶೆ
ಫ್ಯಾಸಿಸ್ಟರ ಹಿಂಸೆ, ನಕ್ಸಲೀಯರ ಪ್ರತಿಹಿಂಸೆ
ಬುದ್ಧ-ಗಾಂಧಿಯರ ಅಹಿಂಸೆ
ಅವತರಿಸಲಾರದೇ ಎಂದು
ಹ್ಯೂಮನಿಸ್ಟರ ಅಭಿಲಾಷೆ
ಯಾರು ಈ ಮಾರ್ಕ್ಸಿಸ್ಟ್ ನಕ್ಸಲೈಟ್ಸ್
ಹ್ಯೂಮನಿಸ್ಟ್ಸ್ ಫ್ಯಾಸಿಸ್ಟ್ಸ್ ಇತ್ಯಾದಿ ಪ್ರಶ್ನೆಗೆ
ಗಿಳಿಪಾಠ ಹೇಳಿತ್ತು
ಮಾರ್ಕ್ಸಿಸ್ಟೇ - ಲೆಫ್ಟಿಸ್ಟ್ಸ್
ಅಲ್ಟ್ರಾ ಲೆಫ್ಟಿಸ್ಟ್ಸ್ ನಕ್ಸಲೈಟ್ಸ್ ಎಂದು
ಹಾಗಾದ್ರೆ ಹ್ಯೂಮನಿಟ್ಸ್?

ಚರ್ಚೆಯ ಹಿಂಸೆ-ಪ್ರತಿಹಿಂಸೆಗೆ
ತಲೆ ಸಿಡಿತ, ಮರಳಿ-ಮನೆಗೆ.

ಪುಟ್ಟಾ ನಾವು ಲೆಫ್ಟಿಸ್ಟೋ, ರೈಟಿಸ್ಟೋ?
ಮಗುವಿಗೆ ಸವಾಲು!
ಯಾಕಮ್ಮಾ? ನಾವು ಲೆಫ್ಟಿಸ್ಟು ರೈಟಿಸ್ಟು
ಎರಡೂ ಅಲ್ವಾ? ಮರು ಸವಾಲು!!
ಹೇಗಪ್ಪಾ?
ನಾವು ಎಡಗೈ-ಬಲಗೈ, ಎಡಗಾಲು-ಬಲಗಾಲು
ಎಡಕಣ್ಣು-ಬಲಕಣ್ಣು.... ಉಪಯೋಗಿಸಲ್ವಾ?
ಓಹ್! ಎಷ್ಟು ಸರಳ!!

-ಲಕ್ಷ್ಮಿ

ಶಾಂತಿ ಪ್ರೇಮ ಸಹನೆ-ಸಹಬಾಳ್ವೆ ಇದು ನಮ್ಮ ಮತವಾಗಲಿ

ದ್ವೇಷವನ್ನು ವಿರೋಧಿಸಿ ಮತೀಯ ಅಂದಾಭಿಮಾನವನ್ನು ದೂರ ಮಾಡಿ ಮತಭ್ರಾಂತಿಯನ್ನು ತಿರಸ್ಕರಿಸಿ ನಮ್ಮ ರಾಷ್ಟ್ರದ ಸಂದ ಜಾತ್ಯಾತೀತ ಹಂದರವನ್ನು ವಿಚ್ಛಿದ್ರಕಾರಕ ಶಕ್ತಿಗಳು ಹಾಳು ಮಾಡಲು ಎಡೆಮಾಡಬೇಡಿ. ಭಾರತದ ಒಗ್ಗಟ್ಟು ಹಾಳಾದರೆ ರಾಷ್ಟ್ರ ಶಕ್ತಿ ಕುಂದುತ್ತದೆ. ಭಾರತ ಅಶಕ್ತರಾಗಲು ನಾವೆಂದಿಗೂ ಅವಕಾಶ ನೀಡಬಾರದು.

ಶತಶತಮಾನಗಳಿಂದ ಭಾರತದ ಪವಿತ್ರ ನೆಲದಲ್ಲಿ ವಿವಿಧ ಜನಾಂಗ, ಜಾತಿ, ಸಂಸ್ಕೃತಿಗಳು ಒಟ್ಟಿಗೆ ಅರಳಿವೆ. ಬಾಳಿ ಬದುಕಿದ ರಾಷ್ಟ್ರದ ಸಮಗ್ರ ಪ್ರಗತಿಗೆ ತಮ್ಮ ಕೊಡುಗೆಯನ್ನು ನೀಡಿ, ದೇಶಕ್ಕೆ ವಿಶ್ವದಲ್ಲಿಯೇ ಸರಿಸಾಟಿಯಿಲ್ಲದ ಅದ್ವಿತೀಯ ಸ್ಥಾನವನ್ನು ಗಳಿಸಿಕೊಟ್ಟಿವೆ.

ನಮ್ಮ ರಾಷ್ಟ್ರದ ಜಾತ್ಯಾತೀತ ತಳಹದಿ ಅಭದ್ರವಾಗುತ್ತಿದೆ. ಮತೀಯ ದ್ವೇಷಾಸೂಯೆಗಳಿಂದ ನಮ್ಮ ಪ್ರಗತಿ ಕುಂಠಿತವಾಗಿ ಆರ್ಥಿಕ ವಿಕಾಸ ಅಸ್ತವ್ಯಸ್ತವಾಗುವುದಕ್ಕೆ ಅವಕಾಶ ಮಾಡಿಕೊಡುವುದು ಸರಿಯೆ? ವಿಮರ್ಶಿಸಿ ನೋಡಿ.

ನಮ್ಮ ರಾಜ್ಯಾಂಗದಲ್ಲಿ ಅಳವಡಿಸಿರುವ ಪವಿತ್ರವಾದ ಜಾತ್ಯಾತೀತ ಆದೇಶಗಳಿಗೆ ಕಳಂಕ ಆಗುವುದು ನ್ಯಾಯವೇ? ವಿಚಾರ ಮಾಡಿ.

ರಾಷ್ಟ್ರದ ಶಾಂತಿ ಮತ್ತು ಪ್ರಗತಿಗಾಗಿ ಒಮ್ಮತದಿಂದ ಒಂದುಗೂಡಿ ಕೋಮು ಸೌಹಾರ್ದದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ.

ಮತೀಯ ಮನೋವಿಕಾರಗಳನ್ನು ಕಿತ್ತೊಗೆದು ಒಗ್ಗಟ್ಟು-ಒಮ್ಮನಸ್ಸಿನಿಂದ ತಲೆ ಎತ್ತಿ ನಿಲ್ಲೋಣ "ವಿಶ್ವದ ಎಲ್ಲಾ ರಾಷ್ಟ್ರಗಳ ಎಲ್ಲ ಜನಾಂಗಗಳ ತಿರಸ್ಕೃತಗೊಂಡವರಿಗೆ ಮತ್ತು ನಿರಾಶ್ರಿತರಿಗೆ ಆಶ್ರಯ ನೀಡಿದ ಪವಿತ್ರ ರಾಷ್ಟ್ರ ನನ್ನದೆಂಬ ಹೆಮ್ಮೆ ಮತ್ತು ಅಭಿಮತ ನನ್ನದು"- ಎಂಬ ಸ್ವಾಮಿ ವಿವೇಕಾನಂದರ ವಾಕ್ಯವನ್ನು ನಾವೆಲ್ಲರೂ ಪುನರುಚ್ಚರಿಸೋಣ.

ಕರ್ನಾಟಕ ವಾರ್ತೆ

ಟೆಡ್‌ಹ್ಯೂಸ್

-ಕೆ. ಎನ್. ವಿಜಯಲಕ್ಷ್ಮಿ

ಟೆಡ್‌ಹ್ಯೂಸ್ 1930ರಲ್ಲಿ ಹೋವರ್ಡ್‌ನ ಮೈತೋಲ್‌ಮೋಡ್ ಎಂಬ ಸ್ಥಳದಲ್ಲಿ ಹುಟ್ಟಿದ. ಅವನು ಶಿಕ್ಷಣವನ್ನ ಮೆಕ್ಸ್‌ಬರ್ಗ್ ಗ್ರಾಮರ್ ಸ್ಕೂಲಿನಲ್ಲಿ ಹಾಗೂ ಕೇಂಬ್ರಿಡ್ಜ್‌ನ ಪೆಮ್‌ಬ್ರೂಕ್ ಕಾಲೇಜುಗಳಲ್ಲಿ ಪಡೆದನು. ಅವನು ತನ್ನ ಕಾಲೇಜು ದಿನಗಳಲ್ಲಿ ಸಿಲ್ವಿಯಾ ಪ್ಲಾತ್ ಎಂಬ ಸುಪ್ರಸಿದ್ಧ ಕವಯತ್ರಿಯನ್ನು ಪ್ರೇಮಿಸಿ ವಿವಾಹವಾದ. ಓದಿನ ನಂತರ ಅನೇಕ ವೃತ್ತಿಗಳಲ್ಲಿ ತೊಡಗಿದ, ತೋಟಗಾರಿಕೆ ಕೆಲಸ ವಾಚ್‌ಮನ್ ಕೆಲಸ ಪೈನ್‌ವುಡ್ ಫಿಲಂ ಸ್ಟುಡಿಯೋದಲ್ಲಿ ರೀಡರ್ ಆಗಿದ್ದ 1956ರಲ್ಲಿ ಅಮೆರಿಕಾಗೆ ಬಂದು ನೆಲಸಿ ಶಿಕ್ಷಣವೃತ್ತಿಯನ್ನು ಕೈಗೊಂಡ.

ಸಿಲ್ವಿಯಾ ಮತ್ತು ಟೆಡ್‌ಹ್ಯೂಸ್

19ನೇ ಶತಮಾನದಲ್ಲಿ ನಡೆದ ಮೊದಲನೆಯ ಜಾಗತಿಕ ಯುದ್ಧದ ಸಂದರ್ಭದಲ್ಲಿ ಜನರ ಯೌವನ ಕನಸುಗಳನ್ನು ಭಗ್ನಗೊಳಿಸಿ ಕೊಂಡ ಕಾಲ. ಅಸ್ಥಿರತೆ, ಭ್ರಮನಿರಸನಗಳ ಮಧ್ಯ ತೊಳಲಾಡುತ್ತಿದ್ದ ಕಾಲ. ಟಿ.ಎಸ್. ಎಲಿಯಟ್ ತನ್ನ ಶ್ರೇಷ್ಠಪದ್ಯವಾದ 'ವೇಸ್ಟ್‌ಲ್ಯಾಂಡ್'ನ್ನು ಪ್ರತಿಮೆಯಾಗಿಸಿ 'ಪದ್ಯಕ್ಕೂ ಯಾವ ಶ್ರದ್ಧೆಗೂ ಸಂಬಂಧವಿಲ್ಲ' ಎಂಬ ತತ್ವ ಸಾರಿದ. ಓದುಗರನ್ನು ವಿಲಕ್ಷಣ ರೀತಿಯಲ್ಲಿ ಜಾಗೃತಗೊಳಿಸಿದ. ಈ ದೀರ್ಘ ಪದ್ಯವು ಸಮಕಾಲೀನ ಜಗತ್ತಿನಲ್ಲಿ ಗೊಂದಲವನ್ನುಂಟುಮಾಡಿತು. ಹೀಗೆ ಕಾವ್ಯಕ್ಕೆ ಹೊಸ ಆಯಾಮವನ್ನು ನಿರ್ಮಿಸಿದ ಎಲಿಯಟ್ ಕಾವ್ಯವನ್ನು ಎಜ್ರಾಪೌಂಡ್ ಸಂಗ್ರಹಿಸಿದ ರೊಮ್ಯಾಂಟಿಕ್ ಕಾವ್ಯವನ್ನು ತಿರಸ್ಕರಿಸಿ ನವ್ಯ ರೂಪಕ ಕಾವ್ಯಮಾರ್ಗವನ್ನು ಎಜಾಪೌಂಡ್ ಎತ್ತಿಹಿಡಿದ, ಈ ಕಾಲದಲ್ಲಿ ಅನೇಕ ಶ್ರೇಷ್ಠ ಕವಿಗಳಾದ ಆ್ವಡನ್ ಏಟ್ಸ್, ಫಿಲಿಪ್ ಲಾರ್ಕಿನ್, ಸ್ಟೀಫನ್ ಸ್ಪೆಂಡರ್, ನೆರೂಡ ಆಫ್ರಿಕಾದ ಕಪ್ಪು ಕವಿಗಳು ಹೀಗೆ ಜಗತ್ತಿನಾದ್ಯಂತ ಕಾವ್ಯ ಪ್ರಪಂಚದಲ್ಲಿ ನವ್ಯಕ್ರಾಂತಿ ಉಂಟಾದ ಕಾಲದಲ್ಲಿ ಟೆಡ್‌ಹ್ಯೂಸ್ ತನ್ನ ವಿಶಿಷ್ಟ ಶೈಲಿಯಲ್ಲಿ ಪ್ರಾಣಿರೂಪಕಗಳನ್ನು ಬಳಸಿ ಕಾವ್ಯರಚಿಸಿ ಪಶುಗಳಿಗೆ ತಕ್ಕ ಒರಟುತನ, ಕಾಠಿಣ್ಯ ರಭಸವನ್ನು ಒಳಗೊಂಡ ಭಾಷೆಯನ್ನು ಬಳಸಿದ. 'ಬುಲ್ಸ್ ಇನ್ ದ ಜೂನ್' 'ಡ್ರೀಮ್ ಆಫ್ ಹಾರ್ಸಸ್' ಕವನಗಳು ಫಿಲಿಪ್ ಲಾರ್ಕಿನ್ ಕವಿಯ 'ದಿಗ್ರಾಸ್' ಎಂಬ ಪದ್ಯವನ್ನು ಟೆಡ್‌ಹ್ಯೂಸನ 'ಡ್ರೀಮ್ ಆಫ್ ಹಾರ್ಸಸ್' ಕವಿತೆಗೆ ಹೋಲಿಸಲಾಗಿದೆ.

ಲಾರ್ಕಿನ್ ಕುದುರೆಗಳು ಪಳಗಿಸಿದ ಫ್ಯಾಷನಬಲ್ ಆದ ರೇಸ್ ಕುದುರೆಗಳು ಹ್ಯೂಸ್‌ನ ಕುದುರೆಗಳು ಕಾಡಿನಲ್ಲಿ ಬೆಳೆದ 'ಕಾಡು ಕುದುರೆಗಳು' ರಭಸದಿಂದ ಕೂಡಿದ ಶಕ್ತಿಯುತ ಭಯಾನಕ ಕುದುರೆಗಳಾದ ಇವು ಈ ಕ್ರೂರ ಜಗತ್ತಿನಲ್ಲಿ ಬಾಳುವ ಮನುಷ್ಯನ ಮನಸ್ಸಿನ ಪ್ರಕ್ಷುಬ್ಧತೆಗೆ ಸಂಕೇತ. ಈ ಕುದುರೆಗಳ ಸಂಕೇತದ ಅರ್ಥವ್ಯಾಪ್ತಿ ಈ ಪದ್ಯದಲ್ಲಿ ಹೆಚ್ಚುತ್ತಾ ಹೋಗುತ್ತದೆ. ಈ ಕಾಲದಲ್ಲಿ ಮನೋವಿಶ್ಲೇಷನಾತ್ಮಕ ಕವಿತೆಗಳು ಮಾತ್ರವಲ್ಲದೆ ಕಾದಂಬರಿ ಪ್ರಪಂಚದಲ್ಲೂ ಅನೇಕ ಬದಲಾವಣೆಗಳು ಆದವು ಎಚ್. ಲಾರೆನ್ಸ್ ತನ್ನ ಕಾದಂಬರಿಗಳಿಗೆ ಹೊಸ ಆಯಾಮ ನೀಡಿದ. ಕೋಲ್‌ರಿಜ್, ಹೇಳಿದ ಭಾವನಾತ್ಮಕ ಪ್ರಪಂಚದಿಂದ ಸಾಹಿತ್ಯ ಜಗತ್ತು ಬೌದ್ಧಿಕ ಪ್ರಪಂಚದತ್ತ ಜಗಿಯಿತು. ಕಾವ್ಯವು ಸಹ ಗದ್ಯದ ಕಸುವನ್ನು ಹೀರಿ ಆಡುಮಾತಿನ ಗತ್ತು, ನಾಟಕೀಯತೆ, ವಿಶಿಷ್ಟ ಲಯಗಾರಿಕೆ ಯಿಂದ ಹೊಸ ಅನುಭವವನ್ನು ಗ್ರಹಿಸಲು ಹಾಗೂ ಸಮರ್ಥವಾಗಿ ಅಭಿವ್ಯಕ್ತಿಗೊಳಿಸಲು ತನ್ನದೇ ಮಾರ್ಗವನ್ನು ಅದು ಕಂಡುಕೊಂಡಿತು.



ಟಿ.ಎಸ್. ಎಲಿಯಟ್ ಹೇಳುತ್ತಾನೆ, ಯಾವುದೇ ಕಲೆಯ ಪ್ರಪಂಚದಲ್ಲಿ ಅನುಭವ 'ವನ್ನು ಗ್ರಹಿಸಲು ಸಾಧ್ಯವಿದ್ದವನು ತನ್ನ ಆಯುಸ್ಸಿನಲ್ಲಿ ಹತ್ತು ವರ್ಷಕ್ಕೊಮ್ಮೆ ತನ್ನ ಸುತ್ತಲಿನ ಜಗತ್ತು ಬದಲಾಗುತ್ತಿರುವುದನ್ನು ಕಾಣುತ್ತಾನೆ. ಅದನ್ನು ಅವನು ಭಿನ್ನ ದೃಷ್ಟಿಯಿಂದ ನೋಡುತ್ತಿದ್ದಂತೆ ಅದು ನೃತ್ಯ ಚಿತ್ರ ಕಾವ್ಯ ಸಂಗೀತ ಯಾವುದೇ ಕಲೆಯ ಪ್ರಕಾರವಾಗಿರ ಬಹುದು. ಆ ಕಲೆಯೂ ಮಾರ್ಪಾಡಾಗುತ್ತಾ ಹೋಗುತ್ತದೆ. ಹೀಗೆ ಹೊಸ ಅನುಭವಗಳ ನೆಲೆಯನ್ನು ಕಂಡುಕೊಂಡ ಕಾವ್ಯ ಹೊಸ ಕಾಣೆ ಹೊಳಹುಗಳ ಆವಿಷ್ಕಾರವನ್ನು ಪಡೆಯಿತು. ಸಾಂಪ್ರದಾಯಿಕ ರೂಪಗಳ ನವ್ಯ ನುಡಿಕಟ್ಟುಗಳ



ಮೂಲಕ ಹೆಚ್ಚು ಸಂಕ್ಷಿಪ್ತವಾಗಿ ಹರಿತವಾದ ಭಾಷೆಯ ಮೂಲಕ ಅಭಿವ್ಯಕ್ತಿಗೊಂಡವು. ಈ ಕಾಲದಲ್ಲಿ ಡಿಲಾನ್ ಥಾಮಸ್ ನವ್ಯ ಪಂಡಿತ ಎನಿಸಿಕೊಂಡ. ಆತ ಬದುಕಿದ್ದು ಕೇವಲ ಮೂವತ್ತು ವರ್ಷಗಳು ಮಾತ್ರ. ಸಾಯುವ ಮುನ್ನ ಹದಿನೆಂಟು ವಿಸ್ಕಿ ಬಾಟಲುಗಳನ್ನು ನೇರವಾಗಿ ಕುಡಿದೆ ಎಂದು ಹೇಳಿಯೇ ಪ್ರಾಣಬಿಟ್ಟ. ಈತ ಅತ್ಯಂತ ಪ್ರತಿಭಾವಂತ ನವ್ಯಕವಿ. ಈತನ ಕಾವ್ಯ ಪಠನವನ್ನು ಕೇಳಲು ನ್ಯೂಯಾರ್ಕಿನಲ್ಲಿ ಜನ ಗೇರಾಯಿಸುತ್ತಿದ್ದರು. ವಿವಿಧ ಬಗೆ ವೇಷ ತೊಟ್ಟು ವಿಶಿಷ್ಟ ರೀತಿಯಲ್ಲಿ ಕಾವ್ಯ ಓದುವ ಕಲೆಯಿಂದ ಕಾವ್ಯ ಪ್ರೇಮಿಗಳನ್ನು ಆಕರ್ಷಿಸುವದು ಈತನಿಗೆ ಕರಗತವಾಗಿತ್ತು.

ಈ ಡಿಲಾನ್ ಥಾಮಸ್ (1914-53) ಅನೇಕ ಶ್ರೇಷ್ಠವಾದ ಕವಿತೆಗಳನ್ನು ಬರೆದ ಬೌದ್ಧಿಕ ಕವಿ ಎನಿಸಿಕೊಂಡ. ಇವನ ಕವನದ ಕೆಲವು ಸಾಲುಗಳನ್ನು ನೋಡಿ:

ಈ ಮನುಕುಲವನ್ನು ನೋಡುತ್ತಾ ಬಂದಂತೆ
ಪಶು ಪಕ್ಷಿ ಪ್ರಾಣಿಗಳು ಹೇಗೊ ನಾಶವಾಗುವುವು
ಈ ರಾತ್ರಿ ಮೌನದಲ್ಲಿ ಉಸುರುತ್ತಿದೆ ಇದೇ ಕೊನೆ ಬೆಳಗು,
ಇದೇ ಕೊನೇ ಗಳಿಗೆ
ಇದು ಸಮುದ್ರದ ಅಂತರಾಳದಿಂದ ಉರುಳುತ್ತಾ
ಮೇಲೆದ್ದು ಬರಲಿದೆ.

ಸಾವಿನ ಬಗ್ಗೆ ಬರೆದ ಈ ಕವಿತೆ ಹೀಗೆ ಮುಂದುವರಿಯುತ್ತದೆ. ಮತ್ತೊಂದು ಕಡೆ-

ನಾನು ಚಿಕ್ಕವನಿದ್ದಾಗ ಎಲ್ಲಾ ದೇವರ ದಯೆ ಎಂದೇ ತಿಳಿದಿದ್ದೆ.
ಬೆಳೆದಂತೆಲ್ಲಾ ಕಾಲವೇ ಸಾವನ್ನೂ ತಂದಿತ್ತು
ಸಮುದ್ರವು ಎಲ್ಲೆ ಮೀರಲು ನಿರಂತರ ಭೋರ್ಗರೆಯುವಂತೆ
ನಾನು ನನ್ನ ಬಂಧನದಲ್ಲೆ ಮೊರೆಯುತ್ತಾ ಹಾಡುವೆ.

1916ರಲ್ಲಿ ಸಿಟ್‌ವೆಲ್ ಎಂಬ ಕವ ಯತ್ರಿಯ 'ವೀಲ್ಸ್' ಎಂಬ ಕವನ ಸಂಕಲನ ಅತ್ಯಂತ ಪ್ರಸಿದ್ಧಿ ಪಡೆದು ಎಲಿಯಟ್‌ನಿಂದಲೂ ಮೆಚ್ಚುಗೆಗೆ ಪಾತ್ರ ವಾಯಿತು. ವಿಲಿಯಂ ಗೋಲ್ಡಿಂಗ್‌ನು 1983 ರಿ ರೈಟ್ಸ್ ಆಫ್ ಪ್ಯಾಸೇಜ್ ಎಂಬ ಕಾದಂಬರಿಗೆ ನೋಬೆಲ್ ಪ್ರಶಸ್ತಿಯೂ ಬಂದಿತು. ಜೇನ್ ಆಸ್ಟಿನ್, ವರ್ಜಿನಿಯಾ ಉಲ್ಫ್, ಎಮಿಲಿ ಬ್ರಾಂಟೆ, ಜಾರ್ಜ್ ಇಲಿಯಟ್, ಎಲಿಜಬತ್ ಟೈಲರ್ ಮುಂತಾದ ಶ್ರೇಷ್ಠ ಕಾದಂಬರಿಕಾರ್ತಿಯರೂ ಈ ಕ್ಷೇತ್ರದಲ್ಲಿ ಶ್ರೇಷ್ಠ ಬರಹಗಳನ್ನು ಕೊಟ್ಟರು. ಹೆಮಿಂಗ್‌ವೇ ಇ.ಎಂ. ಫಾಸ್ಟರ್ ಇವರ ನವ್ಯಕಾದಂಬರಿಗಳು ಓದುಗರ ಗಮನವನ್ನು ವಿಶೇಷವಾಗಿ ಸೆಳೆದವು.



ಅತ್ಯಂತ ಶ್ರೇಷ್ಠ ಕವಿಗಳು ಕಾವ್ಯ ರಚಿಸುತ್ತಿದ್ದ ಸಂದರ್ಭದಲ್ಲಿ ಟೆಡ್‌ಹ್ಯೂಸ್ ತನ್ನದೇ ವಿಶಿಷ್ಟ ರೀತಿಯಲ್ಲಿ ಓದುಗರ ಕುತೂಹಲವನ್ನು ಕೆರಳಿಸುವಂಥ ಕಾವ್ಯ ರಚಿಸಿದನು. ಆತನ 'ಮೂನ್ ಟೌನ್' 'ಅಂಡರ್‌ದ ನಾರ್ತ್ ಸ್ಟಾರ್', 'ಕ್ರೋ ಪೊಯಮ್ಸ್' ಈ ಸಂಕಲನಗಳಲ್ಲಿ ಪ್ರಾಣಿ ಪ್ರತೀಕಗಳು ಮಾನವನ ಸ್ವಭಾವವನ್ನು ಪ್ರತಿನಿಧಿಸುತ್ತದೆ. ಕ್ರೊಪೊಯಮ್ಸ್ ಇಪ್ಪತ್ತೊಂಬತ್ತು ಪದ್ಯಗಳಿರುವ ರೇಖಾ ಚಿತ್ರಗಳಿರುವ ಪ್ರಸಿದ್ಧ ಕೃತಿ. ಗೋಡಿತ್ (Gaudete) ಎಂಬುದು ಕಥನ ಕವನ. ಕ್ರಿಶ್ಚಿಯನ್ ಧರ್ಮಬೋಧಕ ಪಾದ್ರಿಯೊಬ್ಬ ಒಂದು ಮೃಗದ ಬದಲಿಗೆ ನರಕದಲ್ಲಿ ಸಿಕ್ಕು ಸಾಯುವ ಸಂದರ್ಭದಲ್ಲಿ ಆತ ಮನುಷ್ಯನಾಗಿ ಮಾರ್ಪಟ್ಟು ಎಲ್ಲರನ್ನೂ ಅಚ್ಚರಿಗೊಳಿಸುವ ಕತೆ ಇದೆ. 'ರಿನೈನ್ಸ್ ಆಫ್ ಎಲ್‌ಮೆಟ್' ಎಂಬ ಸಂಕಲನದಲ್ಲಿ ಗ್ರಾಮೀಣ ಜೀವನದ ಚಿತ್ರಣವಿದೆ. ನೇಕಾರರ ಸುಂದರ ಚಿತ್ರಗಳನ್ನು ಒಳಗೊಂಡ ಕೃತಿ ಇದು. ಪ್ರೊ. ಮಿಥಿಯಸ್ ಆನ್ ದ ಕ್ರಾಗ್ ಎಂಬ ಮತ್ತೊಂದು ಕೃತಿ ಈತ ರಚಿಸಿದ್ದಾನೆ. 'ಆ್ಯಡಮ್ ಆಂಡ್ ದ ಸೇಕ್ರೆಡ್ ನೈನ್' ಎಂಬ ಕೃತಿಯಲ್ಲಿ ಆ್ಯಡಂ ಒಂಬತ್ತು ಹಕ್ಕಿಗಳನ್ನು ಸಂಧಿಸುವನು. ಒಂದೊಂದು ಹಕ್ಕಿಯೂ ಒಂದೊಂದು ನೀತಿ ಕತೆ ಹೇಳಿ ಉಪದೇಶ ಮಾಡುವುದೇ ಈ ಕೃತಿಯ ವಸ್ತುವಾಗಿದೆ.

ಕನಸಿನ ಕುದುರೆಗಳು

ನಾವು ಹುಟ್ಟಿದ್ದೆ ಈ ಹುಲ್ಲುಕಡ್ಡಿಗಳಂತೆ, ಕುದುರೆಲಾಯದಲ್ಲೆ ನನ್ನ ನಿದ್ದೆ
ನನ್ನ ಆಸ್ತಿ ಎಲ್ಲಾ ಈ ಕುದುರೆ ಲದ್ದಿ, ಕುದುರೆ ಮಾಲೀಸು ಹೀಗೆ
ನಮ್ಮ ಕೆಲಸ, ಆಡುವ ಮಾತೂ ಕುದುರೆ ಕೆನೆತದ ಮೇಲೆ

ಅರಮನೆಯ ಹೆಬ್ಬಾಗಿಲನ್ನು ದಾಟಿ ಹೋಗಿತ್ತು ಅಂದು ರಾತ್ರಿ
ಬರೇ ಹೇಶಾರವದ ಸದ್ದು ನಮ್ಮ ಕುದುರೆಗಳು ಹೊಡೆತಕ್ಕೆ ಸಿಕ್ಕು
ಅಂದೇ ಎಲ್ಲಾ ಅಂಗಡಿಗಳ ಹಾಳುಗೆಡವಿತ್ತು ಅವುಗಳ ಕಣ್ಣುಗುಡ್ಡೆಗಳು ಬಿಳಿಚಿಕೊಂಡಿದ್ದವು

ಇನ್ನು ನಾವ್ಯೋ ಜೇಬಲ್ಲಿ ಇಲಿ ತಲೆಯ ಮೇಲೆ ಹುಲ್ಲು ಓಡಿದೆವು
ಆ ಕಗ್ಗತ್ತಲಲ್ಲೂ ನಮ್ಮ ಕುದುರೆಗಳ ಅರಸಿ ಓಡಿದೆವು
ನಮ್ಮ ಲಾಟೀನು ಕಿರುಕೆಂಪು ಬೆಳಕಲ್ಲಿ ಹುಡುಕಲು ಕೇಳಿಸಿತು ಕೆನೆತ

ನಮ್ಮ ತೇಲುನಿದ್ದೆಗಣ್ಣುಗಳು ಮಂಕು ಮುಖಮುದ್ರೆ
ನಮ್ಮ ತಲೆಯಲೆಲ್ಲಾ ಅವುಗಳದೇ ಧ್ಯಾನ
ಗುಂಡಿನ ದಾಳಿಯ ನಡುವೆ ಲಗಾಮು ಹಿಡಿದೆಳೆದು

ಆಹಾ! ಎತ್ತರದ ಬಿಳಿ ಅರಮನೆ ಎಂಥ ಬೆಳುಪು
ಆ ದುಂಡನೆಯ ಚಂದ್ರ ಏನು ಹೊಳಪು!
ರಭಸದಿಂದ ಮುನ್ನುಗ್ಗುವ ಖುರ ಪುಟಗಳ ಸದ್ದು
ನಮ್ಮ ಕಣ್ಣಮುಂದೆ ಬರೀ ಆಕಾರ, ಶಬ್ದ, ವೇಗ

ನಮ್ಮ ಲಾಟೀನು ಏರಿಸಿ ಆಸ್ಫೋಟಗಳ ನಡುವೆ ಎಂಥ ಕೋಲಾಹಲ
ನಾವು ಅದರ ತುಳಿತಕ್ಕಾದರೂ ಸಿಕ್ಕಿ ಸಾಯಬಾರದೆ
ಈ ಭೂಮಿಯ ಕಣ ಕಣದಲ್ಲೂ ಅದರ ವಿಲಕ್ಷಣ ಕೆನೆತ
ಆ ಕುದುರೆಗಳ ಖುರಪುಟಗತಿಯನ್ನು ಜೋಗುಳದಂತೆ ಆಲಿಸುತ್ತ
ಆ ಲಾಯದ ಹುಲ್ಲು ಲದ್ದಿ ಗಬ್ಬು ಬೆವರು ವಾಸನೆ ಸಿನಗು
ಪಾಪ ಆ ಕಾಡು ಕುದುರೆಗಳ ಹಿಡಿದು ಕಟ್ಟಿದೆವು

ಆ ಕಾಡು ಕುದುರೆಗಳಿಗೂ ಎಂದಾದರೊಮ್ಮೆ ಅದೃಷ್ಟ ಒಲಿದು
ಅದರ ಹೇಷಾರವವು ಎಲ್ಲೆಡೆಯೂ ಮೊಳಗಿ
ಅದರ ಖುರಪುಟದ ಭೀಕರ ನಾದ ಎಲ್ಲರನೂ ತಲ್ಲಣಿಸಲಿ

ಸೆಪ್ಟೆಂಬರ್

ನಿಧಾನವಾಗಿ ಕತ್ತಲಾವರಿಸುತ್ತಿರುವುದನ್ನು
ನೋಡುವೆನು
ಗಡಿಯಾರ ಇದನ್ನು ಲೆಕ್ಕಿಸದು

ಬಿಗಿಯಪ್ಪುಗೆಯ ಬಿಸಿ ಚುಂಬನಗಳು
ಕಾಲಕ್ಕೆ ಅದರ ಲಕ್ಷ್ಯವಿಲ್ಲ
ಬಿರು ಬಿಸಿಲಿಗೆ ಅಲ್ಲಾಡದೆ ನಿಂತ ಎಲೆಗಳ
ಕಣ್ಣಿನ ಹಿಂದೆ ಒಂಟಿನಕ್ಷತ್ರ
ಹೊಳೆವ ನುಣುಪು ಮರಳಂಚಿನ ಕಡಲು
ಕಾಲವೆಲ್ಲಿದೆ ಎಂದು ಉಸುರಲಿಲ್ಲ

ನಾವು ನಿಂತಂತೆ ಎಲೆಗಳು ಕಾಲವನ್ನು ಲೆಕ್ಕಿಸದೆ
ಗಡಿಯಾರವೂ ಕಾಲವನ್ನು ಮರೆತಂತೆ ಇರಲು
ಹೇಳು, ನಮಗೆ ಉಳಿದಿರುವುದೊಂದೆ ನೆನಪುಗಳು
ನನ್ನ ಶಿರದ ಮೇಲೆ ಭೋರ್ಗರೆವ ಗಂಟೆ ನಿಮಿಷಗಳು

ಅದೃಷ್ಟಹೀನ ರಾಜರಾಣಿಯರಂತೆ
ತಲೆಹೋಕರು ಆಳುವ ರಾಜ್ಯದಂತೆ
ಮೌನಿಮರಗಳ ಮುಂತುದಿಯ ಛಾಯೆ
ಪ್ರತಿಫಲಿಸುತ್ತಿವೆ ತಿಳಿನೀರ ಕೊಳದಲ್ಲಿ.

ಅಕ್ಟೋಬರ್

ಅಕ್ಟೋಬರ್ ತಿಂಗಳೆಂದರೆ ಚೆಂಡುಹೂವಿನ ಸುಗ್ಗಿ
ಅರ್ಧಬಟ್ಟಲು ಮದ್ಯ ತಳದಲ್ಲಿ

ಆಕಾಶ ತುಂಬಲಿದ್ದ ಕಪ್ಪು ಇರುಳಿನ ರಾತ್ರಿ
ಮುಂಜಾವಿನ ವೇಳೆ ನಿದ್ದೆ ಎಚ್ಚರ ಕನಸು

ಸುತ್ತೆಲ್ಲ ಮಂಜು ಮುಸುಕಿದಂತೆ ಈ ಕಣ್ಣಾ ಮಂಜು
ವರುಷಗಳು ಸಂದಂತೆ ವೃದಾಪ್ಯ ಏದುಸಿರು

ಹಸಿರು ಹುಲ್ಲಿನ ಹಾಸು ಸುಕ್ಕಾಗಿ ಹಳದಿ
ನಿನ್ನೆ ರಾತ್ರಿಯಷ್ಟೆ ಇಲ್ಲಿ ಹಸಿರು ಸಿಳ್ಳು ಹಾಕುತಿತ್ತು

ಸ್ಟ್ರಾಬರಿ ಹಣ್ಣುಗಳ ಕಡುಗೆಂಪು ಕಂಪು
ಆದರ ನೆತ್ತಿಯ ಮೇಲೆ ಮಂಜುಗಡ್ಡೆಯ ತಂಪು

ಹಿಂದೆ ಯೌವನದಲ್ಲಿ ಹೊಳೆವ ಚರ್ಮ
ಇಂದು ಚಳಿಗಾಳಿ ಹೊಡೆತಕ್ಕೆ ಸುಕ್ಕಾಗಿದೆ

ಚಿಮ್ಮುವ ಕಾರಂಜಿ ನೀರಿಗೆ ಮೊಳೆ ಬಡಿದು ತಡೆದು
ಕಬ್ಬಿಣದ ಬೀಗ ಸರಪಳಿಗಳ ಜಡಿದು

ದಡಮೀರದ ನದಿಯ ಆರ್ಭಟ ನೋಟ
ಬಳಿದಂತದಾನೆಯ ವೇಗದ ಓಟ

ಬಿಸಿಲು ಮಳೆ ಬೆರೆತ ಎಂಥ ಪ್ರಕೃತಿ ಕೂಟ
ಚಳಿ ಬೆಂಕಿ ಹಿಂಡಿ ಇಬ್ಭಾಗಿಸಿದ ಜಗ

ತಾಪದಿಂದ ಬೆಂದು ಬಸವಳಿದ ಹೃದಯ
ಈಗ ಮತ್ತೆ ಜೀವಿಸಲು ತೊಡಗಿದೆ.

ನರಿಯ ತಂತ್ರ

ಈ ನಟ್ಟಿರುಳು ಕಾಡು ಹೀಗಿರಬಹುದು
ಅತ್ತಿತ್ತ ಸುಳಿವ ಜೀವ ಜಂತುಗಳು
ಗಡಿಯಾರದ ಏಕಾಕಿತನದ ನಡುವೆ
ಖಾಲಿಪುಟಗಳ ಮೇಲೆ ನನ್ನ ಕೈಬೆರಳು

ಕಿಟಕಿಯಾಚೆ ಚಿಕ್ಕೆಗಳ ಸುಳುಹಿಲ್ಲ
ಮತ್ತೂ ಇನ್ನೂ ಹತ್ತಿರ

ಕಗ್ಗತ್ತಲ ಗುಹಾಂತರಾಳದಲ್ಲಿ
ಏಕಾಕಿತನ ನುಸುಳಿ ಕಾಡುತ್ತಿದೆ
ಛಳಿ, ಹಾಗೆ ಹರಡಿದ ಸೂಕ್ಷ್ಮ ಮಂಜು
ನರಿಯೊಂದು ರಂಬೆ ಕೊಂಬೆಯ ಮೂಸುತಿರಲು
ಅದರ ಹೊಳೆ ಹೊಳೆವ ಎರಡು ಕಣ್ಣುಗಳ
ನಿಗಿನಿಗಿ ಉರಿವ ಕೆಂಡದುಂಡೆ

ದಟ್ಟಮಂಜು, ಹೆಜ್ಜೆ ಮೇಲೊಂದು ಹೆಜ್ಜೆ
ಮರಗಳ ಪೊದರಲ್ಲಿ ನವಿರಾಗಿ ನಡೆವ
ಬೆಳಕು ನೆರಳಿನಾಟ ಹೂತ ಹಿಂದಿನ ಪಾದ
ಕೊಬ್ಬಿ ನುಗ್ಗುವ ದಿಟ್ಟ ನರಿಯದೇಹ.

ಕಣ್ಣು ನೋಡಿದಷ್ಟೂ ದೂರ
ಅಚ್ಚಕಪ್ಪಿನ ಹಸಿರೇ ಹಸಿರು
ಈ ತೀಕ್ಷ್ಣಮತಿ ದಟ್ಟ ಪೊದೆಗಳಲ್ಲಿ
ತನ್ನ ಕಾರ್ಯದಲ್ಲಿ ತಾನು ಮಗ್ನ

ಈ ನರಿ ಸುಳಿದಾಡಿದ ತಾಣ ಗಬ್ಬುನಾತ
ಕತ್ತಲ ಕಪ್ಪು ಸುರಂಗದಲ್ಲಿ ತೂರಿದ ತಲೆ
ಕಿಟಕಿಯಾಚೆ ಚಿಕ್ಕಿಗಳೇ ಇಲ್ಲ, ಗಡಿಯಾರದ ಸದ್ದು
ಖಾಲಿ ಹಾಳೆಯ ಮೇಲೆ ಈ ನನ್ನ ಕವನ.

(ಟೆಡ್‌ಹ್ಯೂಸ್ ತನ್ನ ಕವಯತ್ರಿ ಪತ್ನಿ ಸಿಲ್ವಿಯಾ ಪ್ಲಾತ್‌ಗಳನ್ನು ತೊರೆದು ಬೇರೆ ಹೆಣ್ಣಿನೊಂದಿಗೆ ಸಂಸಾರ ಹೂಡಿದ. ಈ ಆಘಾತವನ್ನು ತಾಳಲಾರದ ಅತ್ಯಂತ ಪ್ರತಿಭಾಶಾಲಿಯೂ ಬುದ್ಧಿಮತ್ತೆಯಿಂದಲೂ ಕೂಡದ ಸ್ಟಿಲ್ವಿಯಾ ಪ್ಲಾತ್ ಉರಿಯುತ್ತಿದ್ದ ಒಲೆಗೆ ತಲೆಒಡ್ಡಿ ಆತ್ಮಹತ್ಯೆ ಮಾಡಿಕೊಂಡಾಗ ಆಕೆಗೆ ಕೇವಲ ಮುವತ್ತು ವರ್ಷಗಳು. ಎರಡು ಮಕ್ಕಳನ್ನು ತೊರೆದು ಅವಳು ಆತ್ಮಹತ್ಯೆ ಮಾಡಿಕೊಂಡಳು. ಟೆಡ್‌ಹ್ಯೂಸ್ 1998 ಅಕ್ಟೋಬರ್ ತಿಂಗಳಲ್ಲಿ ಮರಣಹೊಂದಿದ. 'ಸಿಲ್ವಿಯಾ ಪ್ಲಾತ್'ಳ ಕಾವ್ಯವನ್ನು ನಾನು ಕನ್ನಡಕ್ಕೆ ಅನುವಾದಿಸಿದ್ದೇನೆ.)

ಅಕಾತಾರೊ ತಥಾಗತಃ

ಏಸುಮಂದಿ ಆಗಿಹೋದರೂ,
ಬುದ್ಧ ಏಸು ತಾಯಿ ತೆರೇಸ
ಪರಮಹಂಸ ಗಾಂಧಿ ಇವರು
ಮಾತ್ರ ಅಮರರಾದರು

ಕರುಣೆ ಪ್ರೀತಿಗಳ ಹರಿಸಿ
ಚಂದ ಬದುಕ ಬಾಳಿ
ನೆಮ್ಮದಿಯ ಚೆಲ್ಲಿದವರು
ಮಾತ್ರ ನೆನಪಲುಳಿದರು

ನಮ್ಮ ನಿಮ್ಮಂತೆ ಯುದ್ಧ
ಗೊಂದಲಗಳ ನಡುವೆ ಇದ್ದ
ಇವರು ಸಮತೆಯೊಳ್ ಇದ್ದ
ಮಾತ್ರವೆ ಪರಮಹಂಸರಾದರು

ದಿವ್ಯ ಬೆಳಕೇ ಇವರು;
ನಿಮ್ಮ ಬಾಳು ಬೆಳಕಾಗಲು
ಬೆಳಕ ಹಾದಿಯಲಿ ನೀವು
ಮಾತ್ರವೆ ನಡೆಯಬೇಕು ಎಂದರು

ಎದ್ದು ಬುದ್ಧ ಬರಲಿ
ನಮ್ಮೊಳಗಿನ ಬುದ್ಧ
ಎದ್ದು ಬರಲಿ
ನಮ್ಮೊಳಗಿನ ಬುದ್ಧ
ಎದ್ದು ಬರಲಿ

-ಮೊಳಕಾಲ್ಮುರು ಶ್ರೀನಿವಾಸಮೂರ್ತಿ

ಕಪೋಲ ಕಲ್ಪಿತ ಕಲಾಸಾಹಿತ್ಯ: ಒಂದು ಚರ್ಚೆ



❒ ಎಚ್. ಎ. ಅನಿಲ್‌ಕುಮಾರ್

ಅನಿಲ್‌ಕುಮಾರ್‌ರವರ ಈ ದೀರ್ಘ ಲೇಖನವನ್ನು, ಕಲೆಯನ್ನು ಕುರಿತ ಚರ್ಚೆಯ ದೃಷ್ಟಿಯಿಂದ ಪ್ರಕಟಿಸುತ್ತಿರುವೆ. ಅನಿಲ್‌ಕುಮಾರ್‌ರವರು ಚಿತ್ರಕಲಾವಿದರಾಗಿ ಮತ್ತು ಅದರ ವಿಮರ್ಶಕರಾಗಿ ಇತ್ತೀಚಿನ ವರ್ಷಗಳಲ್ಲಿ ಗಮನಸೆಳೆದವರು. ಚಿತ್ರಕಲೆಗೆ ಸಂಬಂಧಿಸಿದಂತೆ ದಟ್ಟವಾದ ಒಳನೋಟಗಳನ್ನುಳ್ಳವರು. ಒಂದು ದೃಷ್ಟಿಯಿಂದ ಈ ಲೇಖನ ಕಲಾವಿದ ಮತ್ತು ಅದರ ವಿಮರ್ಶಕ ಚಿ. ಸು. ಕೃಷ್ಣಶೆಟ್ಟಿ ಅವರಿಗೆ ಪ್ರತಿಕ್ರಿಯೆಯಾಗಿ ಬರೆದ ಲೇಖನ. 'ಸಂಕುಲ' ಪತ್ರಿಕೆಯಲ್ಲಿ ಇದರ ಚರ್ಚೆ ಪ್ರಾರಂಭವಾಗಿತ್ತು.

ಈ ಲೇಖನಕ್ಕೆ ಪೂರಕವಾಗಿ ಅನಿಲ್‌ಕುಮಾರ್ ಅವರ ಶ್ರೀಮತಿ ಸುರೇಖ ಇರುವ ಚಿತ್ರವನ್ನು ಪ್ರಕಟಿಸುತ್ತಿರುವೆ. ಸುರೇಖರವರೂ ಸಹ ನನಗೆ ಪ್ರಿಯವಾದ ಕಲಾವಿದೆ. ಇವರಿಬ್ಬರೂ ಕೇವಲ ಚಿತ್ರಕಲಾವಿದರಾಗಿ ಮಾತ್ರವಲ್ಲ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಅಷ್ಟೇ ಗಂಭೀರವಾಗಿ ತೆಗೆದುಕೊಂಡಿರುವಂಥವರು. ಶಾಂತಿನಿಕೇತನ ಮತ್ತು ಬರೋಡ ಕಲಾ ವಿದ್ಯಾಲಯಗಳು ಈ ರೀತಿಯ ಚಿಂತನೆಯ ನೆಲೆಯನ್ನು ಒದಗಿಸಿಕೊಟ್ಟಿರುವುದು ಸಂತೋಷದ ಸಂಗತಿ.

ಸಂ.

23.5.99 ಹಾಗೂ 30.5.99 ತಾರೀಕು ಟೈಂಸ್ ಆಫ್ ಇಂಡಿಯ ಪತ್ರಿಕೆಯಲ್ಲಿ ಕಲೆಯನ್ನು ಕುರಿತಾದ ನನ್ನ ಎರಡು ಬರಹಗಳು ಪ್ರಕಟಗೊಂಡವು. 'ವಾರದ ಕಲಾವಿಮರ್ಶೆ'ಯ ಅಂಕಣದಡಿಯಲ್ಲಿ ಪ್ರಕಟವಾದ ಈ ಬರಹಗಳು 'ಸ್ಥಳಪುರಾಣಗಳು' ಎಂಬ ಕಲಾಪ್ರದರ್ಶನವನ್ನು ಕುರಿತದ್ದಾಗಿತ್ತು. ಎಂಟು ವರ್ಷದ ನನ್ನ ಪತ್ರಿಕಾ ಕಲಾಬರಹದ ಅನುಭವದಲ್ಲಿ ಮೊದಲ ಬಾರಿಗೆ ಒಂದು ಪ್ರದರ್ಶನವನ್ನು ಕುರಿತು ಎರಡು ವಾರ ಬರೆದಿದ್ದೆ. ಈ ಪ್ರದರ್ಶನವನ್ನು ಕುರಿತು 'ಬರಹ' ರೂಪದ ನನ್ನ ಪ್ರತಿಕ್ರಿಯೆಯ ಹೆಚ್ಚುಗಾರಿಕೆಯೂ ಇದೇ ಎಂದು ನಾನು ತಿಳಿದಿದ್ದೆ. ಆದರೆ, "ಅದಕ್ಕಿಂತಲೂ ಹೆಚ್ಚಿನ ಸೌಭಾಗ್ಯ ತಮಗೊದಗಿದೆ" ಎಂದು ಈ ಬರಹಗಳು ಇತ್ತೀಚೆಗೆ ಕೂಗಿ ಕೂಗಿ ನಿರೂಪಿಸಿಬಿಟ್ಟವು. ಅರ್ಥಾತ್ ಕಲಾವಿಮರ್ಶಕರೊಬ್ಬರನ್ನು (?) 'ಹಸೀ ಸುಳ್ಳ'ನೆಂದು ಯಾವುದೇ ರೀತಿಯ ಅನುಮಾನಕ್ಕೆ ಎಡೆ ಇಲ್ಲದಂತೆ (ರೆಡ್‌ಹ್ಯಾಂಡಾಗಿ ಅನ್ನುತ್ತೇವಲ್ಲ, ಹಾಗೆ) ಈ ಬರಹಗಳು ಸಾಬೀತುಗೊಳಿಸಿಬಿಟ್ಟವು. ಆ ಸುಳ್ಳನ್ನು ಸಾಕ್ಷಿಯ ಸಮೇತ ನಿರೂಪಿಸಿದ ಹೆಚ್ಚುಗಾರಿಕೆ 'ಸಂಕುಲ' ಪತ್ರಿಕೆಯ ಜೋಡಿ ಸಂಚಿಕೆಗೆ (ನಂ: 28, ಅಕ್ಟೋಬರ್ 1999, ಪುಟ: 130 ರಿಂದ 134) ಸಲ್ಲುತ್ತದೆ. ಧನ್ಯವಾದಗಳು.

"ನಿಯಮಿತವಾಗಿ ವಿಮರ್ಶೆಗಳನ್ನು (?) ಬರೆಯುವ ಇವರು (ಎಚ್.ಎ.ಅನಿಲ್ ಕುಮಾರ್) ಸ್ಥಳಪುರಾಣಗಳನ್ನು ಕುರಿತು ವಿಮರ್ಶೆ ಬರೆದೇ ಇಲ್ಲ" (ಪುಟ : 132) ಎಂಬುದೇ ಆ ಸುಳ್ಳು. ಮತ್ತು ಆ ಸುಳ್ಳನ್ನು ಘಂಟಾಘೋಷವಾಗಿ ಬರೆದವರು ಕನ್ನಡದ ಖ್ಯಾತ (?) ಕಲಾವಿಮರ್ಶಕ ಶ್ರೀಮಾನ್ ಚಿ.ಸು. ಕೃಷ್ಣಸೆಟ್ಟಿ. (ನೋಡಿ: "ವಿಮರ್ಶೆಯ-ವಿಮರ್ಶೆಗೆ ಪ್ರತಿಕ್ರಿಯೆ: ಹೊಗಳುಭಟರಿಂದ ಮೊಸರಲ್ಲಿ ಕಲ್ಲು ಹುಡುಕುವ ಕೆಲಸವೆ?" ಲೇಖನ, ಲೇಖಕ: ಕೃಷ್ಣಸೆಟ್ಟಿ, ಪುಟ: 130 ರಿಂದ 134). ಸ್ಥಳಪುರಾಣಗಳನ್ನು ಕುರಿತು ಯಾವ ವಿಮರ್ಶೆಯನ್ನು ಟೈಂಸ್ ಆಫ್ ಇಂಡಿಯದಲ್ಲಿ ನಾನು ಬರೆದೇ ಇಲ್ಲವೆಂಬ 'ಸುಳ್ಳ'ನ್ನು ಆಧರಿಸಿ ಸೆಟ್ಟರು ನನ್ನನ್ನು ಕಿಚಾಯಿಸಿದ್ದಾರೋ ಆ ವಿಮರ್ಶೆಗಳ ಫೋಟೋಕಾಪಿ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಈ ಸುಳ್ಳು ಕಣ್ತಪ್ಪಿನಿಂದಾಗಿ, ಅಪ್ಪಿತಪ್ಪಿ, ಸೆಟ್ಟರು ನಿದ್ದೆಗಣ್ಣಿನಲ್ಲಿ, 'ಅವಸರದಲ್ಲಿ' ಏನಾದರೂ ಬರೆದು ಬಿಟ್ಟರಬಹುದೇನೋ ಎಂಬ ಅನುಮಾನ ನನ್ನನ್ನು ಅರೆಕ್ಷಣ ಬಾಧಿಸಿತು. ಛೆ! ಹಾಗಲ್ಲ, ಅದು '(ದುರ್)ಉದ್ದೇಶಪೂರ್ವಕವೇ' ಎಂದು ಅವರು ಯಾವುದೇ ಅನುಮಾನಕ್ಕೆ ಎಡೆಯಿಲ್ಲದಂತೆ, ಹದಿನೈದು ಸಾಲಿನಲ್ಲಿ, ಈ ಕೆಳಕಂಡಂತೆ, ಸ್ಪಷ್ಟವಾಗಿಯೇ ನಿರೂಪಿಸಿದ್ದಾರೆ:

"ಅನಿಲ್ ಅವರ ಈ ಆಪಾದನೆಗಳಿಗೆಲ್ಲ ಈ ಸ್ಥಳಪುರಾಣಗಳನ್ನು ಕುರಿತು ಅನಿಲ್ ಅವರು ಟೈಂಸ್ ಆಫ್ ಇಂಡಿಯಾದಲ್ಲಿ ಬರೆದಿರುವ ವಿಮರ್ಶೆಯನ್ನು ಮುಂದಿಟ್ಟುಕೊಂಡೇ, ಆ ಉದಾಹರಣೆಗಳಿಂದಲೇ ಉತ್ತರಿಸುವ ಆಲೋಚನೆಯಿತ್ತು. ನಿಯಮಿತವಾಗಿ ವಿಮರ್ಶೆಗಳನ್ನು ಬರೆಯುವ ಇವರು ಸ್ಥಳಪುರಾಣಗಳನ್ನು ಕುರಿತು ವಿಮರ್ಶೆ ಬರೆದೇ ಇಲ್ಲ. ನಿರ್ದಿಷ್ಟವಾಗಿ ನನ್ನ (ಸೆಟ್ಟರ) ಇದೇ ಲೇಖನವನ್ನು ಆಯ್ದುಕೊಳ್ಳುವುದರ ಹಿಂದೆ ಈ ಕಳಂಕಿತ ಮನಸ್ಸು ಎಷ್ಟು ಕೆಲಸ ಮಾಡಿದೆ ಎಂಬುದು ಗೊತ್ತಾಗುತ್ತದೆ. ಅದಿರಲಿ, (ಈ ಪದ ಹಾಗೂ ನಂತರದ ಸಾಲುಗಳನ್ನು ಸೆಟ್ಟರು ಬರೆಯುವಾಗಿನ 'ಸುಳ್ಳನ್ನು ನಿಜ ಮಾಡುವಾಗಿನ' ಅಪಾರ ಆತ್ಮವಿಶ್ವಾಸವನ್ನು ಗಮನಿಸಿ) ಅವರ (ಅನಿಲ್‌ರ) ಮಾತುಗಳಲ್ಲಿಯೇ ಹೇಳುವುದಾದರೆ, ಅವರ

ದೃಷ್ಟಿಯಲ್ಲಿ 'ಈ ಸ್ಥಳಪುರಾಣಗಳ ಪ್ರದರ್ಶನವು ಕಡಿಮೆ ಪ್ರಾಮುಖ್ಯದವು ಎಂದಾಯಿತು. ನಾನು (ಅನಿಲ್) ಈ ಪ್ರದರ್ಶನದ ಬಗ್ಗೆ ಬರೆದಿಲ್ಲದಿರುವುದರಿಂದ ಈ ಮೂವರು ಕಲಾವಿದರು ಕೂಡ ಕಡಿಮೆ ಪ್ರಾಮುಖ್ಯದವರು', ಎಂದು ಹೇಳಬಹುದೆ? ..."ರಮೇಶ್ ಕಲ್ಕೂರ್ ಅವರು ತಮ್ಮ ಕಲ್ಪನೆ ಮಾಡಿಕೊಂಡಿದ್ದುದು ವಿಕ್ಟೋರಿಯಾ ಪ್ರತಿಮೆಯ ಸುತ್ತ. ಹಾಗಾಗದೇ ಅದು ಚಿತ್ರ ಗ್ಯಾಲರಿಯ ಒಳಗೆ ಬಂದಾಗ ಅವರ ಆಶಯ ಸಾಕಾರಗೊಂಡಿಲ್ಲ ಎನ್ನದೆ ಮತ್ತಿನ್ನೇನನ್ನಬೇಕು. ಪ್ರಾಯಶಃ ಅನಿಲ್ ಅವರೇ ಆಗಿದ್ದರೆ ಕಲಾವಿದರ ಆಶಯ ಸಾಕಾರಗೊಂಡಿದೆ ಎಂದು ಬರೆಯುತ್ತಿದ್ದರೋ ಏನೋ?" (ಪುಟ : 134) ("ಸಾಕಾರಗೊಂಡಿಲ್ಲ" ಎಂಬ ನನ್ನ 30.5.99ರ ವಿಮರ್ಶೆಯ ಮುಖ್ಯ ನಿಲುವು ಪ್ರಕಟವಾಗಿದ್ದರೂ, ಆ ವಿಮರ್ಶೆಯೇ ಅಸ್ತಿತ್ವದಲ್ಲಿ ಇಲ್ಲವೆಂಬ ಇಂತಹ ಸುಳ್ಳು-ಧಿಮಾಕಿನ ಸೆಟ್ಟರ ನುಡಿಯು ಖಂಡಿತ ಕಲಾಸಾಹಿತ್ಯಕ್ಕೆ ಶೋಭೆ ತರುವಂತಹುದಲ್ಲ)

ಮತ್ತೊಮ್ಮೆ ಈ ವಾಕ್ಯಗಳು ಅನುಮಾನಾತೀತವಾಗಿ ವಿವರಿಸಿ, ಸ್ಪಷ್ಟಪಡಿಸುವುದೇನೆಂದರೆ: ಸ್ಥಳಪುರಾಣ ಪ್ರದರ್ಶನವನ್ನು ಕುರಿತು ನಾನು ಬರೆದೇ ಇಲ್ಲವೆಂಬ 'ಸುಟ್ಟಕ್ಕೆ ಆರಿಸುವ' ಈ ಸುಳ್ಳು ಕೇವಲ ಆಕಸ್ಮಿಕವಾದುದಲ್ಲ-ಒಂದು ನಿರ್ದಿಷ್ಟ ಗುರಿಯುಳ್ಳದು ಎಂದು.

ಕನ್ನಡ ಕಲಾಸಾಹಿತ್ಯದ ಇತಿಹಾಸದಲ್ಲಿ ಬೋರ್ ಹೊಡೆಸುವ, ಏಕತಾನವಾದ, ಕಲಾವಿದರಿಗೆ ಪ್ರಚಾರ ಗಟ್ಟಿಸಿಕೊಡುವ ಬರಹಗಳಿರಬಹುದು. ಇದ್ದಾವೆ ಕೂಡ. ಆದರೆ *ಚರ್ವಿಚ ಚರ್ವಣವಾದ ಸುಳ್ಳೊಂದನ್ನು ಕೇಂದ್ರವಾಗಿರಿಸಿಕೊಂಡ* ಇಂತಹ ಮತ್ತೊಂದು ಉದಾಹರಣೆ ಇಲ್ಲ. ಬೇರೊಬ್ಬರು ರಚಿಸಿದ ಭಾವಚಿತ್ರವೊಂದರಲ್ಲಿ, ಅವರ ಸಹಿಯನ್ನು ಅಳಿಸಿಹಾಕಿ ತಮ್ಮ ಸಹಿ ಮಾಡಿ ಸಿಕ್ಕಿಬಿದ್ದ ಪ್ರಸಂಗವು ಆಧುನಿಕ ಕರ್ನಾಟಕ ಕಲಾ ಇತಿಹಾಸದಲ್ಲಿ ಇದೆಯಾದರೂ ವಾದವೊಂದನ್ನು ಹೇಗಾದರೂ ಗೆಲ್ಲಲೇಬೇಕೆಂಬ ಭಂಡ ಹಠದಲ್ಲಿ ಸುಳ್ಳು ಹೇಳಿ, ಓದುಗರ ತಲೆ ಸವರಿದ ಇಂತಹ ಘಟನೆ-ಕನ್ನಡ ಕಲಾ ಇತಿಹಾಸದ ಸಂದರ್ಭದಲ್ಲಿ 'ನ ಭೂತೋ' ಎಂಬಂತಹದು. ಇವೆರಡೂ ಘಟನೆಗಳ ನಡುವೆ ಅಂತಹ ವ್ಯತ್ಯಾಸವೇನೂ ನನಗೆ ಕಾಣದು.

ಇದೊಂದು ನಿಜವಾದ ಸಾಂಸ್ಕೃತಿಕ ದುರಂತ ಹಾಗೂ ಅಪರಾಧ. ಸೆಟ್ಟರ ಗುಣಗಳನ್ನು ಚೆನ್ನಾಗಿ ಬಲ್ಲ ನಾನು ಇದಕ್ಕಾಗಿ ಅದರಿಂದ ಕ್ಷಮಾಪಣೆಯೊಂದನ್ನು ನಿರೀಕ್ಷಿಸುವ ಕನಿಷ್ಠ ಆಸೆಯನ್ನು ಇರಿಸಿಕೊಂಡಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಅಪರೂಪಕ್ಕೊಮ್ಮೆ ಎಂಬಂತೆ ಸೆಟ್ಟರು, "ಸಿಕ್ಕಿಹಾಕಿಕೊಂಡಿದ್ದಂತೂ ಆಯ್ತು", ಎಂದೇನಾದರೂ ಕ್ಷಮಾಪಣೆ ಕೋರಿಬಿಟ್ಟರೂ ಈ ಸುಳ್ಳು ನಿಜವಾಗುವುದಿಲ್ಲವಲ್ಲ! ಗಾಜಿನ ಮನೆಗೆ ಕಲ್ಲು ತೂರಿದ ನಂತರ ಗಾಜಿನ ಚಿಂತೆ ಅನವಶ್ಯಕವಲ್ಲವೆ?

(ಇನ್ನು ಈ ಬರಹವನ್ನು ಮುಂದುವರೆಸುವ ಮುನ್ನ ಒಂದು ಸ್ಪಷ್ಟೀಕರಣದ ಅಗತ್ಯವಿದೆ. ಕಳೆದ 'ಸಂಕುಲ' ಸಂಚಿಕೆಯಲ್ಲಿ ಸ್ಥಳಪುರಾಣವನ್ನು ಕುರಿತು ಸೆಟ್ಟರು ಬರಹವನ್ನು ವಿಮರ್ಶಿಸಿದ್ದ ನನ್ನ ಕನ್ನಡ ಭಾಷೆಯ ಶೈಲಿಯು, ನಾನು ಸಹಜವಾಗಿ ಬರೆಯುವಂತಹದು. ಯಾವ ತೆರನಾದ 'ಔಚಿತ್ಯದ ಗಡಿಯನ್ನೂ' ದಾಟದ್ದಲ್ಲವೆಂದೇ ನನ್ನ ವಿನಮ್ರ ಭಾವನೆ. ಆದರೆ ಈ ಲೇಖನದಲ್ಲಿ ನಾನು ನನ್ನ ಅಭಿಪ್ರಾಯವನ್ನು ಪರಿಣಾಮಕಾರಿಯಾಗಿ ಹೇಳಲು ಸ್ವಲ್ಪ 'ನನ್ನದಲ್ಲದ' ಭಾಷಾಶೈಲಿಯ ಪ್ರಯೋಗವನ್ನೂ ಮಾಡಲಿದ್ದೇನೆ. ಏಕೆಂದರೆ, ನನ್ನ 'ವಿಮರ್ಶೆಯ ವಿಮರ್ಶೆ'ಗೆ

ಪ್ರತಿಕ್ರಿಯಿಸುತ್ತ ಸೆಟ್ಟರು ನನ್ನ ಕಡೆಗೆ, ನನ್ನನ್ನು ಕುರಿತು, "ಮಸಿ ಬಳಿಯುವ... ಕಪ್ಪು ಕನ್ನಡಕ ಹಾಕಿಕೊಂಡು... ಭಾಷಣ ಬಿಗಿದಿದ್ದಾರೆ... ಬಾಲಿಶ... ಕಳಂಕಿತ... ಅಸ್ವಸ್ಥ ಮನಸಿನವರು... ಮೊಸರಲ್ಲಿ ಕಲ್ಲು ಹುಡುಕುವುದು... ಸುಪ್ರೀಂಕೋರ್ಟೇನು?... ಅಪ್ಪಣೆ ಕೊಡಿಸಿದ್ದಾರೆ... ಅಜ್ಞಾನಕ್ಕೆ... ಕಲುಷಿತ... ಕಾಮತ್ ಹೋಟೆಲಿನ ಊಟ... ಅರ್ಥಂಬರ್ಥ ತಿಳಿದುಕೊಂಡಿರುವ... ಅಪಕ್ವ ಮನಸ್ಸಿನವರು..." ಇತ್ಯಾದಿ, ಶೈಕ್ಷಣಿಕ ಶಿಸ್ತಿನ ಹೊರಗೇ ಉಳಿವ ಪದಗಳ ಸುರಿಮಳೆಗೈದಿದ್ದಾರೆ. ಈ ಪದಗಳು ಸೂಚಿಸುವ ಅರ್ಥಗಳ ಸಮರ್ಥನೆಯಾಗಿಲ್ಲದಿದ್ದರೂ ಇವುಗಳ ಬಳಕೆಯಿಂದ ಓದುಗರಲ್ಲಿ "ನಿಜವಿದ್ದರೂ ಇರಬಹುದೇನೋ" ಎಂಬ ಅನುಮಾನ ಹುಟ್ಟಿಸುವ ಮನಃಶಾಸ್ತ್ರೀಯ ಹುನ್ನಾರವು ಬಹಳ ಪರಿಣಾಮಕಾರಿಯಾದುದು. ಸೆಟ್ಟರ ಲೇಖನವನ್ನು ಪ್ರಕಟಿಸಲ ಅನುಮತಿ ಇತ್ತ 'ಸಂಕುಲ'ದ ಸಂಪಾದಕರು ಅದೇ ಕಾರಣಕ್ಕಾಗಿ ನನಗೂ ಈ ಸವಲತ್ತನ್ನು ಆಗೊಮ್ಮೆ ಈಗೊಮ್ಮೆ ಪಡೆದುಕೊಳ್ಳಲು ಅನುಮತಿ ನೀಡಬೇಕೆಂಬ ಒತ್ತಾಯಪೂರ್ವಕ ವಿನಮ್ರತೆಯಿಂದ ಕೋರಿಕೊಳ್ಳುತ್ತೇನೆ.

ಏಕೆಂದರೆ ನನ್ನ ಈ ಬರಹದ ಧ್ವನಿಯು ಮನೋರಂಜಕವಾಗಿ (ನನ್ನದಲ್ಲದ ಶೈಲಿಯಲ್ಲಿ) ಮೇಲೆ ವಿವರಿಸಲಾದ ಕಾರಣಕ್ಕಾಗಿ ಬದಲಾಗಿದ್ದರೂ ಸಹ ಇದೊಂದು *ಪ್ರತಿಕ್ರಿಯೆಯ ನೆಪದಲ್ಲಿ ಕಲಾ ಇತಿಹಾಸದ ಬರವಣಿಗೆಯ ಸ್ವರೂಪವನ್ನು ಕುರಿತ ಗಂಭೀರ ಲೇಖನವೂ ಆಗಿರಬಹುದು.*

ಅಪರೂಪಕ್ಕೊಮ್ಮೆ ಎಂಬಂತೆ 'ಮುಳ್ಳನ್ನು ಮುಳ್ಳಿನಿಂದಲೇ' ತೆಗೆಯಬೇಕೆಂಬ ನಂಬಿಕೆಯನ್ನಾಧರಿಸಿ ಈ ಲೇಖನವನ್ನು ಬರೆಯುತ್ತಿದ್ದೇನೆ. ಒಂದು ಸಣ್ಣ ವ್ಯತ್ಯಾಸವೇನೆಂದರೆ, ಸೆಟ್ಟರ ಹಾಗೆ ನಾನು ಬೃಹದ್ ಶಾರೀರದ ಮುಖೇನ ಯಾವ 'ಹಸೀ ಸುಳ್ಳನ್ನೂ' ನನ್ನ ವಾದಕ್ಕೆ ಪೂರಕವಾಗಿ ಬಳಸಿಕೊಳ್ಳುವುದಿಲ್ಲವೆಂದು ಈ ಮೂಲಕ ದೃಢಪಡಿಸುತ್ತೇನೆ.

ಸೆಟ್ಟರ 'ಪ್ರತಿಕ್ರಿಯೆ'ಯಲ್ಲಿ 'ಕಲ್ಪಿತ (ಕಲಾ) ಇತಿಹಾಸ'ವೆಂಬುದು ಹೇಗೆ ಕೆಲಸ ಮಾಡುತ್ತದೆಂದು ನಿರೂಪಿಸುವ ಒಂದು ಅಕಡೆಮಿಕ್ ಪ್ರಯತ್ನವನ್ನು ಮುಂದುವರೆಸುವ ಮೂಲಕ ಈ 'ಹಾದಿರಂಪ, ಬೀದಿ ರಂಪವನ್ನು' ಒಂದು ಗಂಭೀರ, ಶಿಸ್ತುಬದ್ಧವಾದ 'ಡಿಸ್ಕೋರ್ಸ್'ನ ಚೌಕಟ್ಟಿನೊಳಕ್ಕೆ ಇರಿಸುವುದು ನನ್ನ ಉದ್ದೇಶ. ತನ್ಮೂಲಕ 'ಕಲಾ ಇತಿಹಾಸ'ವೆಂಬ ಹೆಸರಿನಲ್ಲಿ ಕೃಷ್ಣಸೆಟ್ಟರು ಓದುಗರಲ್ಲಿ ಹುಟ್ಟುಹಾಕಿರುವ ಹಲವಾರು ತಪ್ಪು ತಿಳಿವಳಿಕೆಗಳನ್ನು ಹಾಗೂ ಕಲ್ಪನೆಗಳನ್ನು ಸರಿಪಡಿಸುವ 'ಮಾಸ್ತರಿಕೆ'ಯ ಕೆಲಸವನ್ನೂ ಸ್ವಲ್ಪ ಮಾಡಲಿದ್ದೇನೆ.

ಈ ಮಾಸ್ತರಿಕೆಯ ಕೆಲಸ ಏಕೆಂದರೆ ಪ್ರಜ್ಞಾಪೂರ್ವಕ ಸಾಂಸ್ಕೃತಿಕ ಬದುಕಿನಲ್ಲಿ ಸೆಟ್ಟರಂತಹವರ ಬರಹದ, ಘನವಲ್ಲದ ಶಾರೀರಿಕ ಘರ್ಜನೆಗೆ ಮೌನವಾಗಿ ಇದ್ದುಬಿಡುವುದು "ಜ್ಞಾನಕೇಂದ್ರಗಳ ಹಿಂಸೆಗಳಿಗೆ" (ಎಪಿಸ್ಟಮಾಲಜಿಕಲ್ ವಯಲೆನ್ಸ್) ಹೆದರಿಕೊಂಡು ಇಂಬುಕೊಟ್ಟಂತಾಗುತ್ತದೆ. ಜನತೆಯ ಕಣ್ಣಲ್ಲಿ ಕನ್ನಡ ಸಂಸ್ಕೃತಿಯ ಹರಿಕಾರದ ಪಟ್ಟಿಯಲ್ಲಿ ಸೆಟ್ಟರು ಹಾಗೂ ನಾನು ಅಲ್ಪ ಪ್ರಮಾಣದಲ್ಲಿಯಾದರೂ ಸೇರಿರುವುದರಿಂದ (ಅದಕ್ಕೆ ನಾವುಗಳು ಲಾಯಕ್ಕೋ ಅಲ್ಲವೋ ಎಂಬುದರ ಬಗ್ಗೆ ನನಗೇ ತೀವ್ರ ಭಿನ್ನಾಭಿಪ್ರಾಯವಿದೆ. ಅದು ಒತ್ತಟ್ಟಿಗಿರಲಿ) ಜ್ಞಾನಕೇಂದ್ರೀಯ ಹಿಂಸೆಗೆ *ಸೂಕ್ತವಾಗಿ* ಪ್ರತಿಕ್ರಿಯಿಸಬೇಕಾದುದು ಒಂದು ಹಂತದವರೆಗೂ, ಪ್ರಜ್ಞಾಪೂರ್ವಕವಾಗಿ ಬದುಕಬೇಕೆಂದುಕೊಳ್ಳುವವರಿಗೆ ಅನಿವಾರ್ಯಕೂಡ.

'ಅಪ್ಪಟ ಸುಳ್ಳು' ಎಂದು ಕರೆಯುವ ಬದಲಿಗೆ 'ಕಲ್ಪಿತ ಕಲಾಇತಿಹಾಸಕಾರ' ಎಂದು ಶ್ರೀ ಚಿ.ಸು. ಕೃಷ್ಣಶೆಟ್ಟಿಯವರನ್ನು ನಾನು ಹಿಂದಿನ ಸಂಚಿಕೆಯಲ್ಲಿಯೇ ವರ್ಗೀಕರಿಸಿದ್ದಕ್ಕೆ ಕಾರಣ-ಇಂತಹ ಸಾಮರ್ಥ್ಯ ಅವರಲ್ಲಿ ಮನೆಮಾಡಿರುವುದು ನನಗೆ ಈ ಮುಂಚೆಯೇ ಸ್ಪಷ್ಟವಾಗಿ ಗೊತ್ತಿದ್ದದ್ದರಿಂದಲೇ. ಅದನ್ನು ಅವರು ಈಗ ದೃಢಪಡಿಸಿರುವುದರಿಂದ ಮೊದಲಿಗೆ ಅವರಿಗೆ ನನ್ನ ಧನ್ಯವಾದಗಳು ಸಲ್ಲುತ್ತವೆ.

'ಕಲ್ಪಿತ ಕಲಾಇತಿಹಾಸ ಪ್ರಜ್ಞೆ' ಎಂಬ ದೊಡ್ಡ ದೊಡ್ಡ ಮಾತುಗಳನ್ನು ಕಲಾಬರಹಗಾರರಾದ ನಾವಲ್ಲದೆ ಇನ್ಯಾರು ಆಡಬೇಕು? ಅಥವ ಹೀಗೆಲ್ಲ ಮಾತಾಡಲು ತಾವಿನ್ನೂ ಆ ಎತ್ತರಕ್ಕೆ ಬೆಳೆದಿಲ್ಲವೆಂಬ ಅನುಮಾನವೇನಾದರೂ/ ಜ್ಞಾನೋದಯವೇನಾದರೂ ಸೆಟ್ಟರಿಗೆ ಆಗಿಬಿಟ್ಟಿದೆಯೋ?! ಕೆ. ವೆಂಕಟಪ್ಪನವರು ಯಾವಾಗಲೂ, "ನಾನಿನ್ನೂ ಕಲಾವಿದ್ಯಾರ್ಥಿ" ಎಂದು ಹೇಳಿಕೊಳ್ಳುತ್ತಿದ್ದರಂತೆ. ಆದರೆ ಯೂಸಫ್ ಅರಕ್ಕಾಲ್‌ರಂತಹವರು ಇದಕ್ಕೆ ತದ್ವಿರುದ್ಧವಾಗಿ, ಆತ್ಮವಿಶ್ವಾಸದಿಂದ, "ನಾನೊಬ್ಬ ಕಲಾವಿದ", ಎಂದು ಹೇಳಿಕೊಳ್ಳುವುದರಲ್ಲಿ ನನಗೆ ತಪ್ಪೇನೂ ಕಾಣದು. ಮತ್ತೊಂದು ನಿಟ್ಟಿನಿಂದ ಆಲೋಚಿಸುವುದಾದರೆ 'ಅತಿವಿನಯಂ ಧೂರ್ತ ಲಕ್ಷಣಂ' ಕೂಡ ಆಗಬಹುದಲ್ಲವೆ? ಇದನ್ನು ಓದಿ, "ವೆಂಕಟಪ್ಪನವರಿಗೆ ಅಪಚಾರ ಆಗಿ ಹೋಯಿತು" ಎಂದೇನಾದರೂ ಸೆಟ್ಟರು ತಮ್ಮ ಎಂದಿನ ಶೈಲಿಯಲ್ಲಿ ಮುಗ್ಧ ಕಲಾವಿದರ ಮುಂದೆ ಬೊಬ್ಬೆ ಹೊಡೆದುಕೊಂಡಾರು, ಸಿವ, ಸಿವಾ!!

ವ್ಯಂಗ್ಯೋಕ್ತಿಯನ್ನು ಬದಿಗಿರಿಸಿ ಹೇಳುವುದಾದರೆ, ಕೃಷ್ಣಸೆಟ್ಟರು 'ಕಲ್ಪಿತ ಕಲಾಇತಿಹಾಸವನ್ನು' ಹೇಗೆ ತಮ್ಮ ಬರಹದ ಒಂದು 'ಅವಿಭಾಜ್ಯ ಅಂಗ'ವೆನ್ನುವಂತೆ ಅಂತರಂಗೀಕರಿಸಿಕೊಂಡು ಬಿಟ್ಟಿದ್ದಾರೆ ಎನ್ನಲು ಅವರದೇ 'ಪ್ರತಿಕ್ರಿಯೆ'ಯಲ್ಲಿ ಸಾದ್ಯಂತವಾಗಿ ಸಾಕ್ಷಿಗಳನ್ನು ಉಳಿಸಿದ್ದಾರೆ. ಜೊತೆಗೆ "ನಾನು ಬರೆದಿರುವ ನೂರಾರು ಲೇಖನಗಳಲ್ಲಿ ಸಾಮಾನ್ಯ ನೆಲೆಯದೇ ಎಂದೆನ್ನಬಹುದಾದ ಒಂದು ಲೇಖನವನ್ನು ಹಿಡಿದುಕೊಂಡು (ಇಲ್ಲಿ ಸೆಟ್ಟರ ವಿನಯ ಎಲ್ಲರಿಗೂ ಅನುಕರಣೀಯವಾಗಿದೆ, ಇರಲಿ) 'ವಿಮರ್ಶೆಯ ವಿಮರ್ಶೆ' ಎನ್ನುವ ಹೆಸರಿನಲ್ಲಿ 'ನನಗೆ' ಮಸಿ ಬಳಿಯುವ ಪ್ರಯತ್ನ ಮಾಡಿದ್ದಾರೆ,"(ಪುಟ: 130) (ಸ್ಟಾರ್‌ಗಳು ಅಥವ ತಮ್ಮನ್ನು ತಾವೇ ಹಾಗೆಂದು ಭಾವಿಸಿಕೊಂಡವರು ಮಾತ್ರ ಆತ್ಮರತಿಯಿಂದ ಬಳಸುವ ಪದಪುಂಜಗಳಿವು ಎಂಬುದನ್ನು ಗಮನಿಸಿ) ಎಂದು ಸೆಟ್ಟರು ಆರೋಪಿಸಿರುವುದರಿಂದ ಹಾಗಲ್ಲ ಎಂದು ನಿರೂಪಿಸುವುದು ನನ್ನ ಪ್ರಯತ್ನವಾಗಿದೆ. ಆದ್ದರಿಂದ ಕಲಾವಿದ/ವಿಮರ್ಶಕರಾಗಿ ಅವರ ವ್ಯಕ್ತಿತ್ವ, 'ಸರ್ಕಾರಿ ಕೃಪಾಪೋಷಿತ ಕಲಾಸಂಸ್ಥೆ' ಎಂದು ಅವರೇ ಬಿರುದು ನೀಡಿರುವ ರಾಜ್ಯ ಲಲಿತಕಲಾ ಅಕಾಡೆಮಿಯಲ್ಲಿ ಅವರ ಹಲವು ಬಾರಿಯ, ಹಲವು ವರ್ಷಗಳ ಸದಸ್ಯತ್ವ- ಇತ್ಯಾದಿ ಬಹುಮುಖಿ ಅಂಶಗಳನ್ನು ಆಧರಿಸಿಯೇ, ಅವರು ಹೇಗೆ ನಮ್ಮ ಸಂದರ್ಭದಲ್ಲಿ 'ಅನನ್ಯ ಕಲ್ಪಿತ ಕಲಾ ಇತಿಹಾಸಕಾರರಾಗುತ್ತಾರೆಂದು' ನಿರೂಪಿಸುವುದು ಈ ಲೇಖನದ ಮೂಲಭೂತ ಉದ್ದೇಶ.

ಇದೊಂದು ಪ್ರತಿಕ್ರಿಯೆಯಾದರೂ ಸಹ ಇದೇ ಅವಕಾಶವನ್ನು ಉಪಯೋಗಿಸಿಕೊಂಡು ಕಲಾರಂಗವನ್ನು ಕುರಿತಂತೆ ಓದುಗರಿಗೆ ಸಾಮಾನ್ಯವಾಗಿ ದೊರಕದ ಹಲವು ವಿಷಯಗಳನ್ನು ವಿವರಿಸುವ ಕೆಲಸವನ್ನೂ ನಿರ್ವಹಿಸುತ್ತಿದ್ದೇನೆ. ಏಕೆಂದರೆ ಓದುಗರ ಸಮಯವನ್ನು, ಮುದ್ರಣದ

ಮಸಿ ಹಾಗೂ ಕಾಗದಗಳನ್ನು ಸೆಟ್ಟರು ಹಾಗೂ ನಾನು ಇಬ್ಬರೂ ಇಲ್ಲಿ ಅಪವ್ಯಯ ಮಾಡುತ್ತಿರುವ 'ಅನಿವಾರ್ಯ' ಸಂದರ್ಭದಲ್ಲಿ ಇದೊಂದು ಸಣ್ಣ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದೇನೆ.

ಕೃಷ್ಣಸೆಟ್ಟರ ಒಟ್ಟಾರೆ ಬರಹದ ಹಿನ್ನೆಲೆಯಲ್ಲಿ ಈ ಕಪೋಲ ಕಲ್ಪಿತ ಕಲಾ ಇತಿಹಾಸ ಪ್ರಜ್ಞೆ ಎಂಬ ಅವರ ಬರಹಗಳಲ್ಲಿ ಅಡಕವಾಗಿರುವ ವ್ಯಕ್ತಿತ್ವಕ್ಕೆ ಹಲವು ಟಿಸಿಲುಗಳಿದ್ದಾವೆ. ಅವುಗಳಲ್ಲಿ ಮುಖ್ಯವಾದುವುವೆಂದರೆ:

ಅ. ಕ್ಯಾಟಲಾಗ್ ಬರಹದ ಸಂಸ್ಕೃತಿಯ ಬಗ್ಗೆ ಅವರಿಗಿರುವ ಅಯೋಮಯ ನಿಲುವು.

ಆ. ಇಂದು ಕಲಾಇತಿಹಾಸದಲ್ಲಿ ಮುಗಿದ ಅಧ್ಯಾಯವಾದ 'ವೈಯಕ್ತೀಕರಣವಾದ'ದ ತೆವಲನ್ನೇ ನೆಚ್ಚಿಕೊಳ್ಳುವ ಅಸಮಕಾಲೀನ ಗುಣ; ಮತ್ತು

ಇ. ಪೂರ್ವಯೋಜಿತ ಸೀಮಿತ ಭಾಷಾಭಿಮಾನ ಹಾಗೂ ತನ್ಮೂಲಕ 'ಜ್ಞಾನ ಸಂಪಾದನೆ'ಯ ನಿರಾಕರಣೆ.

ಅ. ಸಮಕಾಲೀನ ಭಾರತೀಯ ದೃಶ್ಯಕಲಾ ಇತಿಹಾಸದ ಸಂದರ್ಭದಲ್ಲಿ ಕಲಾಪ್ರದರ್ಶನಗಳಲ್ಲಿ ಕ್ಯಾಟಲಾಗ್‌ಗಳನ್ನು ಪ್ರಕಟಿಸುವುದೊಂದು ಸ್ವಾಗತಾರ್ಹ ಕ್ರಮ. ಇಂದು ಇದು ಗಂಭೀರ ಕಲಾಪ್ರದರ್ಶನವೊಂದರ ಅನಿವಾರ್ಯ ಅಂಗ ಕೂಡಾ ಹೌದು. ಏಕೆಂದರೆ ಕಲಾಪುಸ್ತಕಗಳ, ಪತ್ರಗಳ ಕೊರತೆ ಎಲ್ಲ ಭಾರತೀಯ ಪ್ರಾಂತ್ಯ/ಭಾಷೆಗಳಲ್ಲಿಯೂ ಇರುವಾಗ, ಕ್ಯಾಟಲಾಗ್ ಆ 'ಗೌರವಾನ್ವಿತ' ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಇದಕ್ಕೆ ಉದಾಹರಣೆಯಾಗಿ *'Space for the common man'* ಮತ್ತು *'Pictirial Space'* ಎಂಬ ಸಮಕಾಲೀನ ಭಾರತೀಯ ಕಲೆಯನ್ನು ಕುರಿತಾಗ ಗೀತಾ ಕಪೂರರ ಕ್ಯಾಟಲಾಗ್‌ಗಳನ್ನು ಓದಿ ನೋಡಬಹುದು. ಸಮಕಾಲೀನ ಭಾರತೀಯ ಕಲಾಇತಿಹಾಸವನ್ನು ಇನ್ನಾವುದೇ ಒಂದೆರಡು ಅಕಾಡೆಮಿಯ ಪುಸ್ತಕಗಳು (*sic*) ನೀಡುವ ವಿವರ, ಒಳನೋಟಗಳಿಗಿಂತಲೂ ಈ ಎರಡು ಜಗತ್ಪ್ರಸಿದ್ಧ ಕ್ಯಾಟಲಾಗ್‌ಗಳು ಹೆಚ್ಚು, ಸಾಂದ್ರವಾಗಿ ವಿವರಿಸುತ್ತವೆಂಬುದು ಈಗಾಗಲೇ ಕಲಾಸಕ್ತರಿಗೆ ತಿಳಿದಿರುವ ವಿಷಯ. ಸೆಟ್ಟರಿಗದು ತಿಳಿದಿಲ್ಲವೆ?

ಕ್ಯಾಟಲಾಗ್ ಬರಹಕ್ಕೂ ಪತ್ರಿಕಾ ವಿಮರ್ಶೆಗೂ ವ್ಯತ್ಯಾಸವಿದೆ. ಉಪಮೆಯೊಂದನ್ನು ಬಳಸಿ ಹೇಳುವುದಾದರೆ ಕ್ಯಾಟಲಾಗ್ ಬರೆಯುವಾಗ ಸಾಮಾನ್ಯವಾಗಿ ವಾಚ್ಯ-ಲಿಖಿತ ಸಾಮರ್ಥ್ಯವಿಲ್ಲದ ದೃಶ್ಯಕಲಾವಿದನ 'ಪರವಾಗಿ' ಕಲಾಇತಿಹಾಸಕಾರನೊಬ್ಬ, ಪ್ರದರ್ಶನದ ವೀಕ್ಷಕನಿಗೆ ಕೃತಿಪ್ರವೇಶ ದೊರಕಿಸಿ ಕೊಡುವ ಪ್ರಯತ್ನ ಮಾಡುತ್ತಾನೆಂಬುದು/ಮಾಡಬೇಕೆಂಬುದು ಒಂದು ಸಾಮಾನ್ಯ ನಂಬಿಕೆ. ಕಲಾವಿದನೇ ಆ ಕಾರ್ಯ ನಿರ್ವಹಿಸಬಹುದು-ವಿವಾನ್ ಸುಂದರಮ್, ನಟರಾಜ್ ಶರ್ಮರಂತಹ ಕಲಾವಿದರು ಸ್ವತಃ ಅದನ್ನು ಮಾಡುತ್ತಿದ್ದಾರೆ ಕೂಡ. ಆದರೆ ಪಿಕಾಸೋ ಸಹ ಹಾಗೆ ಮಾಡುವಾಗ ಹೇಗೆ ತನ್ನ ಬಗ್ಗೆಯೇ ಸುಳ್ಳುಗಳನ್ನು ಪೋಣಿಸಿದ್ದನೆಂಬುದಕ್ಕೆ ಸ್ವತಃ ತಪ್ಪೊಪ್ಪಿಗೆ ಇರುವ Mary Mathew Gedoಳ *"Picasso And The Art of Lies"* ಪುಸ್ತಕ ಓದಿ.

ಸಮಗ್ರ ಭಾರತೀಯ ಸಮಕಾಲೀನ ದೃಶ್ಯಕಲೆಯ ಬಗ್ಗೆ ಮೂಲಭೂತ ತಿಳಿವಳಿಕೆ ದೊರಕಲು ಇಂದು ಇರುವ ಏಕೈಕ ದಾರಿ-ಕ್ಯಾಟಲಾಗುಗಳ 'ವೀಕ್ಷಣೆ' ಮತ್ತು ಅವುಗಳಲ್ಲಿರುವ, ಪತ್ರಿಕಾ ವಿಮರ್ಶೆಗಳಿಗಿಂತಲೂ ಹೆಚ್ಚಿನ ಒಳನೋಟಗಳನ್ನೊಳಗೊಂಡ ಬರಹಗಳು.

ಕಲಾವಿದ ಹೇಳಿದ್ದನ್ನೇ ಕ್ಯಾಟಲಾಗ್‌ನಲ್ಲಿ ಕಲಾಇತಿಹಾಸಕಾರ (ಕೇವಲ 'ವಿಮರ್ಶಕ'ನಾದವನಲ್ಲ!) ಬರೆಯುತ್ತಾನೆನ್ನುವ ಭ್ರಮಾತ್ಮಕ ಆರೋಪವೊಂದಿದೆ. ಸೆಟ್ಟರೂ ನನ್ನ ಕುರಿತು 'ನಿರಾಧಾರನಾಗಿ' ಹಾಗೆ ಹೇಳಿದ್ದಾರೆ ಕೂಡ. ತದ್ವಿರುದ್ಧವಾಗಿ ಕಲಾವಿದರ ಕೃತಿಗಳನ್ನು ಕುರಿತು 'ನಾನು ನನ್ನದೇ ರೀತಿಯಲ್ಲಿ ನೋಡುವ *ವಿಗ್ರಹ-ಭಂಜಕತನದ ಗುಣಕ್ಕೆ* ಅಸಮಾಧಾನಗೊಂಡು ಅನೇಕ ಕಲಾವಿದರು ನನ್ನ ಕೆಲವು ಕ್ಯಾಟಲಾಗ್ ಬರಹಗಳನ್ನು ತಿರಸ್ಕರಿಸಿದ್ದಿದೆ. ಸೆಟ್ಟರು ಕ್ಯಾಟಲಾಗ್ ಬರಹಗಳೂ ಎಂದೂ ತಿರಸ್ಕೃತಗೊಂಡ ಉದಾಹರಣೆಯೇ ಇದ್ದಂತಿಲ್ಲ-ಏಕೆಂದರೆ "ಇಲ್ಲಿಯವರೆಗೆ ನೂರಾರು ಲೇಖನಗಳನ್ನು" ಬರೆದುಬಿಟ್ಟಿರುವ ಸೆಟ್ಟರಿಗೆ ಮೂಲತಃ ಒಂದೂ ಕ್ಯಾಟಲಾಗನ್ನೂ ಬರೆವ ಅವಕಾಶವೇ ಇನ್ನೂ ಬಂದಿಲ್ಲವಲ್ಲ, ಛೆ!

ಕಳೆದ ಐದು ವರ್ಷಗಳಲ್ಲಿ ಕರ್ನಾಟಕ, ಸಮಗ್ರ ಭಾರತ, ಶ್ರೀಲಂಕ, ಫ್ರೆಂಚ್ ದೇಶಗಳ ಕಲಾವಿದರನ್ನು ಕುರಿತು ಸುಮಾರು ನಲ್ವತ್ತು ಕ್ಯಾಟಲಾಗ್‌ಗಳನ್ನೂ ಬರೆದಿರುವ ನಾನಂತೂ 'ಕಲಾವಿದರು ಹೇಳಿದ್ದನ್ನೇ' ಬರೆವ ಅಭ್ಯಾಸ ಮಾಡಿಕೊಂಡಿಲ್ಲ. ಲಕ್ಷಣವಾಗಿ, ವ್ಯವಸ್ಥಿತವಾಗಿ ಕಲಾ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ನನಗಂತೂ ಕಲಾಕೃತಿಗಳನ್ನು ಅರ್ಥೈಸಲಾಗದ 'ದೃಶ್ಯ-ದಾರಿದ್ರ್ಯ'ವಂತೂ ಇನ್ನೂ ಕಾಡಿಲ್ಲ. ವಿಮರ್ಶೆಯನ್ನು ('ವಿಮರ್ಶೆಯನ್ನಷ್ಟೆ') ಸ್ವಯಂ-ಕಲಿತ ಕೃಷ್ಣಸೆಟ್ಟರಂತಹವರು ಮುಂದೇನಾದರೂ ಕ್ಯಾಟಲಾಗ್ ಬರೆವ ಅವಕಾಶವೇನಾದರೂ ದೊರೆತ ಪಕ್ಷದಲ್ಲಿ ಕಲಾವಿದರು ಹೇಳಿದ್ದನ್ನು ಬರೆದಾರೇನೋ ಪಾಪ.

ಕಲಾವಿದರು ಹೇಳಿದ್ದನ್ನು ನಾನು ಬರೆಯುವುದಿಲ್ಲವೆಂಬುದಕ್ಕೆ ಸ್ವತಃ ಕೃಷ್ಣಸೆಟ್ಟರೇ (ಅಲ್ಲ, ಅವರ 'ಅಂತಃಪ್ರಜ್ಞೆಯೇ') ಸಾಕ್ಷಿ. ಇತ್ತ ವಿಮರ್ಶಕನೂ ಆಗದೆ, ಅತ್ತ ಕಲಾವಿದನಾಗಿಯೂ ನೆಲೆನಿಲ್ಲಲಾಗದೆ 'ನಿತ್ಯ ಪಕ್ಷಾಂತರಿ'ಯಾಗಿರುವ ಕೃಷ್ಣಸೆಟ್ಟರ ಇತ್ತೀಚಿನ ಕೃತಿಗಳಿಗೆ, 'ಅವರ ಅಪೇಕ್ಷೆಯ ಮೇರೆಗೇ' ನಾನೇ ಅವರ ಕ್ಯಾಟಲಾಗನ್ನು ಬರೆಯಬೇಕಾಗಿ ಬಂದ ಸಂದರ್ಭದಲ್ಲಿ, ಸ್ವತಃ ಅವರ ಅನುಭವಕ್ಕಿಂತಲೂ ಭಿನ್ನವಾದುದನ್ನು ನಾನು ಬರೆದಿದ್ದೇನೆ. ನನ್ನ ಬಗ್ಗೆ ಬಹುಶಃ ಆಗ ಅವರಿಗೆ (ಕೆಲವೇ ತಿಂಗಳುಗಳ ಹಿಂದೆ) ಎಷ್ಟು ಅಪಾರವಾದ ನಂಬಿಕೆ ಇತ್ತೆಂದರೆ ಕಣ್ಮುಚ್ಚಿ, ಯಾವ ಆಕ್ಷೇಪವೂ ಇಲ್ಲದೆ, ತುಟಿಕ್-ಪಿಟಿಕ್ ಎನ್ನದೆ ಅವರ ಕೃತಿಗಳನ್ನು ಕುರಿತ ನನ್ನ ಕ್ಯಾಟಲಾಗ್ ಬರಹವನ್ನು (ಪ್ರಸಾದವೆಂಬಂತೆ!) ಸ್ವೀಕರಿಸಿದ್ದರು. ಆ ನನ್ನ ಬರಹವನ್ನು ಕುರಿತು ನಾವಿಬ್ಬರೂ ಚರ್ಚಿಸಿಯೇ ಇಲ್ಲ, *ಆ ಬರಹದ ಸಾರವು ಅವರಿಗೆ ಅರ್ಥವೂ ಆಗಿಲ್ಲವೆಂಬ ಸತ್ಯದ ಬಗ್ಗೆ ನನಗೆ ಸಂಪೂರ್ಣವಾದ ಭರವಸೆಯೂ ಇದೆ.*

ಕರ್ನಾಟಕದ ಸಮಗ್ರ ಆಧುನಿಕ/ಸಮಕಾಲೀನ ದೃಶ್ಯಕಲೆಯನ್ನು 'ಸ್ವಜನಪರ' ಹಾಗೂ 'ವಿಶ್ವಾತ್ಮಕ'ವೆಂದು ವಿಂಗಡಿಸಿ, ಅವುಗಳಿಗೆ ಒಂದು ತಾತ್ವಿಕ ನೆಲೆಗಟ್ಟು ಕೊಡುತ್ತಿರುವವನು "ಕೇವಲ ನಾಲ್ಕಾರು ವರ್ಷಗಳಿಂದ ಬರೆಯುತ್ತಿರುವ" ನಾನು (ನನ್ನ ಅಹಮಿಕೆಗೆ ಕ್ಷಮೆ ಇರಲಿ). ಕರ್ನಾಟಕದ ಕಲಾವಿದರನ್ನು ಕೇವಲ ನಮ್ಮ ದೃಶ್ಯರಂಗದ ಒಂದರ್ಥವೆಂತಲೂ, ಕಡೆಗಣಿಸಲ್ಪಟ್ಟಿರುವ

ಉಳಿದರ್ಧ ಜನಪರ ಇಲ್ಲಸ್ಟ್ರೇಟರ್‌ಗಳು, ಅಕೆಡೆಮಿಕ್ ಕಲಾವಿದರು ಇನ್ನೊಂದು ಅರ್ಥವೆಂದೂ; ಆಧುನಿಕ ಭಾರತೀಯ ಕಲೆಗೆ 'ಶೈಲಿ'ಯೇ ಹೇಗೆ ಮುಖ್ಯ ಶತ್ರುವಾಗುತ್ತದೆಂದು, ತೊಂಬತ್ತರ ದಶಕದ ತಾತ್ವಿಕ ಅರ್ಥವನ್ನು ಕೊಟ್ಟು, ಕನ್ನಡದ ಕಲಾಸಾಹಿತ್ಯದ ಸನ್ನಿವೇಶದ ಮುಖಾಂತರವೇ/ಮೂಲಕವೇ ಸಮಗ್ರ ಭಾರತೀಯ/ಲೋಕದ ಕಲೆಯನ್ನು ಹೊಸದಾಗಿ ಅರ್ಥೈಸಿಕೊಳ್ಳುವ ಹೊಸದೊಂದು ದಾರಿಯನ್ನು ತೋರಿಸಿಕೊಡುವ, ಮತ್ತು ಕಂಡುಕೊಳ್ಳುವ ಪ್ರಯತ್ನದಲ್ಲಿದ್ದೇನೆ.

ಈ ಮತ್ತು ಇನ್ನಿತರ ದೃಶ್ಯಕಲಾ ತತ್ವಗಳನ್ನು ಮಂಡಿಸಲು ನನಗೆ ಸಾಧ್ಯವಾದುದೇ ಇಂಗ್ಲೀಷ್ ಕ್ಯಾಟಲಾಗ್ ಬರಹಗಳ ಮುಖಾಂತರ! ನಾನು ಗಂಭೀರ ಚಿಂತನೆಗಳನ್ನು ಪ್ರಸ್ತುತ ಪಡಿಸಲು ಕ್ಯಾಟಲಾಗ್ ಹಾಗೂ ಪತ್ರಿಕಾ ವಿಮರ್ಶೆಯ ಕಾಲಂಗಳನ್ನು ಛದ್ಮವೇಷದಂತೆ (ಡಿಸೆಪ್ಟಿವ್ ಸ್ಪೇಸ್) ಬಳಸಿಕೊಂಡಿದ್ದೇನೆ ಕೂಡ.

ಕೇವಲ 'ಕಲಾವಿದರಿಗಾಗಿ' ಎಂದೂ ಬರೆದವನಲ್ಲ ನಾನು. ಏಕೆಂದರೆ ಬಹುಪಾಲು ದೃಶ್ಯಕಲಾವಿದರಿಗೂ, ಬರಹದ ಮುಖೇನ ರೂಪುಗೊಳ್ಳುವ ಗಂಭೀರ ತಾತ್ವಿಕ ಚಿಂತನೆಗೂ ನಡುವೆ ಇರುವ ಸಂಬಂಧವು, "ಇಮಾಂ ಸಾಬಿಗೂ ಗೋಕುಲಾಷ್ಟಮಿಗೂ", ಇರುವಷ್ಟೇ ನಿಕಟವಾದುದು ಎಂಬುದು 'ಕಲಾವಲಯದ ಒಳಗಿನವನಾಗಿ' ನಾನು ಕಂಡುಕೊಂಡ ಸತ್ಯವಾಗಿದೆ.

'ಜಾತ್ಯಾತೀತ ಗುಣ', ಎಂದು ನಾನೊಮ್ಮೆ ಕನ್ನಡದಲ್ಲಿ ವಿಮರ್ಶೆ ಬರೆದಿದ್ದಾಗ ಅದೇ ನಿರ್ದಿಷ್ಟ ಪದವನ್ನು, 'ಜಾತೀಯತೆ' ಎಂದು ಆ ಕಲಾವಿದ ಮಿತ್ರರು ಮುಗ್ಧವಾಗಿ ಅನರ್ಥ ಮಾಡಿಕೊಂಡಿದ್ದರು. ಮತ್ತೊಮ್ಮೆ 'ಸಾಕ್ಷಿಪ್ರಜ್ಞೆ' ಎಂಬ ಶುದ್ಧ ಕನ್ನಡ ಪದವನ್ನು ನಾನು ಬರೆದಾಗ, 'ಸಾಕ್ಷಿ' ಗ್ಯಾಲರಿಯಲ್ಲಿ ಮಾರಾಟವಾಗುವಂತೆ ಕಲಾಕೃತಿ ಚಿತ್ರಿಸುವ ಪ್ರಜ್ಞೆ ಎಂದು ಕಲಾವಿದ ಸ್ನೇಹಿತರು ತಲೆಕೆಡಿಸಿಕೊಂಡಿದ್ದರು. ನನ್ನ ಗುಜರಾತಿ ಕಲಾವಿದ ಮಾಸ್ತರೊಬ್ಬರು 'ಹ್ಯಾಪಿ ಅಂಡ್ ಗೇ (gay)' ಎಂದು ನಾನು ಇಂಗ್ಲೀಷಿನಲ್ಲಿ ಬರೆದಿದ್ದಾಗ ಅದಕ್ಕೆ ಅವರು 'ಸಲಿಂಗಕಾಮಿ' ಎಂಬ ಅನರ್ಥವನ್ನೂ ಹಚ್ಚಿದ್ದರು. ಕಲಾವಿದರ ಇಂತಹ 'ಅನಕ್ಷರಸ್ಥ' ಸ್ವಭಾವ ಗೊತ್ತಿದ್ದೂ ಸ್ವತಃ ಕಲಾವಿದರೂ ಆದ ಸೆಟ್ಟರು, "ಕನ್ನಡಿಗರನ್ನು ಕನ್ನಡವನ್ನು, ಕಲಾರಂಗವನ್ನು, ಕಲಾವಿದರನ್ನು ಅನಿಲ್ ಕೀಳಾಗಿ ಕಂಡಿದ್ದಾರೆ. ಸ್ಥಳಪುರಾಣದ ಮೂವರು ಕಲಾವಿದರಲ್ಲಿ ಒಡಕು ಹುಟ್ಟಿಸುವ ಪ್ರಯತ್ನ ಮಾಡಿದ್ದಾರೆ" (ಪುಟ : 133) ಎಂದೆಲ್ಲಾ ಅಸಂಬದ್ಧವಾಗಿ ಪ್ರಲಾಪಿಸಿರುವುದು ಒಂದು ಚೀಪ್ ತಂತ್ರವೆನಿಸುತ್ತದೆ. ಕನ್ನಡ ಸಿನೆಮಗಳ 'ಒಳಗೆ' ಕನ್ನಡಾಭಿಮಾನದ ಹಾಡು, ಅಣ್ಣಾವ್ರ ಚಿತ್ರಗಳಿರುವ ವಾಲ್‌ಪೋಸ್ಟರ್‌ಗಳನ್ನು ಹಾಕಿಕೊಂಡು ಸಿಳ್ಳೆಗಿಟ್ಟಿಸಿ ತಮ್ಮ ತಮ್ಮ ಸಿನೆಮದ ಹುಳುಕು ಮುಚ್ಚಿಕೊಂಡು 'ಬಿ' ಮತ್ತು 'ಸಿ' ಕೇಂದ್ರಗಳಲ್ಲಿ ಕಾಸು ಮಾಡಲು ಪ್ರಯತ್ನಿಸಿದಂತಿದೆ ಇದು. ಬಹುಶಃ ಸೆಟ್ಟರು ಪಾರ್ಟ್ ಟೈಂ ಕಲಾವಿದ, ಇನ್ನುಳಿದ ಸಮಯದಲ್ಲಿ ಕಲಾವಿಮರ್ಶಕರ 'ಮುಖವಾಡ' ಧರಿಸುವುದರಿಂದಲೇ ಈ ಗೊಂದಲ ಅವರಲ್ಲಿರಬಹುದೆ? ವಾಟಾಳ್ ನಾಗರಾಜ್‌ರ ಕನ್ನಡ ಪ್ರೇಮಕ್ಕಿಂತ ಡಿ.ಆರ್. ನಾಗರಾಜ್‌ರ ಕನ್ನಡತನವೇ ಶ್ರೇಷ್ಠವಾದುದೆಂದು ಬಲವಾಗಿ ನಂಬಿಕೊಂಡಿರುವವನು ನಾನು.

ಇದಕ್ಕೆ ತದ್ವಿರುದ್ಧವಾಗಿ, "ಗಂಭೀರ ಚರ್ಚೆಯೊಂದನ್ನು/ವಾಗ್ವಾದವೊಂದನ್ನು ಬೀದಿಜಗಳದ



ಮಟ್ಟಕ್ಕೆ ಇಳಿಸುತ್ತಿದ್ದೀರೆಂದು", ನಾಲ್ಕು ವರ್ಷದ ಹಿಂದೆ ಟಿ.ಸು. ಕೃಷ್ಣಸೆಟ್ಟರ-ಗುರುದಾಸ್ ಶೆಣೈರ ನಡುವಿನ ಜಗಳ ರೂಪದ ವಾದವನ್ನು ಬಿಡಿಸುತ್ತ ('ಸಂಚಯ'ದ ಸೆಮಿನಾರಿನಲ್ಲಿ) ನಾನು ಸೆಟ್ಟರಿಗೆ, ಸಭೆಯ ಎದಿರು ಬುದ್ಧಿವಾದ ಹೇಳಿದ್ದೆ. ನಂತರ, ಆ ಸೆಮಿನಾರಿನ ಭಾಷಣಗಳನ್ನೆಲ್ಲ ಸಂಗ್ರಹಿಸಿ 'ಚೌಕಟ್ಟು' ಪುಸ್ತಕವನ್ನು ನಾನು ಸಂಪಾದಿಸಿದಾಗ ಸೆಟ್ಟರಿಗೆ ತಮ್ಮ ಭಾಷಣವನ್ನು ಬರೆದುಕೊಡಲು (ಕಾರಣಾಂತರದಿಂದ?) ಆಗಲಿಲ್ಲ. ಸೆಟ್ಟರ ಆಯ್ಕೆ ಯಾವ ಹಂತದ್ದು ('ಜಗಳ' ಅಥವ 'ಗಂಭೀರ ಲೇಖನ') ಎಂಬುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ?

ಮತ್ತು ಈ ನಾಲ್ಕು ವರ್ಷಗಳಲ್ಲಿ ಸೆಟ್ಟರು ಏನೇನೂ ಬದಲಾವಣೆಗೊಂಡ ಲಕ್ಷಣ ನನಗಂತೂ ಕಾಣಿಸುತ್ತಿಲ್ಲ.

ಸಂಕುಲದ 'ವಿಮರ್ಶೆಯ ವಿಮರ್ಶೆ' ಎಂಬ ನನ್ನ ಬರಹವನ್ನು ಕುರಿತು, "ಇಂಗ್ಲೀಷ್ ವಿಮರ್ಶಕರೇ ಶ್ರೇಷ್ಠ ಎನ್ನುವ ಆಶಯವಿದೆ, ಕನ್ನಡ ವಿಮರ್ಶೆಯನ್ನು ಕೀಳಾಗಿ ಪರಿಗಣಿಸುವ ಕಳಂಕದ ಮನಸ್ಸಿದೆ," ಎಂದು ಮುಂತಾಗಿ ಬುರುಡೆ ಬಿಟ್ಟಿರುವ ಸೆಟ್ಟರು ಇಲ್ಲೊಂದು 'ವಿಪರ್ಯಾಸ'ವನ್ನು ಗಮನಿಸಬೇಕು:

ಕನ್ನಡದ ದೃಶ್ಯಕಲಾ ಹಾಗೂ ದೃಶ್ಯ ಸಾಹಿತ್ಯದ ಇತಿಹಾಸಕ್ಕೊಂದು ತಾತ್ವಿಕ ನೆಲೆಗಟ್ಟನ್ನು ನಾನು ಇಲ್ಲಿಯವರೆಗೂ ನೀಡಿರುವುದು ಮೂಲ ಇಂಗ್ಲೀಷ್ ಬರಹದ ಹಾಗೂ ಅವುಗಳ ಕನ್ನಡ ಆವೃತ್ತಿಯ ('ಭಾಷಾಂತರ'ವಲ್ಲ) ಮುಖೇನ. ಆದ್ದರಿಂದ 'ನಾನು v/s ನೀನು,' 'ಇಂಗ್ಲಿಷ್ v/s ಕನ್ನಡ' ಎಂಬ ಸೆಟ್ಟರ ಕುತಂತ್ರ 'ಟುಸ್' ಎನ್ನುತ್ತದಿಲ್ಲಿ. ಚೆನ್ನಾಗಿ ಇಂಗ್ಲೀಷ್ ಬಲ್ಲ ಕನ್ನಡಿಗ, ಅದು ಬಾರದ ಕನ್ನಡಿಗನಿಗಿಂತ ಒಳ್ಳೆಯ ಕನ್ನಡಿಗನಾಗುವ ಸಾಧ್ಯತೆಯೂ ಇದೆ. ಏಕೆಂದರೆ ಅವನು ಇಂಗ್ಲೀಷ್ ಮುಖಾಂತರ ಲೋಕಜ್ಞಾನವನ್ನು ಕನ್ನಡಕ್ಕೂ, ಕನ್ನಡದ ಸ್ಥಳೀಯ ಸೊಗಡನ್ನು ಇಂಗ್ಲೀಷ್ ಮುಖೇನ ಇತರೆ ಜಗತ್ತಿಗೂ ಪ್ರಸರಿಸುತ್ತಿರುತ್ತಾನೆ. ಕನ್ನಡದ ಕಲಾಸಾಹಿತಿಗಳಲ್ಲಿ ಅಪರೂಪಕ್ಕೆ ಇಂಗ್ಲೀಷ್-ಕನ್ನಡ ಎರಡೂ ಭಾಷೆಯಲ್ಲಿ ಬರೆಯುತ್ತಿರುವ 'ಮೈಕ್ರೋಸ್ಕೋಪಿಕ್ ಮೈನಾರಿಟಿ'ಯಲ್ಲಿ (ಸೆಟ್ಟರು ಶುದ್ಧ ಕನ್ನಡ ಸಾಹಿತಿಗಳನ್ನು ಆಗಾಗ ಹೀಗೆ ವಿಂಗಡಿಸುತ್ತಿರುತ್ತಾರೆ) ಮೈನಾರಿಟಿಯವನಾದ ನಾನು ಇದೇ ಕಾರಣಕ್ಕೆ ಸೆಟ್ಟರಿಗಿಂತ ಹೆಚ್ಚು ಗಂಭೀರ ಕನ್ನಡಾಭಿಮಾನಿ ಹಾಗೂ ಕನ್ನಡದ ಕಲಾಸಾಹಿತಿ ಎಂದುಕೊಂಡಿದ್ದೇನೆ. ಈ ಸೌಕರ್ಯವಿಲ್ಲದ ಸೆಟ್ಟರಿಗೆ ಅದು ಕೈಗೆಟುಕದ 'ಹುಳಿದ್ರಾಕ್ಷಿ'ಯಾಗಿ ಕಂಡರೆ ನಾನೇನು ಮಾಡಲಿ?

ಒಂದರ್ಥದಲ್ಲಿ ಸೆಟ್ಟರಿಗಿಂತ ನನ್ನ ಕನ್ನಡಾಭಿಮಾನವೇ ಹೆಚ್ಚು ಪ್ರಯೋಜನಕಾರಿ ಎಂಬುದಕ್ಕೆ ಈ ಕೆಳಗಿನ ಉದಾಹರಣೆಯೇ ಸಾಕ್ಷಿ:

'ತಮ್ಮನ್ನು', 'ತಮ್ಮ' ವಿಷಯವನ್ನು ಕುರಿತಾದ ಬರವಣಿಗೆಗೆ ಮಾತ್ರ ಸೆಟ್ಟರು ಪ್ರತಿಕ್ರಿಯಿಸಿದ್ದಾರೆ. ನನ್ನ 'ವಿಮರ್ಶೆಯ ವಿಮರ್ಶೆ'ಯ ವಿಶ್ಲೇಷಣೆಗಿಂತಲೂ 'ಜಟ್ಟಿ ಕೆಳಕ್ಕೆ ಬಿದ್ದರೂ ಮೀಸೆ ಮಣ್ಣಾಗಿಲ್ಲವೆಂದು', ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಯತ್ನವೇ ಅವರ ಪ್ರತಿಕ್ರಿಯೆಯಲ್ಲಿ ಸ್ಪಷ್ಟವಾಗಿದೆ. ತದ್ವಿರುದ್ಧವಾಗಿ, ಯಾವ ಬಾಹ್ಯ ಒತ್ತಡವೂ ಇಲ್ಲದೆ ಕರ್ನಾಟಕದ/ಕನ್ನಡದ ಕಲೆಯ ಬಗೆಗಿನ ಪ್ರೀತಿಯಿಂದಲೇ ನಾನು 'ಕರ್ನಾಟಕದ (ಇಂಗ್ಲೀಷ್ ಮತ್ತು ಕನ್ನಡ)-ಕಲಾಸಾಹಿತ್ಯ'ವನ್ನು ಕುರಿತಾದ ಸುದೀರ್ಘ ಲೇಖನವನ್ನು ಇದೇ ಸಂಕಲನದಲ್ಲಿ ಬರೆದಿದ್ದೇನೆ. (ನೋಡಿ : ನನ್ನ ಲೇಖನ *"ಕರ್ನಾಟಕದಲ್ಲಿ ದೃಶ್ಯ ಕಲಾ ಸಾಹಿತ್ಯ - ಒಂದು ಪಕ್ಷಿನೋಟ"* ಪುಟ: 55 ರಿಂದ 66, *'ಸಂಕುಲ'* ಸಂಚಿಕೆ 19, ನವೆಂಬರ್-ಡಿಸೆಂಬರ್ 1996). ಸೆಟ್ಟರ ಸಾಹಿತ್ಯವನ್ನು ಕುರಿತಾದ ವಿಶ್ಲೇಷಣೆಯನ್ನೂ ಈ ಲೇಖನ ಒಳಗೊಂಡಿದೆ. ಬಹುಶಃ ನನಗೆ ತಿಳಿದ ಮಟ್ಟಿಗೆ ಕಳೆದ ಐದಾರು ದಶಕಗಳ ಇತಿಹಾಸದಲ್ಲಿ ಕರ್ನಾಟಕ ಕಲಾಸಾಹಿತ್ಯವನ್ನು ಕುರಿತಾದ ಕನಿಷ್ಠಪಕ್ಷ ಇಷ್ಟು ವಿವರವಾದ ಲೇಖನ ಇನ್ನೊಂದಿಲ್ಲ. ಈ ಹಿನ್ನೆಲೆಯಲ್ಲಿ "...ಎಲ್ಲೆಡೆ ನನ್ನನ್ನು ತೆಗಳಲು ಅಪೂರ್ವ ಪ್ರಯಾಸ ಮಾಡಲಾಗಿದೆಯೇ ಹೊರತು ಹೊಗಳುವಂತಹ ಒಂದು ಸಾಲೂ ಇಲ್ಲ..." (ಪುಟ: 130) ಎಂದು ಸೆಟ್ಟರು ನಿಟ್ಟುಸಿರು ಬಿಡುವ ಅವಶ್ಯಕತೆಗೆ ಕಾರಣವೇ ಹೊಳೆಯಲಿಲ್ಲ ನನಗೆ. ಒಂದು ತೆಗಳುವ ಅಂಶದೊಂದಿಗೆ ಒಂದು ಹೊಗಳುವ ಅಂಶವನ್ನಿರಿಸಿ, ತಕ್ಕಡಿ ತೂಗಿ, ತಿಪ್ಪೆ ಸಾರಿಸುವಂತಹ, "ಅಂದರಿಕಿ ಮಂಚಿವಾಡು" ಎಂಬ ಹಾಗೆ ಬಣ್ಣ ಬಣ್ಣದ ವಾಕ್ಯಗಳನ್ನು, ಬಣ್ಣದ ಫೋಟೋಗಳೊಂದಿಗೆ ಅರ್ಧ ಪುಟ ಪೂರ್ತಿ ಕಲಾ ವಿಮರ್ಶೆಯ ಹೆಸರಿನಲ್ಲಿ-ಜಗತ್ಪ್ರಸಿದ್ಧ ಕನ್ನಡಪತ್ರಿಕೆಯಲ್ಲಿ ನಿಮ್ಮ ಹಾಗೆ ಬರೆವ 'ಹೊಗಳುಭಟ್ಟ' ಗುಣ ನನಗಿಲ್ಲ", ಎಂದು ಸೆಟ್ಟರ ಶೈಲಿಯಲ್ಲಿ ಅವರನ್ನೇ ಕುರಿತು ಬರೆದು ಬಿಡುವುದಕ್ಕೆ ಒಬ್ಬ ಗಂಭೀರ ಕಲಾ ಇತಿಹಾಸಕಾರನಾಗಬೇಕೆಂದು ಕೊಂಡಿರುವವನೇ ಆಗಬೇಕೆಂದೇನಿಲ್ಲ ಅಲ್ಲವೆ?!



ಮತ್ತೂ ಮುಂದುವರೆದು ಸೆಟ್ಟರು, "ಪಾಶ್ಚಾತ್ಯರಿಗೆ ದಾಸರಾಗುವವರಿಗೆ ಇಂಗ್ಲೀಷೇ ಶ್ರೇಷ್ಠವೆನಿಸಬಹುದು", ಎಂದು ತರ್ಕರಹಿತರಾಗಿ ಶಾಲಾಮಕ್ಕಳ ಚರ್ಚಾಪಟುತ್ವದ ಧ್ವನಿಯಲ್ಲಿ ಹೇಳುವುದನ್ನು ಕಂಡರೆ "ನನಗೆ ಕನಿಕರ ವಾಗುತ್ತದೆಂದು" ಮತ್ತೆ ಅವರದೇ ಶೈಲಿಯಲ್ಲಿ ನಾನೂ ಹೇಳಬಹುದಲ್ಲವೆ! ವೈರುಧ್ಯದ ವಿಷಯವೇನೆಂದರೆ 'ಶುದ್ಧ ಕನ್ನಡಿಗ'ರೆಂದು ಕೊಂಡಿರುವ ಸೆಟ್ಟರ ಪ್ರತಿಕ್ರಿಯಾ ಲೇಖನದಲ್ಲಿ, 'ಕನ್ನಡಿಗನೇ ಅಲ್ಲ'ವೆಂದು ಅವರಿಂದ ಕರೆಸಿಕೊಂಡಿರುವ ನನ್ನ ಲೇಖನಕ್ಕಿಂತಲೂ ಹೆಚ್ಚು ಮುದ್ರಿತ ಇಂಗ್ಲೀಷ್ ವಾಕ್ಯಗಳಿದ್ದಾವೆ, ಓಹ್ ಗಾಡ್!

ಒಂದು ಮಾತಂತೂ ನಿಜ. ಕರ್ನಾಟಕದ ಕಲೆಯನ್ನು ಕುರಿತು ಕನ್ನಡದಲ್ಲಿ ಬಂದಿರುವ

ಲೇಖನಗಳಿಗಿಂತಲೂ ಇಂಗ್ಲೀಷ್ ಬರಹಗಳು ಹೆಚ್ಚು ಸಮಕಾಲೀನವಾದವು ಎಂಬುದು ನನ್ನ ಸ್ಪಷ್ಟ ಅನಿಸಿಕೆ.

ಈ ಹಿನ್ನೆಲೆಯಲ್ಲಿ ಸೆಟ್ಟರಿಗೆ ಕೆಲವು ಪ್ರಶ್ನೆಗಳು:

1) ನಾನು ಸರಿಯೋ ತಪ್ಪೋ ಹಲವಾರು ಸೂತ್ರರೂಪದ ತತ್ವಗಳನ್ನು, ಕೇವಲ ನಾಲ್ಕಾರು ವರ್ಷದ ಬರಹದಲ್ಲೇ ನೀಡಿದ್ದೇನೆ. ಹತ್ತಿಪ್ಪತ್ತು ವರ್ಷ ಬರೆದು, ನಾಲ್ಕಾರು ಬಾರಿ ಪ್ರಭಾವಶಾಲಿ ವಿಮರ್ಶಕನೆಂಬ ನೆಪದಲ್ಲಿ ಸರ್ಕಾರಿ ಕೃಪಾಪೋಷಿತ ಕಲಾ ಸಂಸ್ಥೆಗಳ/ ಅಕಾಡೆಮಿಗಳ ಮೆಂಬರ್ ಆಗಿರುವ ನೀವು ಇಲ್ಲಿಯವರೆಗೂ ಮಂಡಿಸಿರುವ, ಕನ್ನಡ ಕಲೆಯನ್ನು ಕುರಿತಾದ 'ನಿಮ್ಮದೇ ಆದ' ತಾತ್ವಿಕ ನಿಲುವುಗಳೇನಾದರೂ ಇದ್ದಾವೆಯೇ? ಕ್ಷಮಿಸಿ, ಮೊದಲಿಗೆ ಒಂದು 'ತಾತ್ವಿಕ ನಿಲವು' ಎಂಬುದರ ತುರ್ತು ನಿಮಗೇನಾದರೂ ಇದೆಯೇ? ಎಂದು ಉತ್ತರಿಸಿ. ನಂತರ, ಇದ್ದ ಪಕ್ಷದಲ್ಲಿ ಅದೇನೆಂದು ವಿವರಿಸಿ. ಅದಕ್ಕೆ ಮೊದಲು 'ತಾತ್ವಿಕ ನಿಲುವು' ಎಂದರೆ ನೀವು ಹೇಗೆ ಅರ್ಥಮಾಡಿಕೊಂಡಿದ್ದೀರಿ ಎಂಬುದನ್ನಾದರೂ ಕನಿಷ್ಠಪಕ್ಷ ವಿವರಿಸಿ.

(2) *"ಕನ್ನಡದ್ದೇ ಆದ ಒಂದು ಕಣ್ಣಿದೆ. ಅದು ಬೆಂಗಾಲ್, ಬರೋಡ, ಬೋಳುಮಂಡಲ, ಮುಂಬಯಿ ಮುಂತಾದ ಕಲಾಶಾಲೆಗಳ ಧೀಮಂತ ಕಲಾಪ್ರಭಾವಗಳನ್ನು ಮೀರಿ ನಿಲ್ಲಬಲ್ಲ ದೃಶ್ಯ ಸಾಮರ್ಥ್ಯ ಹೊಂದಿದೆ"*, ಎಂಬುದು ನನ್ನ ಇಪ್ಪು ವರ್ಷದ ಕಲಾಬರಹದ ಜೀವನದ ಮತ್ತೊಂದು ತಾತ್ವಿಕ ನಿಲುವು. ಈ ವರ್ಷ ಹೆಗ್ಗೋಡಿನ 'ಸಂಸ್ಕೃತಿ ಶಿಬಿರದಲ್ಲಿ' 15/16ನೇ ಅಕ್ಟೋಬರ್ 1999 ರಂದು ಇನ್ನೂರು ಕರ್ನಾಟಕದ ಕಲಾಕೃತಿಗಳ ಸ್ಲೈಡ್ ಮುಖಾಂತರ ಈ ತತ್ವದ ರೂಪುರೇಷೆ ಹಾಗೂ ವಿವರವನ್ನು ಮಂಡಿಸಿದ್ದೆ. ನಿಮ್ಮ ನಿಲುವನ್ನೂ ಈ ಕುರಿತಂತೆ ಸ್ಪಷ್ಟಪಡಿಸಿದಲ್ಲಿ, ಇಬ್ಬರೂ ಕೂಡಿ ಮುದ್ರಣಕಾಗದಗಳನ್ನು ಅನವಶ್ಯಕವಾಗಿ ನುಂಗಿ ನೀರು ಕುಡಿವ ದುರಭ್ಯಾಸವಾದರೂ ಸ್ವಲ್ಪ ಕಡಿಮೆಯಾದೀತು....

(3) ಸರ್ಕಾರಿ ಕೃಪಾಪೋಷಿತ ಕಲಾಸಂಸ್ಥೆಗಳ ಹಂಗಿಲ್ಲದೆಯೂ ಶುದ್ಧ ಕನ್ನಡದಲ್ಲಿ ಇಲ್ಲಿಯವರೆಗಿನ 'ನನ್ನದೇ ಆದ ತತ್ವಗಳನ್ನೆಲ್ಲ' ಕ್ರೋಢೀಕರಿಸಿ ಒಂದು ಕಲಾ ಪುಸ್ತಕವನ್ನು ಹೊರತಂದಿದ್ದೇನೆ. ನೀವು? ಹಾಗಿದ್ದಾಗ್ಯೂ, ಅನೇಕ ಕ್ಯಾಟಲಾಗ್ ಲೇಖನಗಳಲ್ಲಿ ಅಸಲಿಯಾಗಿ ಹಂಚಿಕೆಯಾಗಿರುವ ನನ್ನ ಈ ತತ್ವಗಳ ತಂಟೆಗೂ ಬಾರದೆ ಸೆಟ್ಟರು "ಈ ಅಸಹಾಯಕತೆ ಇರುವುದು ಯಾರಲ್ಲಿ ಎಂಬುದನ್ನು ಅನಿಲ್ ಕುಮಾರ್ ಅವರು ಬರೆದಿರುವ ಪ್ರದರ್ಶನಗಳ ಕ್ಯಾಟಲಾಗ್ ಓದಿದರೆ ಗೊತ್ತಾಗುತ್ತದೆ", ಎಂದಿರುವುದು ನನ್ನಲ್ಲೊಂದು ಬಲವಾದ ಅನುಮಾನವನ್ನು ಹುಟ್ಟಹಾಕುತ್ತಿದೆ. ಸೆಟ್ಟರ ಇಡೀ ಪ್ರತಿಕ್ರಿಯೆ ಲೇಖನವು ನನ್ನ 'ವಿಮರ್ಶೆಯ ವಿಮರ್ಶೆ' ಲೇಖನದ ವಿರುದ್ಧವೋ ಅಥವ ವೈಯಕ್ತಿಕವಾಗಿ ಕಲಾ ಇತಿಹಾಸಕಾರನಾಗಿ 'ನನ್ನ ಸಫಲತೆಯ' ವಿರುದ್ಧವೋ ಎಂದು!

ನಾನು ಇಲ್ಲಿಯವರೆಗೂ ಬರೆದಿರುವ ಕ್ಯಾಟಲಾಗ್‌ಗಳಲ್ಲಿ ಕೃಷ್ಣ ಸೆಟ್ಟರದೂ ಉದಾಹರಣೆಯಾಗಿ ಸೇರಿರುವುದರಿಂದ, ಸೆಟ್ಟರನ್ನು 'ಹೊಗಳಿ' ನನಗೆ ಆಗಬೇಕಾದ ಲಾಭ ಅಷ್ಟರಲ್ಲೇ ಇದೆ. ತದ್ವಿರುದ್ಧವಾಗಿ ನಾನು ಪ್ರತಿ ಕ್ಯಾಟಲಾಗ್ ಬರೆದಾಗಲೂ/ಬರೆವಾಗಲೂ ಒಂದೊಂದು ಪದಕ್ಕೂ

ಮೂರರಿಂದ ಐದು ರೂಪಾಯಿ ರಾಯಧನವನ್ನು ಪಡೆಯುತ್ತಿದ್ದುದು/ಪಡೆಯುತ್ತಿರುವುದು ಸೆಟ್ಟರಂತಹವರಿಗೆ 'ಕಣ್ಣ ಪಿಸುರಾಗಿ' ಕಾಡುತ್ತಿರುವುದು ನಿಜ. ಇಂಗ್ಲೀಷ್ ಬರೆದಿಲ್ಲದ, ಬಹುಶಃ ಅದೇ ಕಾರಣಕ್ಕೆ ಕ್ಯಾಟಲಾಗ್ ಬರಹದ ಲೋಕದೊಳಕ್ಕೆ ಪ್ರವೇಶದ ಅವಕಾಶವಿಲ್ಲದೆ ಸೆಟ್ಟರು ಕಲಾಗ್ಯಾಲರಿ ಮಂದಿಯ ಮುಂದೆ, ನನ್ನೆದುರಿಗೇ, ಕ್ಯಾಟಲಾಗ್ ಬರಹದ ಅವಕಾಶಕ್ಕಾಗಿ ಅಲವತ್ತುಕೊಂಡ ಘಟನೆಗಳೂ ಇಲ್ಲದಿಲ್ಲ. ಅವರ ಪ್ರತಿಕ್ರಿಯೆಯ ಲೇಖನದ ಬಿರುದು/ಟೈಟಲ್ 'ಹೊಗಳು ಭಟ್ಟರು...' ಎಂದಿರಲು ಈ ಕ್ಯಾಟಲಾಗ್ ಸಂಪ್ರದಾಯದ ಆರ್ಥಿಕ ಲಾಭ ಕಣ್ಣು ಕುಕ್ಕಿದ್ದು ಕಾರಣವಿರಬಹುದೇನೋ! ಇಷ್ಟೆಲ್ಲ ಆಗಿಯೂ, ನಾನು ಹೊಗಳುಭಟನೇ ಆಗಿದ್ದ ಪಕ್ಷದಲ್ಲಿ ನನ್ನಿಂದ, ಅದೂ ವೃತ್ತಿಬಾಂಧವರೆಂಬ ಕಾರಣಕ್ಕಾಗಿಯೇ 'ಬಿಟ್ಟಿಯಾಗಿ' ಹೊಗಳಿಸಿಕೊಂಡ ಸೆಟ್ಟರು ಇನ್ನೆಂತಹವರೋ!

ಆ) ವೈಯಕ್ತೀಕರಣವಾದದ ತೆವಲ:

ಮಾಡರ್ನಿಟಿಯ ಮೂಲಭೂತ ಲಕ್ಷಣವಾದ, ಇಂದು ಪೇಲವವಾಗುತ್ತಿರುವ 'ವೈಯಕ್ತೀಕರಣ ವಾದ' (ಇಂಡುವಿಜಿಯೇಶನ್) ನೆಲೆಯಲ್ಲಿಯೇ ಕೃಷ್ಣ ಸೆಟ್ಟರು ತಮ್ಮ ವಿಮರ್ಶೆಯನ್ನು ಕುರಿತಾದ ವಿಶ್ಲೇಷಣೆಯನ್ನು ಸ್ವೀಕರಿಸಲು ನಿರ್ಧರಿಸುತ್ತಾರೆ. ಕೋರ್ಟೊಂದರಲ್ಲಿ (ಅದೂ ನಿಜವಾದುದಲ್ಲ, ಸಿನೆಮಾತ್ಮಕವಾದುದು) ವಾದ-ಪ್ರತಿವಾದ ಮಾಡುವಂತಿರುವ ಅವರ ಧ್ವನಿಯಲ್ಲಿ ತರ್ಕ, ವಿಶ್ಲೇಷಣೆ, ಒಳನೋಟಗಳಿಗಿಂತಲೂ ನಾಟಕೀಯವಾಗಿ ವಾದಮಂಡಿಸುವ ಶಾಲಾಮಕ್ಕಳ ಚರ್ಚಾಪಟುತ್ವದ ಶೈಲಿಯದೇ ಆದಿಪತ್ಯ. ಸಿನೆಮಾತ್ಮಕವಾದ ಈ ತಂತ್ರದೊಳಕ್ಕೆ ಸೆಟ್ಟರು ಪ್ರೇಕ್ಷಕರ ಗಮನ ಹಾಗೂ ಸಹಾನುಭೂತಿಯನ್ನು ಪಡೆವ ಪ್ರಯತ್ನವು ಹೆಚ್ಚು ತೀವ್ರವಾದುದು. ಸಾಂಸ್ಕೃತಿಕ ನಿರ್ವಚನಕ್ಕಿಂತಲೂ ಅಥವಾ ದೃಶ್ಯಾತ್ಮಕ ಒಳನೋಟಗಳ ಕಡೆ ಗಮನ ಹರಿಸುವುದಕ್ಕಿಂತಲೂ 'ಪಿಕ್ಚರಿಸ್ಕ್' ಆಗಿ ಶಬ್ದಮಾಲಿನ್ಯದೊಂದಿಗೆ ವಾದ ಮಂಡಿಸುವ ಪ್ರಯತ್ನದಂತಿರುವ ಈ ತಂತ್ರವು ಆಧುನಿಕ ವಿಮರ್ಶಕರ ಅವಲಕ್ಷಣದ ಗುಣಗಳಲ್ಲೊಂದು. ಕಲಾವಿಮರ್ಶೆಯ/ಕಲಾವಿದನ 'ಏಕಸ್ವಾಮ್ಯದ ಸಾವಿನ' ಸುದ್ದಿ ಇವರಿಗೆ ಇನ್ನು ತಲುಪಿದಂತಿಲ್ಲ. ಅಥವ ತಲುಪಿದ್ದರೂ ನಿರ್ಜೀವ ವಿಮರ್ಶಾಕ್ರಮವನ್ನೇ ಆಧರಿಸಿರುವುದರಿಂದ ಇವರನ್ನು 'ಕಲ್ಪಿತ ಕಲಾಇತಿಹಾಸಕಾರರ' ಶ್ರೇಣಿಯಲ್ಲೇ ಅಗ್ರಗಣ್ಯರ ದರ್ಜೆಗೇರಿಸಬಹುದು. ರೊಲಾಂಡ್ ಬಾರ್ಥ್, ಫ್ಯೂಕೊ, ಆಶಿಶ್ ನಂದಿ, ಡಿ.ಆರ್. ನಾಗರಾಜ್‌ರಂತಹವರ ಪರ್ಯಾಯ ಚಿಂತನ ಕ್ರಮಗಳು ಇವರಿಗೆ ಎಳ್ಳಷ್ಟೂ ತಿಳಿದಿಲ್ಲವೆ?... ಕಲಾಕೃತಿಗಳ ಇತಿಹಾಸವು ಬದಲಾವಣೆಗೊಳ್ಳುವಂತೆ ಕಲಾಸಾಹಿತ್ಯಕ್ಕೂ ಐತಿಹಾಸಿಕ ಬದಲಾವಣೆಗಳಿವೆ ಮತ್ತು ಅವುಗಳಿಗೆ 'ಸೂಕ್ತವಾಗಿ' ಪ್ರತಿಕ್ರಿಯಿಸ ಬೇಕು ಎಂಬ ಅಂಶಕ್ಕೆ ಸಾಕ್ಷಿಯಾಗಿ ಇವರ ಹತ್ತಿಪ್ಪತ್ತು ವರ್ಷದ ಬರಹಗಳಲ್ಲಿ ಎಲ್ಲಿಯೂ, ಅಪ್ಪಿ ತಪ್ಪಿಯೂ ಕಂಡುಬರದು. ನಿರೂಪಿಸಿ ಹೇಳಬಹುದಾದರೆ, 'ಏಕತಾನತೆ', 'ಮುಗ್ಧತೆ' ಹಾಗೂ 'ಸ್ವಯಂಪ್ರೀತಿ' ಇವರ ಬರಹಗಳ ಮೂಲಭೂತ ಗುಣಲಕ್ಷಣಗಳು. ವೈಯಕ್ತೀಕರಣಕ್ಕೆ ಜೋತುಬಿದ್ದು, ಏಕತಾನತೆಯ ಮೂಲಕ ಅದನ್ನು ಇನ್ನೂ ಉಳಿಸಿಕೊಂಡಿರುವುದಕ್ಕೊಂದು ಉದಾಹರಣೆ ಇಲ್ಲಿದೆ:

'ನಾನು', 'ನನ್ನ' ಅಭಿಪ್ರಾಯದಲ್ಲಿ.... ಸಮರ್ಥಿಸಲು 'ನಾನೆಲ್ಲಿಯೂ' ಪ್ರಯತ್ನಿಸಿಲ್ಲ... 'ನಾನು' ಓದಿದ್ದೇನೆ... ತಿಳಿದುಕೊಂಡಿದ್ದೇನೆ... 'ನನ್ನಲ್ಲಿರುವ' ಅಸಹಾಯಕತೆ...ಇತ್ಯಾದಿಯಾಗಿ ಸೆಟ್ಟರು ವಾದಿಸುವಾಗ ನಾನು ಅವರ ಬರಹವನ್ನಲ್ಲದೆ 'ಅವರನ್ನೇ' ವಿಶ್ಲೇಷಿಸುತ್ತಿದ್ದೇನೆಂಬ ಅರ್ಥ ಹೊರಡಿಸುತ್ತಿದ್ದಾರೆ. ಇಂಡುವಿಜಿಯೇಷನ್ನಿನ ದುರಂತವಿದು. ಮತ್ತೂ ದುರಂತದ ವಿಷಯವೆಂದರೆ ಯಾವ ಪಾಶ್ಚಾತ್ಯ ವಿಮರ್ಶಾಕ್ರಮವನ್ನು ಸೆಟ್ಟರು ಬೈಯುತ್ತಿದ್ದಾರೋ ಅದೇ ವಸಾಹತೀಕೃತ, ರೋಜರ್ ಫ್ರೈ ಹಾಗೂ ಹರ್ಬರ್ಟ್ ರೀಡ್ ಪ್ರಣೀತವಾದ ಉತ್ತರ ಯುರೋಪಿನ ಪುರಾತನ ಮಾದರಿಯೇ ಸೆಟ್ಟರ ವಿಮರ್ಶೆಗೆ ಮೂಲಾಧಾರ!

"ಕಲಾಕೃತಿ-ಅಂತೆಯೇ-ಕಲಾಸಾಹಿತ್ಯದ ಬರಹವೊಂದು ಪೂರ್ಣಗೊಂಡ ನಂತರ ಅದು 'ಕೇವಲ' ಆ ಕಲಾವಿದ ಬರಹಗಾರನ ಸ್ವತ್ತಾಗಿ ಉಳಿಯದು", ಎಂಬ 'ಹೊಸ ಕಲಾ ಇತಿಹಾಸ'ದ ಧ್ವನಿ ನನ್ನದು (ಇದಕ್ಕೆ ಸಾಕ್ಷಿಯಾಗಿ ಬಾರ್ಥ್‌ನ 'ಡೆಥ್ ಆಫ್ ದ ಆಥರ್' ಹಾಗೂ ಬ್ರಿಟಿಷ್ ವಿಮರ್ಶಕರ 'ದ ನ್ಯೂ ಆರ್ಟ್ ಹಿಸ್ಟರಿ' ಓದಿ).

ನನ್ನ ನಿಲುವನ್ನು ಗಂಭೀರವಾಗಿ ಚರ್ಚಿಸಬೇಕಾಗಿದ್ದಲ್ಲಿ ತರ್ಕಬದ್ಧವಾಗಿ ಅದನ್ನು ನಿರಾಕರಿಸುವ ಬದಲು 'ನಾನು v/s ನೀನು' ಎಂಬ ಬೀದಿ ಜಗಳಕ್ಕೆ ಸೆಟ್ಟರು ಇಳಿದಿರುವುದು-ಕಲಾ ಇತಿಹಾಸದ ರಂಗವನ್ನು ಕುರಿತೇ ಅವರಿಗಿರುವ 'ನಾಮಕಾವಸ್ಥೆ' ಆಸಕ್ತಿಗೊಂದು ಸಾಕ್ಷಿಯಷ್ಟೆ. ಮತ್ತು ಈ ಸ್ಪಷ್ಟೀಕರಣವನ್ನು ಅಡಿಟಿಪ್ಪಣಿ ಮುಖಾಂತರ 'ವಿಮರ್ಶೆಯ ವಿಮರ್ಶೆ'ಯಲ್ಲಿಯೇ ನೀಡಿದ್ದೇನೆ. "ವಿನಾಶಕ್ಕೆಡೆ ಮಾಡುವ ಬಾಂಬ್‌ಗಳ ಅನ್ವೇಷಣೆಗಳಿಗೆ ವಿಜ್ಞಾನಿಗಳೂ ನೈತಿಕ ಹೊಣೆಗಾರರಲ್ಲವೆ" ಎಂಬ ಶಿವವಿಶ್ವನಾಥನ್‌ರ ಅನುಮಾನಕ್ಕೆ ಧ್ವನಿಗೂಡಿಸಿ, ಕಲಾಸಾಹಿತ್ಯಕ್ಕೂ ಈ ಪ್ರಶ್ನೆ ಅನ್ವಯಿಸಬಹುದು ಎಂದಿದ್ದೇನೆ. ಇದನ್ನು ಮತ್ತೂ ಒಂದು ಉದಾಹರಣೆಯೊಂದಿಗೆ ಸ್ಪಷ್ಟಪಡಿಸುತ್ತೇನೆ: ಪ್ರಜಾವಾಣಿಯಲ್ಲಿ ಪ್ರಕಟವಾದ ಕೃಷ್ಣಸೆಟ್ಟರ 'ಸ್ಥಳಪುರಾಣಗಳ' ವಿಮರ್ಶೆಯೊಂದಿಗೆ ರಮೇಶ್ ಕಲ್ಕೂರರ ಕಲಾಕೃತಿ ಪ್ರಕಟಗೊಂಡಿತ್ತು. ನಂತರ ಸಂಕುಲದಲ್ಲಿ ಅದೇ ವಿಮರ್ಶೆ, ಅದರೊಂದಿಗೆ ಆ 'ವಿಮರ್ಶೆಯ ವಿಮರ್ಶೆ' ಹಾಗೂ ಅದಕ್ಕೆ ಸೆಟ್ಟರ ಪ್ರತಿಕ್ರಿಯೆ-ಈ ಮೂರೂ ಲೇಖನಗಳೂ ಪ್ರಕಟವಾದಾಗಲೂ, ಸಂಕುಲದಲ್ಲಿಯೂ ರಮೇಶ್ ಕಲ್ಕೂರರದೇ ಕಲಾಕೃತಿಗಳ ಎರಡು ಫೋಟೋಗಳು ಪುನರ್ ಮುದ್ರಣಗೊಂಡವು. ಮತ್ತು ಅದೇ ಸಂಚಿಕೆಯಲ್ಲಿ, ಪಕ್ಕದಲ್ಲಿಯೇ, ಸೆಟ್ಟರ ಕಲಾಕೃತಿಗಳನ್ನು ಕುರಿತು ಮತ್ತೂ ಒಂದು ಲೇಖನ-ಸೆಟ್ಟರ ಭಾವಚಿತ್ರದೊಂದಿಗೆ-ಇವರ ವಾದದೊಂದಿಗೆ ನೇರ ಸಂಬಂಧವಿಲ್ಲದೆಯೂ ಪ್ರಕಟಗೊಂಡಿತು...

ಶಿವವಿಶ್ವನಾಥರ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಹೀಗೆ ಕೇಳಬಹುದು: ಕೇವಲ ರಮೇಶ್‌ರ ಕೃತಿಗಳೇ ಪ್ರಕಟಗೊಂಡದ್ದು ಅರ್ಥಾತ್ ಇತರ ಇಬ್ಬರು ಕಲಾವಿದರ ಕೃತಿಗಳು ಪ್ರಕಟಗೊಳ್ಳದಿದ್ದದ್ದು ಒಂದು ತೆರನಾದ, 'ಈ ಸಂದರ್ಭದ' ಆಯ್ಕೆಯಲ್ಲವೆ? ಅನೇಕ ಇಂತಹ ಸೌಂದರ್ಯ-ರಾಜಕೀಯಾತ್ಮಕ ಸಂದರ್ಭದ ಮುಖೇನ ಹಲವು ಕಲಾವಿದರು ಜನಪ್ರಿಯಗೊಳ್ಳುವುದು ಮತ್ತು ಖ್ಯಾತಿಗೆ ಬರದಿರುವದರಲ್ಲಿ ವಿಮರ್ಶಕರಾದ ನಿಮ್ಮ ನಮ್ಮ ಪಾತ್ರಗಳೂ ಇರುವುದಿಲ್ಲವೇ ಎಂಬ ನೈತಿಕ ಪ್ರಶ್ನೆ ಎದಿರಾಗುತ್ತದೆ. ವಿಮರ್ಶೆಯ ಸಂದರ್ಭದ ಇಂತಹ ಹಲವು ಆಯಾಮಗಳಿಗೆ ಪ್ರತಿಕ್ರಿಯಿಸದೆ "ನಾನು ಫೋಟೋ ಬೇಕೆಂದೇ ಹಾಕಲಿಲ್ಲ, ರಮೇಶ್ ಬಗ್ಗೆ ಮಾತ್ರ

ವಿವರಪೂರ್ಣವಾಗಿ ಬರೆದುದರಿಂದ ಅವರದೇ ಕೃತಿಗಳ ಫೋಟೋಗಳನ್ನು ಮುದ್ರಿಸಿದ್ದರಲ್ಲಿ ತಪ್ಪೇನು?'' ಎಂದು ಕೃಷ್ಣಸೆಟ್ಟರು ತಮ್ಮ ಎಂದಿನ ವೈಯಕ್ತೀಕರಣದ ಶೈಲಿಯಲ್ಲಿ ಜೋರು ಮಾಡಿದರೆ-ಈ ಪ್ರಶ್ನೆಯು 'ಸಾಂಸ್ಕೃತಿಕ ಸಂದರ್ಭ'ವನ್ನೇ ಅನರ್ಥಮಾಡಿಕೊಂಡಂತಾಗುತ್ತದೆ.

ಚಿತ್ರಗಳನ್ನು, ಕಲಾವಿದರನ್ನು ನಮ್ಮ ವಿಮರ್ಶೆಯ ಕಣ್ಣಿನ ಚಿತ್ರಗಳನ್ನಾಗಿ ನಾವು ನೋಡುತ್ತ ಹೋದಂತೆ, ಇವುಗಳ ಜೊತೆಗೇ, 'ನಾವೂ', 'ನಮ್ಮ ವಿಮರ್ಶಾಕ್ರಮಗಳು'- 'ಇಂದಿನ ಸಾಂಸ್ಕೃತಿಕ ಸಂದರ್ಭ' ಎಂಬುದರ 'ಕಣ್ಣಿನ' ಚಿತ್ರಗಳಾಗಿ ಸೇರಿಹೋಗುತ್ತಿರುತ್ತವೆ ಎಂಬ ಅರಿವು ಇಲ್ಲಿ ಮುಖ್ಯ. *ಅಂದರೆ ನಾವು ಬರವಣಿಗೆಗಳ ಮೂಲಕ ಕಲಾಕೃತಿ-ಕಲಾವಿದರನ್ನು ಅಧ್ಯಯನ ಮಾಡಿದಂತೆ ಮನಃಶಾಸ್ತ್ರಜ್ಞರು ನಮ್ಮ ಬರಹದ ಮುಖೇನ ನಮ್ಮನ್ನು ಅಧ್ಯಯನ ಮಾಡುವಂತಹ ಸಂದರ್ಭದಲ್ಲಿ ನಾವಿಲ್ಲವೆ?*

ನಿಜವಾಗಿಯೂ ಇಂತಹ ಗಂಭೀರ ಚರ್ಚೆಗಳಲ್ಲಿ ಸೆಟ್ಟರಿಗೆ ಆಸಕ್ತಿ ಇದ್ದಿದ್ದರೆ ಈ ನಿಟ್ಟಿನಲ್ಲಿ ಚಿಂತಿಸುತ್ತಿದ್ದರೇ ಹೊರತು, ತಮ್ಮದೇ ಆದ ವೈಯಕ್ತಿಕ ನಿಲುವೊಂದನ್ನು ಹೊಂದಿರುತ್ತಿದ್ದರೇ ಹೊರತು 'ನನ್ನ'ನ್ನು ತಮ್ಮ ಸಿಟ್ಟಿಗೆ ಸೆಟ್ಟರು ಕು(ಗು)ರಿ ಮಾಡುತ್ತಿರಲಿಲ್ಲ.

ಸೆಟ್ಟರ ಕಪೋಲ ಕಲ್ಪಿತ ಕಲಾಇತಿಹಾಸವೆಂಬ ತಾತ್ವಿಕ ನಿಲುವಿಗೆ ಇಂತಹ ಅವರ ಪ್ರತಿಕ್ರಿಯೆಯ ಶೈಲಿಯು ಒಂದು ಮೂಲ ಆಧಾರಸ್ತಂಭ.

ಈ ಅಂಶವನ್ನು ಬೇರೊಂದು ರೀತಿಯಲ್ಲಿಯೂ ವಿಶ್ಲೇಷಿಸಬಹುದು. ಈ ಇಂಡಿವಿಜುಯೇಷನ್ನಿನ (ವೈಯಕ್ತೀಕರಣವಾದದ) ದುರಂತವೆಂದರೆ ಅದಕ್ಕೊಂದು ನಾರ್ಸಿನಿಸ್ಟ್ ('ಆತ್ಮರತಿ'ಯ) ಗುಣ ಬಂದುಬಿಡುತ್ತದೆ. *(ನೋಡಿ : ಕೆ. ಕೇಶವಶರ್ಮರ "ವ್ಯಕ್ತಿ ವಿಶಿಷ್ಟತೆಯ ಪರಿಕಲ್ಪನೆ ಮತ್ತು ಸಾಹಿತ್ಯ ವಿಮರ್ಶೆ, ಪುಟ : 56-64, ಕನ್ನಡ ಅಧ್ಯಯನ, ಸಂ : ರಹಮತ್ ತರೀಕೆರೆ, ಕನ್ನಡ ವಿ.ವಿ. ಪ್ರಕಟಣೆ, 1998).* ವಯಸ್ಸಿನಲ್ಲಿ ದೊಡ್ಡವರಾದವರಿಗೇ ಮ(ನ್ನ)ಣೆ ಹಾಕುವ ಅವರ ಗುಣವನ್ನು ನಾನು ಈ ಮುಂಚೆಯೇ ಸೂಚಿಸಿದ್ದೇನೆ. ಅವರು ಹಾಗಲ್ಲವೆಂದಿದ್ದಾರೆ. ಅದೇ ಉಸಿರಿನಲ್ಲಿ "ಇಷ್ಟಾಗಿಯೂ ಕಲಾವಿಮರ್ಶೆಯ ಕ್ಷೇತ್ರದಲ್ಲಿ 'ಈಗಷ್ಟೇ' ಕಣ್ಣು ಬಿಡುತ್ತಿರುವವರು ಸರ್ವಜ್ಞರ ಹಾಗೆ ಮಾತನಾಡುವುದನ್ನು ನೋಡಿದರೆ, 'ನವಿಲನ್ನು ನೋಡಿ ಕೆಂಭೂತ ಪುಕ್ಕ ಕೆದರಿತು' ಎನ್ನುವ ಮಾತು ನನಗೆ ನೆನಪಿಗೆ ಬರುತ್ತಿದೆ'', (ಪುಟ : 131) ಎಂದು ಸ್ವತಃ ನವಿಲಿನ ರೂಪ ಹೊಂದಿದ ಸರ್ವಜ್ಞ ಗುರುವಿನ ಹಾಗೆ ಮೇಲಿನಿಂದ, ಕೆಳಗಿರುವ ನಮ್ಮ ಮೇಲೆ ಕರುಣೆ ತುಂಬಿದ ಮಂದಹಾಸ ಬೀರುವಂತೆ ನುಡಿದಿದ್ದಾರೆ. ಮೇಲಿನ ಅವರ ವಾಕ್ಯವು ಅವರ ಮನಸ್ಸಿನೊಳಗಿನ ಕಳ್ಳಿ ಆಶಯವನ್ನು ಬಟಾಬಯಲುಗೊಳಿಸಿಬಿಡುತ್ತದೆ. ಅರ್ಥಾತ್ "ವಯಸ್ಸಿನಲ್ಲಿ ದೊಡ್ಡಾವರಾದವರಿಗೇ ಮನ್ನಣೆ ಹಾಕುವ''ದನ್ನು ಅವರು ನಿರಾಕರಿಸುತ್ತಲೇ ಅದು 'ಸರಿ' ಎಂಬುದಕ್ಕೆ ಸಾಕ್ಷಿಯನ್ನು ಅವರ ಪ್ರತಿಕ್ರಿಯೆಯಾಗಿ ಮೇಲಿನ ವಾಕ್ಯದಲ್ಲಿ ಉಳಿಸಿಬಿಟ್ಟಿದ್ದಾರೆ.

ಯಾರೇ ಆಗಲಿ, ತಮ್ಮ ತಮ್ಮ ಕಳ್ಳಮನಸ್ಸು, ಕೆಮ್ಮು ಹಾಗೂ ಮತ್ತೊಂದನ್ನು ಹೆಚ್ಚು ಕಾಲ ಅದುಮಿಡಲಾರರು ಎಂಬ ಮಾತು ಅದೆಷ್ಟು ಸತ್ಯ!?

ಸೆಟ್ಟರದು ಸುಷುಪ್ತಾವಸ್ಥೆಯ ಬರಹವೆನ್ನಲು ಇದೊಂದು ಸಾಕ್ಷಿಯಷ್ಟೇ. ಮತ್ತು ಈ ಅಂಶವೂ ಸಹ ಸೆಟ್ಟರ "ಕಲ್ಪಿತ ಕಲಾಇತಿಹಾಸ ಪ್ರಜ್ಞೆ''ಯಲ್ಲಿ ಸ್ವಯಂ ವೈರುಧ್ಯರನ್ನು ಫಲಿಸಬಲ್ಲ

ಆತ್ಮರತಿಯ ಗುಣವು ಒಂದು ಅವಿಭಾಜ್ಯ ಅಂಗವಾಗಿ ಸೇರ್ಪಡೆಗೊಳ್ಳುವುದಕ್ಕೆ ಸಾಕ್ಷಿಯಾಗಿಯೂ ಇರುತ್ತದೆ.

ಇ) ಯೋಜಿತ ಸೀಮಿತ ಭಾಷಾಭಿಮಾನ ಹಾಗೂ ತನ್ಮೂಲಕ ಜ್ಞಾನಸಂಪತ್ತಿನ ನಿರಾಕರಣೆ:

'ಅನಿವಾರ್ಯವಾಗಿ' ಕನ್ನಡ ಭಾಷೆಯನ್ನು ಬಳಸಿ ('ನಿಜವಾದ ಕನ್ನಡದಲ್ಲಿ' ಎಂದೇನಲ್ಲ) ಬರೆಯುವವರಿಗೆ ಕಲಾಇತಿಹಾಸದ ಐತಿಹಾಸಿಕ ಸಂದರ್ಭ ತಿಳಿದಿರುವುದು ಅತಿ ಕಡಿಮೆ. ಇನ್ಯಾವ ಭಾಷೆಯೊಂದಿಗೆ (ಅದರಲ್ಲಿಯೂ ಭಾರತೀಯ-ಇಂಗ್ಲೀಷಿನೊಂದಿಗೆ) ಹೋಲಿಸದೆಯೂ ಈ ವಿಷಯವನ್ನು ವಿಶ್ಲೇಷಿಸಬಹುದು. ಸೆಟ್ಟರು 'ಕನ್ನಡ v/s ಇಂಗ್ಲೀಷ್' ಯುದ್ಧವನ್ನು ಕಲ್ಪಿಸಿಕೊಂಡಂತೆ ("ಡಾನ್ ಕ್ವಿಗ್ಸೋಟನು ಗಾಳಿಗೋಪುರವನ್ನು ಅಕ್ಷೋಹಿಣಿ ಸೈನ್ಯವೆಂದು ಭಾವಿಸಿ ಕದನಕ್ಕೆ ಮುನ್ನುಗ್ಗಿದಂತೆ" ಎನ್ನೋಣವೆ?) ಕನ್ನಡ v/s ತೆಲುಗು, ತಮಿಳು, ಹಿಂದಿ, ಮಲಯಾಳಂ... ಇವೆಲ್ಲ ಕದನಗಳು ಯಾಕೆ ಕಾಣುವುದಿಲ್ಲವೋ ನಾನರಿಯೆ. ಭಾರತೀಯ-ಇಂಗ್ಲೀಷ್ ಇವರನ್ನು ಇಷ್ಟು ಹೆದರಿಸಿಟ್ಟಿದೆ. ವಸಾರಿ, ವೊಲ್‌ಪ್ಲೀನ್, ಪ್ಯಾನೋಫ್‌ಸ್ಕಿ, ಬರ್ಜರ್, ಮಲ್ರಾವ್, ಗಾಂಬ್ರಿಚ್ ಮುಂತಾದವರ ಮುಖೇನ ಮೂಡಿಬಂದ ಕಲಾಇತಿಹಾಸದ ನಿಜಚಾರಿತ್ರಿಕ, ತಾತ್ವಿಕ ಪಾಠವೂ ಇಂತಹ ಬರಹಗಾರರ ಮನೆಯ ಬಾಗಿಲಿನ ಒಳಕ್ಕಿರಲಿ ಅರಮನೆಯ ಅಂಗಳಕ್ಕೂ ಪ್ರವೇಶಿಸಿದ್ದಿಲ್ಲ. ಬಹುವಾಗಿ ಕನ್ನಡದ ಬೌದ್ಧಿಕ ವರ್ಗಕ್ಕೂ ಸಹ ತಾತ್ವಿಕ ಜಿಜ್ಞಾಸೆಯ ಗಾಂಭೀರ್ಯದ ಬಗ್ಗೆ ಕಿಂಚಿತ್ತೂ ಗೌರವವಿಲ್ಲ. ಎಷ್ಟೇ ಆಗಲಿ, 'ನಮ್ಮ ಅಳತೆಯನ್ನು ಮೀರಲಾರದ ದೇವರಿಗೆ' ನಾವೆಂದಾದರೂ ಗೌರವ ಸೂಚಿಸಿದ್ದಿದೆಯೇ ಹೇಳಿ?

'ಕಲಾವಸ್ತುವೊಂದನ್ನು ಹೇಗೆ ನೋಡುವುದು' ಎಂದು ಕೇಳಿಕೊಳ್ಳುತ್ತಲೇ ನೋಡುತ್ತಿರುವ 'ಕ್ರಮ'ವೇ (ಹೊಸ ಕಲಾ ಇತಿಹಾಸ) ಹೇಗಿದೆ ಎಂದು ಕೇಳಿಕೊಳ್ಳುವುದಾಗಲಿ; ಕಲಾವಸ್ತುವಿನಂತೆ ವಿಶ್ಲೇಷಣೆಯ ಸಾಮಗ್ರಿ/ರೂಪುರೇಷೆಯೂ ಗುರ್ತು ಸಿಗದಷ್ಟು ಬದಲಾಗುತ್ತಿರುವುದಾಗಲಿ, 'ಕಲಾವಿಮರ್ಶೆ' ಐತಿಹಾಸಿಕವಾಗಿ ಸತ್ತಿರುವುದಾಗಲಿ (ನೋಡಿ: ಇದನ್ನು ಕುರಿತ ಡಗ್ಲಾಸ್ ಕ್ರಿಂಪ್‌ನ ಜಗತ್ಪ್ರಸಿದ್ಧ ಲೇಖನ) - ಇಂತಹ ಚಿಂತನೆಯ ಸ್ಪರ್ಶವೂ ಇಲ್ಲದ ಕಲಾಸಾಹಿತ್ಯದ 'ಬಾಲಕರು' ಮಾತ್ರ "ಕೇಂದ್ರ ಅನುಭವದ (ಫೋಕಸಿಂಗ್) ಸುತ್ತಲೇ ಚಿಂತನೆಗಳನ್ನು ಹರಡಬೇಕೆಂಬ ಕಡ್ಡಾಯವೇನಾದರೂ ಇದೆಯೇ?" ಎಂದು ಅತೀವ ಮುಗ್ಧತೆಯಿಂದ ಕೇಳಬಲ್ಲರು.

ಕೃಷ್ಣ ಸೆಟ್ಟರು ಈ ಕೆಲಸ ಮಾಡಿದ್ದಾರೆ (ಪುಟ : 131)

ತಮ್ಮಲ್ಲಿರುವ ಕೀಳರಿಮೆ ಮುಚ್ಚಿಕೊಳ್ಳುವ ಸಲುವಾಗಿಯೋ ಏನೋ 'ಅದು ಓದಿದ್ದೇನೆ ಇದು ಪಾಸು ಮಾಡಿದ್ದೇನೆ' ಎಂದೆಲ್ಲ ಕೊಚ್ಚಿಕೊಂಡಿದ್ದಾರೆ. ಇದೆಲ್ಲ ಅನವಶ್ಯಕ. ಇದೇ ಕಾರಣದಿಂದಾಗಿ ಸೆಟ್ಟರು ಅಪ್ರಜ್ಞಾಪೂರ್ವಕವಾಗಿ, ದಶಕಗಳಿಂದ ರೂಢಿಸಿಕೊಂಡಿರುವ ತಮ್ಮ ಕಲ್ಪಿತ ಕಲಾಇತಿಹಾಸದ ಸಿದ್ಧಾಂತದ ಗೋಡೆಗಳು 'ಅತಾರ್ಕಿಕತೆ'ಯನ್ನು ಮೂಲಬಂಡವಾಳವನ್ನಾಗಿ ಮಾಡಿಕೊಂಡಿದ್ದಾರೆ. ಅಂದರೆ ಅಸಂಬದ್ಧವಾಗಿ, ನಾನು ಹೇಳಿದ್ದನ್ನು ವಿರೋಧಿಸುವಂತೆ ವಾದಮಾಡುತ್ತಲೇ ನನ್ನ ವಾದವನ್ನೇ ಪುಷ್ಟೀಕರಿಸುವ ಅನೇಕ ಉದಾಹರಣೆಗಳು ಸೆಟ್ಟರ

ಪ್ರತಿಕ್ರಿಯಾ ರೂಪದ ಲೇಖನದಲ್ಲಿವೆ. ಅಂತಹ ಒಂದು ಉದಾಹರಣೆ ಈ ಕೆಳಕಂಡಂತಿದೆ:

"ಇನ್‌ಸ್ಟಿಲೇಶನ್, ಅಸಂಬ್ಲೇಜ್‌ಗಳು ಯಾವ್ಯಾವ ಸ್ಥಳ, ಕಾಲಗಳಲ್ಲಿ ಹುಟ್ಟಿಕೊಳ್ಳುತ್ತವೆಯೋ, ಆಯಾ ಸಂದರ್ಭಕ್ಕೆ ನಿರ್ದಿಷ್ಟಗೊಂಡುಬಿಡುವುದು ಅವುಗಳ ಮಹಾನತೆ, ಎಂದು ಇವಿಲಿ ಹೇಳಿರಬಹುದು. ಆದರೆ ಅದಕ್ಕಿಂತ 'ಭಿನ್ನ' ಅಭಿಪ್ರಾಯಗಳೂ ಇವೆ," ಎನ್ನುತ್ತ ಕೃಷ್ಣ ಸೆಟ್ಟರು (ಪುಟ: 132) ಇವಿಲಿಯ *ಅರ್ಥವನ್ನೇ ಸೂಚಿಸುವ* ಮೈಖೇಲ್ ಆರ್ಚರ್‌ನ ಅಭಿಪ್ರಾಯವನ್ನು, ಅದೊಂದು *ವಿರುದ್ಧಾರ್ಥವೆಂಬಂತೆ* ತೋರಿಸುತ್ತಾರೆ, ``Site specificity.. means, rather, that what the work looks like & what it means is dependant in large part as the confirmation of the space in which it is realised..." ಆರ್ಚರ್‌ನ ಈ ಮಾತುಗಳನ್ನು ಉದ್ಧರಿಸುತ್ತ ಸೆಟ್ಟರು "ಹೀಗೆ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನಿಸಿಕೆಗಳು, ಅಭಿಪ್ರಾಯಗಳು ಇರುತ್ತವೆ", ಎಂದು 'ಸಾರಾಂಶಿಕ'ರಂತೆ ಮಾತನಾಡುತ್ತಾರೆ.

ಅಂದರೆ ಪ್ರತಿವಾದ ಹೂಡುವಾಗ ತಾವು ವಿರೋಧಿಸುತ್ತಿರುವವರ ವಾದವನ್ನೇ ಸೆಟ್ಟರು ಊರ್ಜಿತಗೊಳಿಸುತ್ತಿರುತ್ತಾರೆ. ಇಲ್ಲಿನ ಅವರ ಸಾಮಾನ್ಯಪ್ರಜ್ಞೆಯ ಕೊರತೆ ಗಾಬರಿ ಹುಟ್ಟಿಸುವ ಮಟ್ಟದ್ದು!

ಇದನ್ನು ಕಲ್ಪಿತ ಕಲಾಇತಿಹಾಸದ ನೇತ್ಯಾತ್ಮಕತೆಯನ್ನು ಬಲಪಡಿಸುವ 'ಅಸಂಬದ್ಧ' ಸಂರಚನಾ ತಂತ್ರವೆನ್ನಬಹುದು. ಇಂದು ಇಂಗ್ಲೀಷ್ ಅನ್ನು ಸಮರ್ಪಕವಾಗಿ ಬಳಸಲಾರದ ಕನ್ನಡಿಗರು ಅರ್ಧ ಕನ್ನಡಿಗರಾಗಿ ಕಲಾಸಾಹಿತ್ಯದ ಸಂದರ್ಭದಲ್ಲಿ ಕಂಡುಬರುವುದು ಇದೇ ಕಾರಣಕ್ಕೆ. ಬಾವಿಯೊಳಗಿನ ಕಪ್ಪೆಗಳಾಗಿ ಉಳಿಯಲು ಯಾರಿಗಾದರೂ, ಯಾಕಾದರು ಅನ್ನಿಸುತ್ತದೆ ಎಂಬುದೇ ನನಗೆ ತಿಳಿಯದ ವಿಷಯವಾಗಿವೆ.

* * *

'ಕಲ್ಪಿತ ಕಲಾಇತಿಹಾಸ'ವೆಂದರೆ ವಿಶೇಷವಾಗಿ ಇಂಗ್ಲೀಷ್ ಮೂಲದಿಂದ ಹರಿದು ಬರುವ ಕಲಾಇತಿಹಾಸವನ್ನು ಕುರಿತಾದ ಜ್ಞಾನದ 'ನಿರಾಕರಣೆ'. ಇಂಗ್ಲೀಷ್ ಅಲ್ಲದ ಭಾಷೆಯಲ್ಲಿ ಬರೆಯುವ ಬಹುಮಂದಿ, ಇಂಗ್ಲೀಷಿಗೂ ಹಾಗೂ ಯೂರೋಪ್-ಅಮೇರಿಕಗಳ ಜ್ಞಾನೋತ್ಪತ್ತಿಗಳಿಗೂ ವಿಮರ್ಶಾರಹಿತವಾಗಿ, ಅನ್ಯಾಯವಾಗಿ ತಾಳೆ ಹಾಕಿಬಿಡುತ್ತಾರೆ. ನಾನು ಮಾತನಾಡುತ್ತಿರುವುದು ಪಾಶ್ಚಾತ್ಯವಲ್ಲದ, ಸಂಪೂರ್ಣವಾಗಿ ಸ್ವತಂತ್ರವಾದ, ಸ್ವಂತ ವ್ಯಕ್ತಿತ್ವ ಹೊಂದಿರುವ 'ಭಾರತೀಯ ಇಂಗ್ಲೀಷ್' ಕಲಾ ಬರಹಗಳನ್ನು ಕುರಿತು. ಭಾರತದ ರಾಷ್ಟ್ರಭಾಷೆಗಳ್ಯಾವುವೂ - ಹಿಂದಿಯನ್ನೂ ಒಳಗೊಂಡಂತೆ - ಇಂತಹ 'ವ್ಯಕ್ತಿತ್ವವನ್ನು' ಕಲಾಸಾಹಿತ್ಯದ ನಿಟ್ಟಿನಿಂದ ಹೊಂದಿಲ್ಲವೆಂಬುದನ್ನು ಗಮನಿಸಬೇಕು.

ಭಾರತೀಯ ಕಲಾಇತಿಹಾಸಕ್ಕೆ ಅಭೂತಪೂರ್ವ ಕೊಡುಗೆ ಇಂಗ್ಲೀಷಿನಿಂದಾಗಿದೆ. ಭಾರತೀಯವಾದ ಯಾವುದೇ ಭಾಷೆಯೊಂದಿಗೂ ಬೆರೆತು ಹೋಗುವ ಅಪರೂಪದ ಗುಣ ಅದಕ್ಕಿದೆ. ಜೊತೆಗೆ, ಪಾಪ, ಅದಕ್ಕೆ ಕರ್ನಾಟಕ, ತಮಿಳುನಾಡು, ಆಂಧ್ರ ಎಂಬ ಇರಲೊಂದು 'ತವರುಮನೆ'ಯೂ ಇಲ್ಲ, ಇದನ್ನು ಬರೆಯುವವರು, ಬರೆಸುವವರು (ಟಿ.ಸು. ಕೃಷ್ಣಸೆಟ್ಟರನ್ನೂ ಒಳಗೊಂಡಂತೆ ಎಂಬುದು ಎಂತಹ ವಿಪರ್ಯಾಸ! ಏಕೆಂದರೆ ಇಲ್ಲಿಯವರೆಗೂ ಅವರು ತಮ್ಮ ಕೃತಿಗಳನ್ನು

ಕುರಿತಂತೆ ಬರೆಸಿಕೊಂಡಿರುವ ಎರಡೂ ಕ್ಯಾಟಲಾಗ್‌ಗಳು-ಎಸ್.ಎನ್. ಚಂದ್ರಶೇಖರ್ ಹಾಗೂ ನಂತರ ನಾನು ಬರೆದದ್ದು-ಇಂಗ್ಲೀಷಿನಲ್ಲಿವೆ. Oh no!! ಮತ್ತು ಇವುಗಳನ್ನು ಓದುವ ಬಹುತೇಕರ ಮನೆಯ ಮಾತೂ ಸಹ ಇಂಗ್ಲೀಷ್ ಅಲ್ಲದೆ ಭಾರತೀಯ ಭಾಷೆಯಾಗಿರುತ್ತದೆ. ನಾನು ಕನ್ನಡದಲ್ಲಿ ಚಿಂತಿಸಿ ಇಂಗ್ಲೀಷ್‌ನಲ್ಲಿ ಬರೆಯುವುದರಿಂದ ಅದನ್ನು 'ಕನ್ನಡಿಂಗ್ಲೀಷ್' ಬರಹವೆನ್ನಬೇಕು, ಡೆಕ್ಕನ್ ಹೆರಾಲ್ಡಿನ ಮೂಲಕ ಎರಡು ದಶಕಗಳಿಂದ ಬರೆಯುತ್ತ ಕರ್ನಾಟಕದಲ್ಲಿ ಕಲಾ ವಿಮರ್ಶಾಪ್ರಕಾರದ ನಿಜವಾದ ಹರಿಕಾರರೇ ಆದ ಮಾರ್ಥ ಯಾಕಿಮೋವಿಜ್‌ರ ಬರಹವನ್ನು ಪೋಲೀಷ್-ಇಂಗ್ಲೀಷ್ ಎನ್ನಬೇಕೇ ಹೊರತು ಸೆಟ್ಟರು ಸಿಟ್ಟಲಿ 'ಕಲ್ಪಿಸಿಕೊಳ್ಳುವ' ಕನ್ನಡ v/s ಇಂಗ್ಲೀಷ್ ಯುದ್ಧವೇ ಅನುಕೂಲಸಿಂಧು, ಕಪೋಲ ಕಲ್ಪಿತ ಅಂಶವೆಂಬುದನ್ನು ಗಮನಿಸಬೇಕು. ಅಥವ ಪ್ರತಿಕ್ರಿಯೆ ಲೇಖನದ ಅವರದೇ ವಾಕ್ಯವೊಂದನ್ನು ಅಣಕ ಮಾಡಿ ಕೇಳುವುದಾದರೆ ಕನ್ನಡ v/s ಇಂಗ್ಲೀಷ್ ಎಂಬ ಕಲ್ಪನೆಯೇ, ಈ ಮೇಲಿನ ವಾದದಿಂದಾಗಿ, "ಸತ್ತು ಹೋಗುವುದಿಲ್ಲವೇ?"

* * *

ಸೆಟ್ಟರ ಕಲ್ಪಿತ ಕಲಾಇತಿಹಾಸದ ದಶಾವತಾರಕ್ಕೆ ಮತ್ತೂ ಅನೇಕ ಮುಖಗಳಿವೆ. ಹಿಂದೊಮ್ಮೆ 'ಜನಪ್ರಿಯ ಕಲಾಮಾಲಿಕೆ' ಎಂಬ ಸಣ್ಣ ಕಲಾಪುಸ್ತಕಗಳಿಗೆ ಸೆಟ್ಟರು ಹಾಗೂ ನಾನು-ಇಬ್ಬರೂ ಬೇರೆ ಬೇರೆಯಾಗಿ ಸಂಪಾದಕರಾಗಿದ್ದೆವು. ಕಲಾವಿದ ಸಿ. ಚಂದ್ರಶೇಖರ್ ಅಧ್ಯಕ್ಷರಾಗಿದ್ದಾಗಿನ ಲಲಿತಕಲಾ ಅಕಾಡೆಮಿಯ ಪ್ರಕಟಣೆಗಳಿವು. ಆರು ಪುಸ್ತಕಕ್ಕೆ ನಾನೇ ಸಂಪಾದಕನಾಗಿದ್ದಾಗಲೂ ಅದ್ಯಾವುದೋ ಮಾಯದಲ್ಲಿ ಆ ಮಾಲಿಕೆಗಾಗಿ ನಾನೂ ಬರೆದಿದ್ದ ಪುಸ್ತಕವೊಂದು ಸೆಟ್ಟರ ಸಂಪಾದಕೀಯದಲ್ಲಿ 'ನಿರಾಕೃತ'ಗೊಂಡಿತು. 'ನನ್ನ ಬರಹವು 'ವಿಷಯಕ್ಕೆ' ಪೂರಕವಾಗಿಲ್ಲದ್ದರಿಂದ ನಿರಾಕೃತಗೊಂಡಿತು' ಎಂದು ಸಂಪಾದಕ ಕೃಷ್ಣಸೆಟ್ಟರ ಪರವಾಗಿ ಆಗಿನ ರಿಜಿಸ್ಟ್ರಾರ್ ಶ್ರೀ ಮುಕುಂದನ್ ಪತ್ರವೊಂದರ ಮೂಲಕ ಸ್ಪಷ್ಟೀಕರಣ ನೀಡಿದ್ದರು. ಅದೇ ನೆಪವಾಗಿ, ಹಠವಾಗಿ, ಆ ಲೇಖನವನ್ನೂ ಒಳಗೊಂಡ ನನ್ನ ಮೊದಲ ಪುಸ್ತಕ 'ನೋಟಪಲ್ಲಟ'ವು 'ಅಭಿನವ' ಪ್ರಕಾಶನದಿಂದ ಹೊರಬಂದಿತು. ತನದನಂತರ ಈ ಪುಸ್ತಕದ, ಅದರಲ್ಲಿಯೂ ನಿರ್ದಿಷ್ಟವಾಗಿ 'ನವ್ಯ ಕಲೆಯ ಪ್ರಯೋಗಗಳ' ವಿಷಯವುಳ್ಳ ಆ ಲೇಖನಕ್ಕೆ ಬಂದ ಇತ್ಯಾತ್ಮಕ (positive) ಪತ್ರಿಕಾ ವಿಮರ್ಶೆಗಳನ್ನೂ ಈ ಲೇಖನದೊಂದಿಗೆ ಲಗತ್ತಿಸಲಾಗಿದೆ. ಕಲಾಇತಿಹಾಸವೆಂದರೆ ಕಲಾಕೃತಿಯು ರೂಪುಗೊಂಡ ತಾರೀಕು, ಮಾಧ್ಯಮ, ಅಳತೆ ಇತ್ಯಾದಿ 'ವರದಿಗಳಷ್ಟೇ' ಎಂದು ಭಾವಿಸುವ ಸೆಟ್ಟರಂತಹ 'ಸಾರಾಂಶಕಾರರಿಗೆ' ವೈಯಕ್ತಿಕ ದೃಷ್ಟಿಕೋನವೊಂದರಿಂದ ಆಧುನಿಕ ಕಲೆಯನ್ನು ನೋಡಲು ಪ್ರಯತ್ನಿಸಿದ ನನ್ನ ಪ್ರಯತ್ನವು 'ಅನ್ಯಜಗತ್ತಿನವರ ಬರವಣಿಗೆಯಂತೆ' ಕಂಡಿರಬೇಕು.

ಹೀಗೆ ಕ್ಲೀಷಾತ್ಮಕ ಬರಹದ ಬಯಕೆಯು ಕಲ್ಪಿತ ಕಲಾಇತಿಹಾಸಕ್ಕೆ ಆತುಕೊಂಡವರಿಗೆ ಅನಿವಾರ್ಯವಾಗುತ್ತದೆ ಕೂಡ.

ಇದೇ ಜನಪ್ರಿಯ ಕಲಾಮಾಲಿಕೆಯ ಪುಸ್ತಕಗಳು ಪ್ರಕಟಗೊಂಡಾಗ ನನಗೆ ಮತ್ತೂ ಒಂದು ಶಾಕ್ ಕಾದಿತ್ತು: ಸೆಟ್ಟರು ಹಾಗೂ ನಾನು 'ಬೇರೆ ಬೇರೆಯಾಗಿ' ಆರಾರು ಪುಸ್ತಕಗಳನ್ನು ಸಂಪಾದಿಸಿದ್ದರೂ ಪ್ರತಿ ಪುಸ್ತಕದ ಬೆನ್ನ ಹಿಂದೆ, ಹಿನ್ನುಡಿಯಾಗಿ, ಒಂದು ಪ್ಯಾರದಲ್ಲಿ ಈ

ಮಾಲಿಕೆಯ 'ಧ್ಯೇಯೋದ್ದೇಶದ' ಬರಹವಿದೆ. ಆದರೆ ಕೆಲವು ಪುಸ್ತಕಗಳ ಕೆಳಗೆ ಅದನ್ನು ನಾನು ಬರೆದದ್ದೆಂಬುದಕ್ಕೆ ನನ್ನ ಹೆಸರನ್ನೂ ಮತ್ತಷ್ಟು ಪುಸ್ತಕದಡಿ ಅದನ್ನು ಚಿ.ಸು. ಕೃಷ್ಣಸೆಟ್ಟರು ಬರೆದಿದ್ದೆಂಬುದಕ್ಕೆ ಅವರ ಹೆಸರೂ ಇದೆ. ಇದರರ್ಥ 'ಸೆಟ್ಟರೇ ಅದನ್ನು ನಮ್ಮಿಬ್ಬರ ಪರವಾಗಿ, ಇಬ್ಬರಿಗೂ ಪ್ರತ್ಯೇಕವಾಗಿ 'ಆಥರ್‌ಶಿಪ್' ಕೊಟ್ಟು ಬರೆದರು' ಎಂದೇನೂ ಅಲ್ಲದಿರಬಹುದು. ಆದರೂ, ಹಾಗಿಲ್ಲದಿದ್ದ ಪಕ್ಷದಲ್ಲಿ ಅದನ್ನು ಬರೆದವರಾದರೂ ಯಾರು?

ಅವ್ರು ಬಿಟ್, ಇವ್ರು ಬಿಟ್ ಅವ್ಯಾರು? ಇದು ಒಂದು ಸಿನೆಮದಲ್ಲಿ ಒಂದೇ ಪಾತ್ರವನ್ನು ಇಬ್ಬರು ನಟರು ಅಭಿನಯಿಸಿದಂತಾಯಿತು. ಸೆಟ್ಟರ ಕಲ್ಪಿತ ಇತಿಹಾಸವನ್ನೇ ಹೋಲುವ ಬಹುಪಾಲು ಕನ್ನಡ ಕಲಾಸಾಹಿತ್ಯದ 'ಹಾಸ್ಯ *ಸಂದರ್ಭಗಳಿಗೆ'* ಇದೊಂದು ಉದಾಹರಣೆ ಅಷ್ಟೆ.

ಅಂತಿಮವಾಗಿ ನನ್ನ 'ವಿಮರ್ಶೆಯ ವಿಮರ್ಶೆ' ಲೇಖನವು " *'ಚಿತ್ರಾಕ್ಷರ' ಪತ್ರಿಕೆಯ ಮೊದಲ ಸಂಚಿಕೆಯಲ್ಲಿ ಪ್ರಕಟವಾಗುವ 'ಬದಲು' ಸಂಕುಲದಲ್ಲಿ ಪ್ರಕಟವಾಗಿದೆ"* ಎಂಬ 'ಸಂಕುಲ'ದ ಸಂಪಾದಕರ ಹೇಳಿಕೆಯೂ ಸೆಟ್ಟರ ಅನುಕೂಲ ಸಿಂಧು ಮಾರ್ಗದರ್ಶನದಿಂದ ಉಂಟಾಗಿರಬಹುದಾದ ಒಂದು ತಪ್ಪು. ಚಿತ್ರಾಕ್ಷರದ ಮೊದಲ 'ಅಸಲಿ' ಸಂಚಿಕೆಯಲ್ಲಿ ಇದು ಪ್ರಕಟವಾಗಿದ್ದು, ಮರುದಿನ ಸುಮತೀಂದ್ರ ನಾಡಿಗರ ಅಮೃತಹಸ್ತದಿಂದ ಬಿಡುಗಡೆಗೊಂಡು, ಆ ಕೂಡಲೇ ಅದನ್ನು ದೃಶ್ಯಕಲಾಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಮಾನ್ ಕೃಷ್ಣಸೆಟ್ಟರು ಮುಟ್ಟುಗೋಲು ಹಾಕಿಕೊಂಡರು. ಅವರ ಪ್ರಜಾಪ್ರಭುತ್ವವಾದಿ (*sic*) ನಿಲುವಿಗೆ ಇದೊಂದು ಸ್ಪಷ್ಟ ಸಾಕ್ಷಿ. ಅದಕ್ಕವರು ನಂತರ ನೀಡಿದ ವಿವರಣೆ, "ನಾನೇ ಅಧ್ಯಕ್ಷನಾಗಿರುವ ಸಂಘದ ಪತ್ರಿಕೆಯಲ್ಲಿ ನನ್ನ ವಿಮರ್ಶೆಗೆ ವಿಮರ್ಶೆ ಬರುವುದು ಸರಿಯಲ್ಲ"ವೆಂದು. ಈ ಮಾತಿಗೆ ಕಲಾವಿಮರ್ಶಕರಾದ ಡಾ. ಅ.ಲ.ನ. ಹಾಗೂ ಕೆ.ವಿ. ಸುಬ್ರಹ್ಮಣ್ಯಂ ಸಾಕ್ಷಿ. ಇದೇ ತರ್ಕವನ್ನು ಅನ್ವಯಿಸುವುದಾದರೆ, ಕೃಷ್ಣಸೆಟ್ಟರು ಸಂಪಾದಕ ವರ್ಗದಲ್ಲಿರುವ 'ಸಂಕುಲ'ದಲ್ಲಿ ಏಕೆ ಅದನ್ನೇ ಪ್ರಕಟಣೆಗಾಗಿ ನೀಡಿದರು?

ಅದೂ ನನ್ನ ಪೂರ್ವಾನುಮತಿ ಇಲ್ಲದೆ?

ಅದೂ ಸೆಟ್ಟರ 'ಪ್ರತಿಕ್ರಿಯೆ' ಎಂಬ ಬಾಲಂಗೋಚಿಯೊಂದಿಗೆ? ಅದೇ ಸಂಚಿಕೆಯಲ್ಲಿ ನನಗೂ ಉತ್ತರಿಸಲು ಅವಕಾಶ ದೊರೆಯದೇ ಹೋದ ಬಗ್ಗೆ ನನಗೆ ಅತೀವ ಸಂಕಟವಾಗ್ತಿದೆ.

ನನಗೆ ತಿಳಿದ ಮಟ್ಟಿಗೆ ಚಿತ್ರಾಕ್ಷರದ ಮೊದಲ 'ಅಸಲಿ' ಪತ್ರಿಕೆ ಖ್ಯಾತ ಕಲಾವಿದ ಯೂಸುಫ್ ಅರಕ್ಕಲ್ ಹಾಗೂ ನಾಡಿಗರ್ ಮೂಲಕ ಒಟ್ಟಾಗಿ ಎರಡು ಪ್ರತಿಗಳಾದರೂ ಬಿಡುಗಡೆಗೊಂಡಿವೆ. ಮೊದಲ ಅಸಲಿ 'ಚಿತ್ರಾಕ್ಷರ' ಪತ್ರಿಕೆಯನ್ನು ಬಿಡುಗಡೆ ಮಾಡಿದ ನಾಡಿಗರು ಅದರಲ್ಲಿ ಪ್ರಕಟವಾಗಿದ್ದ ನನ್ನ 'ವಿಮರ್ಶೆಯ ವಿಮರ್ಶೆ'ಯನ್ನು ಕುರಿತು ವಿಶೇಷವಾಗಿ ಪ್ರಸ್ತಾಪ ಮಾಡಿದ್ದೂ ಸಹ 'ದಾಖಲಾಗಿದೆ'. ಸಂಕುಲದಲ್ಲಿ ಆ ಅಂಶ ಮತ್ತು ಈ ಲೇಖನ 'ಪುನರ್ ಪ್ರಕಟಿತ' ಎಂಬುದಕ್ಕೆ ಅಲ್ಲಿದ್ದ ಸುಮಾರು ಐವತ್ತು ಮಂದಿ ಕಲಾವಿದ ಬರಹಗಾರರು ಇದಕ್ಕೆ ಸಾಕ್ಷಿ. ಇಷ್ಟಲ್ಲದೆ ಮೂರನೆಯ 'ಪ್ರತಿ'ಯೊಂದು ನನಗೆ ತೀರ ಆತ್ಮೀಯರಾದವರೊಬ್ಬರ ಬಳಿಗೆ ಆಕಸ್ಮಿಕವಾಗಿ ಹಾರಿ ಬಂದುದೂ ಇದೆ. ಅದರ ಜೆರಾಕ್ಸ್ ಪ್ರತಿಯನ್ನು ಈ ಲೇಖನದೊಂದಿಗೆ ಲಗತ್ತಿಸಿದ್ದೇನೆ.

ಸಂಗ್ರಹ ರೂಪದಲ್ಲಿ ಹೇಳುವುದಾದರೆ, ಚಿ.ಸು. ಕೃಷ್ಣಸೆಟ್ಟರು ನನ್ನ 'ವಿಮರ್ಶೆಯ ವಿಮರ್ಶೆಗೆ' ಪ್ರತಿಕ್ರಿಯಿಸಿದ್ದು ಶುದ್ಧ ಸೌಂದರ್ಯಶಾಸ್ತ್ರೀಯ ಉದ್ದೇಶದಿಂದಲ್ಲ. ಆಗಸ್ಟ್ 1999 ರಂದು 'ಚಿತ್ರಾಕ್ಷರ' ಪತ್ರಿಕೆಯಲ್ಲಿ ಪ್ರಕಟವಾದ ನನ್ನ ಲೇಖನವು ಅಕ್ಟೋಬರ್ 1999 - ಅಂದರೆ ಕೇವಲ ಎರಡೇ ತಿಂಗಳಲ್ಲಿ ಮತ್ತೊಂದು ಕನ್ನಡ ಪತ್ರಿಕೆಯಲ್ಲಿ ಪುನರ್‌ಮುದ್ರಣಗೊಂಡದ್ದು ಒಂದು ದಾಖಲೆ. *ಬಹುಶಃ ಇಷ್ಟು ಕಡಿಮೆ ಅವಧಿಯಲ್ಲಿ 'ಪುನರ್ ಪ್ರಕಟಣೆ'ಯ ಸೌಭಾಗ್ಯ ಪಡೆದ ಮತ್ತೊಂದು ಲೇಖನವು ಕನ್ನಡದ ಸಾಹಿತ್ಯ ಇತಿಹಾಸದಲ್ಲೇ ಇರಲಾರದೇನೋ!!* ಒಮ್ಮೆ ಪ್ರಜಾವಾಣಿಯ ಸೆಟ್ಟರ ವಿಮರ್ಶೆ ಹಾಗೂ ಅದನ್ನು ಕುರಿತ ನನ್ನ ವಿಮರ್ಶೆ 'ಚಿತ್ರಾಕ್ಷರ'ದಲ್ಲಿ ಪ್ರಕಟವಾದ ಮೇಲೆ ಅದಕ್ಕೆ ಸೆಟ್ಟರು ತಮ್ಮ ಪ್ರತಿಕ್ರಿಯೆಯನ್ನು ಮಾತ್ರ 'ಸಂಕುಲ'ದಲ್ಲಿ ಮುದ್ರಿಸಬಹುದಿತ್ತು-ಇದು ರೂಢಿಗತವಾಗಿ ಚಾಲ್ತಿಯಲ್ಲಿರುವ ಕ್ರಮ. ಬದಲಿಗೆ ಇಡಿಯಾಗಿ ಈ 'ಎಲ್ಲ'ವನ್ನೂ 'ಸಂಕುಲ'ದಲ್ಲಿ ಪುನರ್ ಮುದ್ರಿಸಿದ್ದರ ಹಿಂದೆ ಸೆಟ್ಟರ 'ಪ್ರದರ್ಶನಕಾರತ್ವ'ದ ತೀವ್ರ ಹಸಿವು ಅಡಗಿದೆಯೋ ಎಂಬ ಅನುಮಾನ ನನ್ನನ್ನು ಕಾಡದಿರದು. ಇದೇ ತರ್ಕದೊಂದಿಗೆ ಹೇಳುವುದಾದರೆ ಈ ನನ್ನ 'ಪ್ರತಿಕ್ರಿಯೆ'ಯನ್ನು ಪ್ರಕಟಿಸುವಾಗ-ಈ ನಾಲ್ಕು ಲೇಖನಗಳನ್ನು ಪುನರ್ ಮುದ್ರಿಸಬೇಕಾಗುತ್ತದೆ!

'ಸಂಕುಲ' ಬಳಗವು ತಮ್ಮ ಮೇಲೆ ಇರಿಸಿರುವ ವಿಶ್ವಾಸವನ್ನು ಸೆಟ್ಟರು ಹೀಗೆ ದುರುಪಯೋಗ ಮಾಡಿಕೊಳ್ಳಬಾರದಿತ್ತು! ಇಂತಹ ತಂತ್ರಗಾರಿಕೆಯು ಸೆಟ್ಟರ ಸೌಂದರ್ಯಾತ್ಮಕತೆಯನ್ನು ಮೀರಿದ ಶಕ್ತಿಸಾಧನೆಯ ಸಿದ್ಧಿಗಾಗಿ ಸಹಕಾರಿಯಾದುದು.

'ತಮ್ಮ ನೂರಾರು ಲೇಖನಗಳಲ್ಲಿ ಒಂದು ಸಾಮಾನ್ಯದರ್ಜೆಯದಾದ ಲೇಖನವನ್ನೇ ವಿಶ್ಲೇಷಿಸುವ ಬದಲಿಗೆ ತಮ್ಮ ಒಟ್ಟೂ ಬರಹದ ವಿಶ್ಲೇಷಣೆ ಮಾಡಿದ್ದರೆ ಚೆನ್ನಿತ್ತೆಂದು', ಸೆಟ್ಟರು ಹೇಳಿದ್ದಾರೆ. ನನ್ನ 'ಆ' ಲೇಖನವು ಮಾಡಿರುವುದೇ ಅದನ್ನು. ಅದಿರಲಿ, ನನಗೆ ಹಾಗೆ ಉಪದೇಶಿಸುವ ಅವರು (ಉಪದೇಶಿಸುವುದರಲ್ಲಿ ತಪ್ಪೇನಿಲ್ಲ, ಅವರು ನನಗಿಂತಲೂ ದೊಡ್ಡವರು-ವಯಸ್ಸಿನಲ್ಲಿ) ಅವರದೇ ಉಪದೇಶದಂತೆಯೇ ಅವರ 'ಪ್ರತಿಕ್ರಿಯೆ'ಯಲ್ಲಿಯೇ ನನ್ನ ಸಮಗ್ರ ಬರಹಗಳ ಬಗ್ಗೆಯೂ ಪ್ರತಿಕ್ರಿಯಿಸಬಹುದಿತ್ತಲ್ಲ! ಇದಕ್ಕೇ ದೊಡ್ಡವರು ಹೇಳಿರುವುದು, "ವೇದಾಂತ ಹೇಳೋಕೆ, ಬದನೆಕಾಯಿ..." ಎಂದು.

ಈ ನನ್ನ ಪ್ರತಿಕ್ರಿಯೆಯ ರೂಪದ ಲೇಖನವು ಮೂಲಭೂತವಾಗಿ ಎರಡನೇ ಬಾರಿ ಸೆಟ್ಟರ ಸಾಹಿತ್ಯದ ವಿಶ್ಲೇಷಣೆಯನ್ನು (ಒಗರು ಭಾಷೆಯಲ್ಲಾದರೂ ಸಹ) ಮಾಡಿದೆ. ಅವರ ಕುರಿತ ನನ್ನ ಮೊದಲ ವಿಮರ್ಶೆಯು ಹಿಂದೊಮ್ಮೆ ಸಂಕುಲದಲ್ಲಿಯೇ ಪ್ರಕಟವಾಗಿತ್ತು ಎಂದು ಈ ಮುನ್ನವೇ ವಿವರಿಸಿದ್ದೇನೆ. ಕಲಾಸಾಹಿತ್ಯವನ್ನು ಕುರಿತ ನನ್ನ ಕಾಳಜಿಗೆ ಇದು ಸಾಕ್ಷಿ.

ಈ ನನ್ನ ಲೇಖನಕ್ಕೆ ಹಿನ್ನೆಲೆಯಾಗಿ ಒಂದು ನಿರ್ದಿಷ್ಟ ಕಾರಣವಿದೆ: ಕೃಷ್ಣಸೆಟ್ಟರ ಬಯೋಡೇಟಾವನ್ನು ಅವರ ಶರೀರ-ಶಾರೀರದ ಹಿನ್ನೆಲೆಯಲ್ಲಿ ನೋಡಿದಾಗ ಅವರು 'ಪ್ರಶ್ನಾತೀತರು' ಎಂಬಂತೆ ಕಳೆದ ಕೆಲವು ವರ್ಷದಿಂದ ಕನ್ನಡದ ದೃಶ್ಯಕಲಾರಂಗವು ಭಾವಿಸುವಂತಾಗಿ ಹೋಗಿದೆ. ಅವರನ್ನು ಮೀರಿ ಬೆಳೆದ ಕಲಾವಿದರೆಲ್ಲ ಅವರಿಂದ 'ಮೌನವಾಗಿ' ಮೈಲುಗಟ್ಟಲೆ ದೂರ ಸರಿದಿದ್ದಾರೆ (ಉದಾ: ಕಲಾವಿದರಾದ ಕೆ.ಟಿ. ಶಿವಪ್ರಸಾದ್, ಎಸ್.ಜಿ.

ವಾಸುದೇವ್ ಇತ್ಯಾದಿ). "ವೈಯಕ್ತಿಕ ವರ್ಚಸ್ಸನ್ನು ಉಪಯೋಗಿಸಿಕೊಂಡು ಕಲಾಸಾಹಿತ್ಯ ಸಂಸ್ಥೆಯೊಂದನ್ನು ರೂಪಿಸಬೇಕೆಂಬ-ಮುಖ್ಯವಾಗಿ ನನ್ನ (ಅನಿಲ್) ಒತ್ತಾಯದಿಂದ-'ಕರ್ನಾಟಕ ದೃಶ್ಯ ಕಲಾಸಾಹಿತ್ಯ ಪರಿಷತ್ತು' ರೂಪಿತವಾಯಿತು" ಎಂದು ಸೆಟ್ಟರೇ, ಈ ಪರಿಷತ್ತಿನ ಉದ್ಘಾಟನೆಯ ದಿನ ತಮ್ಮ ಭಾಷಣದಲ್ಲಿ ಹೇಳಿದರು. ಆದರೆ ಅಲ್ಲಿ ಆ ಕೂಡಲೇ ಆ, ಸಂಸ್ಥೆ ಹಾಗೂ ನಮ್ಮೆಲ್ಲರ ವರ್ಚಸ್ಸನ್ನು ಬಳಸಿಕೊಂಡು ಅವರ ವೈಯಕ್ತಿಕ ವ್ಯಕ್ತಿತ್ವ ಬೆಳೆಸಿಕೊಳ್ಳುವ ಸಲುವಾಗಿ 'ತಿರ್ಗಾ ಮುರ್ಗಾ' ಘಟನೆಗಳು ನಡೆಯತೊಡಗಿದಾಗ ನಾವೆಲ್ಲ, ನನ್ನಿಂದ ಆರಂಭಿಸಿ-ಆ ಪರಿಷತ್ತಿನಿಂದ ಕಂಬಿ ಕೀಳತೊಡಗಿದೆವು.

ಅಂತಹ ಘಟನೆಗಳಲ್ಲಿ ಮೊದಲನೆಯದು: ನನ್ನ 'ವಿಮರ್ಶೆಯ ವಿಮರ್ಶೆ'ಯನ್ನೊಳಗೊಂಡ ಮೊದಲ ಅಸಲಿ 'ಚಿತ್ರಾಕ್ಷರ' ಸಂಚಿಕೆಯ 'ಮೂರು ಪ್ರತಿಗಳ' ಬಿಡುಗಡೆಯ ನಂತರ ಮುಟ್ಟುಗೋಲು ಹಾಕಿಕೊಂಡದ್ದು. ಎರಡನೆಯದು: ಅತ್ಯಂತ ಕಡಿಮೆ ಅವಧಿಯಲ್ಲಿಯೇ ಅದು 'ಸಂಕುಲ'ದಲ್ಲಿ ಪುನರ್ ಪ್ರಕಟಗೊಂಡದ್ದು. ಆದ್ದರಿಂದ ನನ್ನ 'ವಿಮರ್ಶೆಯ ವಿಮರ್ಶೆ' ಲೇಖನವು ಪಡೆದುಕೊಂಡಿರುವ ಐತಿಹಾಸಿಕ ಮಹತ್ವವು ನನ್ನನ್ನೇ ದಿಗ್ಭ್ರಮೆಗೊಳಿಸಿದೆ. 'ಸಂಕುಲ'ಕ್ಕೆ ಮತ್ತೊಮ್ಮೆ ಧನ್ಯವಾದ.

ಕೃಷ್ಣಸೆಟ್ಟರ ತಲೆಮಾರಿನ ಕಲಾವಲಯದವರು ಅವರ ಇಂತಹ 'ಹಿಟ್ಲರಿಸಂ'ಗೆ ಬೆದರಿ ಸುಮ್ಮನಾಗುವ, ದೂರ ಸರಿವ ಜನ. ಇಲ್ಲಿಯವರೆಗೂ ಇದ್ದ ಅಲಿಖಿತ ನಿಯಮವೂ ಇದೇ ಆಗಿತ್ತು. ಅವರ ನಂತರದ ತಲೆಮಾರಿನವರಾದ ನಮಗೆ ಅಂತಹ 'ದರ್ದು' ಏನೂ ಇಲ್ಲ. ಮತ್ತು ಇಂತಹ ಕಾರಣಗಳಿಂದಾಗಿಯೇ -ಸಾಹಿತ್ಯ ರಂಗದಲ್ಲಿ ಇರುವಂತಲ್ಲದೆ- ಹಿರಿಯ ತಲೆಗಳನ್ನು ಕುರಿತು ನನ್ನ ತಲೆಮಾರಿನವರಲ್ಲಿ ಗೌರವ ಭಾವ ಮೂಡಿಲ್ಲದಿರುವುದೂ ಸಹ!! ಜೊತೆಗೆ ಸೆಟ್ಟರಂತಹ, ಹತ್ತಾರು ವರ್ಷಗಳಿಂದ ಬರೆಯುತ್ತಿರುವವರನ್ನು ವಿಶ್ಲೇಷಿಸುವುದರಲ್ಲಿ ತಪ್ಪೇನೂ ಇಲ್ಲ. ಅವರಂತೂ "ಕೇವಲ ನಾಲ್ಕಾರು ವರ್ಷ ಬರೆಯುತ್ತಲೇ ಸರ್ವಜ್ಞರಂತೆ ಫರ್ಮಾನು ಹೊರಡಿಸುವ" ನಮ್ಮಂತಹವನ ತಂಟೆಗೂ ಬರುವುದಿಲ್ಲವೆಂದು ಘಂಟಾಘೋಷವಾಗಿ ಹೇಳಿರುವ ನಾರ್ಸಿಸಿಸ್ಟ್ ಅಲ್ಲವೆ!

ಅಂತಿಮವಾಗಿ ಇತ್ತ ಚಿ.ಸು. ಕೃಷ್ಣಸೆಟ್ಟರ ಕಲಾ/ಸಾಹಿತ್ಯದ ವ್ಯಕ್ತಿತ್ವವನ್ನು ಸಂಗ್ರಹಿಸುವುದಾದರೆ ಇವರದು ಒಂದು ತೆರನಾದ ಕಲ್ಪಿತ ಕಲಾಇತಿಹಾಸವೆಂಬ ಬೀದಿನಾಟಕದ ರಾವಣಾಸುರನ ವೇಷ. ಮೊದಲೇ ಹೇಳಿದಂತೆ, ಗೊತ್ತಿದ್ದೂ ಬೇಕೆಂದೇ ಹಸೀ ಸುಳ್ಳನ್ನು ಹೇಳುವುದು. 'ವೈಯಕ್ತೀಕರಣದ' ಅಹಮಿಕೆಯಿಂದಾಗಿ ಏಕತಾನತೆಯನ್ನು ಬೆಳೆಸಿಕೊಂಡಿರುವುದು. ರಾಜಕೀಯಾತ್ಮಕವಾದ ಆಕಾಂಕ್ಷೆಗಳಿಂದಾಗಿ ಕಲಾವಿದ-ಕಲಾಸಾಹಿತಿ ಎಂಬ ಎರಡು ಧೃವಗಳ ನಡುವೆ ತ್ರಿಶಂಕುವಾಗಿ ಸಂಚರಿಸುವುದು. ಒಂದು ನಿರ್ದಿಷ್ಟ, ವೈಯಕ್ತಿಕವಾದ 'ಜಗತ್ತನ್ನು ಭಾವಿಸುವ ತತ್ವ' ಇಲ್ಲದಿರುವುದು. (ಭಾರತೀಯವಾದರೂ) ಇಂಗ್ಲೀಷನ್ನು ದ್ವೇಷಿಸುವುದರಿಂದಾಗಿ ತಮಗೊದಗಿ ಬರಬಹುದಾದ ಜ್ಞಾನಮೂಲಗಳ ದ್ವಾರಗಳನ್ನು ತಾವೇ ಮುಚ್ಚಿಬಿಟ್ಟಿರುವುದು. ತಾವು ಪ್ರಶ್ನಾತೀತರೆಂದುಕೊಂಡಿರುವುದು. ಮುಗ್ಧತೆ-ಸ್ವಯಂಪ್ರೀತಿಯಿಂದ ಉಬ್ಬುವುದು. ಚರ್ಚಾಪಟುವಿನಂತೆ ಜ್ಞಾನಜಿಜ್ಞಾಸೆಗೆಂತಲೂ ವಾದಕ್ಕಿಳಿಯುವುದರಲ್ಲೇ ಸಂತಸ ಕಾಣುವುದು- ಇವೆಲ್ಲಕ್ಕೂ

'ಅತಾರ್ಕಿಂತೆ'ಯೆಂಬ ತರ್ಕವನ್ನು ಬಳಸುವುದು, ಮತ್ತು ಇದೇ ಕಾರಣಕ್ಕೆ ಕ್ಲೀಷಾತ್ಮಕ ಬರಹವನ್ನೇ ವರ್ಷಗಟ್ಟಲೆ ಬಂಡವಾಳವನ್ನಾಗಿಸಿಕೊಂಡಿರುವುದು.... — ಇವೆಲ್ಲ ಗುಣಗಳು ತಮ್ಮ ಬರಹದ ಹಾಗೂ 'ಕಲಾಚಟುವಟಿಕೆಗಳ' ಮೂಲಕ ಕೃಷ್ಣಸೆಟ್ಟರು ಇಲ್ಲಿಯವರೆಗೂ ಬೆಳೆಸಿಕೊಂಡಿರುವ ಕಲಾವ್ಯಕ್ತಿತ್ವ. ಉಪಮೆಯೊಂದನ್ನು ಬಳಸಿಹೇಳುವುದಾದರೆ ನಿಜಭಕ್ತಿಯ ಶಕ್ತಿಯುಳ್ಳಂತಹ ಅಸಲಿ ಶಿರವಿಹೀನನಾದ ಹತ್ತು ತಲೆಯ ರಾವಣನಂತೆ-ಸೆಟ್ಟರ ಬರಹ. ಈ ಮುಂಚೆ ತಿಳಿಸಲಾದ ಗುಣಗಳೆಲ್ಲ ಒಂದೊಂದು ಶಿರವಿದ್ದಂತೆ. ದೇಹವೆಂಬ ಕಲಾರಂಗದ ಮೇಲೆ ನಿಯತ್ತಾಗಿ ಕೂರಬಲ್ಲ 'ಹೃದಯ' ಭಾಗದಲ್ಲಿ ಮಾತ್ರ ಹಸೀ ಸುಳ್ಳು ಹೇಳಿ-ಅದರ ಮೇಲೆ ಕಲ್ಪಿತ ಕಲಾ ಇತಿಹಾಸದ ಕಥೆ ಕಟ್ಟುವ ಧಾಳುತನ...**

ಕೊನೆಯದಾಗಿ ನನಗೆ ಬೇಸರವಾದಾಗಲೆಲ್ಲ ಸೆಟ್ಟರ ಬರಹಗಳನ್ನು ಓದುತ್ತಿರುತ್ತೇನೆ:

- ನಾನು ಹೇಗೆ 'ಬರೆಯಬಾರದೆಂದು' ನನಗೆ ನಾನೇ ಹೇಳಿಕೊಳ್ಳಲು, ಅದರಲ್ಲಿರುವ ಅಪ್ರಬುದ್ಧ ಹಾಸ್ಯ ಮನೋರಂಜನೆಯನ್ನು ಅನುಭವಿಸಲು ಮತ್ತು ಸುಖವಾಗಿ ತೂಕಡಿಸಲು.

**ಟಿಪ್ಪಣಿ: ಓದಿ : "ನಿಯತಿಯನ್ನು ಮೀರುವ ಸಮಕಾಲೀನ ಪ್ರಯೋಗಗಳು" ಎಂಬ ಕೃಷ್ಣಸೆಟ್ಟರ ಮತ್ತೊಂದು ವಿಮರ್ಶೆ: 18/12/99, ಪ್ರಜಾವಾಣಿ ಪುಟ: 4, 'ಕರ್ನಾಟಕ ದರ್ಶನ' ವಿಭಾಗ. ...'ಆ ಬಳಿಕ ನಿಯೋ-ಎಕ್ಸ್‌ಪ್ರೆಷನಿಸ್ಟ್ ನೆಲೆಯ ಕೃತಿಗಳು ಬಂದಾಗ ಜನ ಸಾಮಾನ್ಯರಿರಲಿ, ಕಲಾವಿದರಲ್ಲಿಯೇ ಅಪಸ್ವರ ಕೇಳಿಬರತೊಡಗಿತು. ಹೀಗಾಗಿ ಅದು ಬಹುತೇಕ ಜನಸಾಮಾನ್ಯರಿಂದ ದೂರವಾಗಿ ಕಲಾವಿದರಲ್ಲೂ ಕೆಲವರಿಗಷ್ಟೇ ಆಪ್ತವಾಯಿತು. ಆ ಬಳಿಕ ಬಂದ "ಪೋಸ್ಟ್-ಮಾಡರ್ನಿಸ್ಟ್" ಕೃತಿಗಳು ಬಹುತೇಕ ಕಲಾವಿದರಿಂದಲೂ ದೂರವಾಗಿ ಕೇವಲ ಕೆಲವು ಸಹೃದಯರನ್ನಷ್ಟೇ ತಲುಪುತ್ತಿದೆ. ಈ ಪೋಸ್ಟ ಮಾಡರ್ನ್‌ನಲ್ಲಿ (?) ಇದೀಗ ಇನ್ನಷ್ಟು ಹೊಸ ಪ್ರಯೋಗಗಳು ನಡೆಯುತ್ತಿದ್ದು ಅವು ಬೆರಳೆಣಿಕೆಯಷ್ಟು ಮಂದಿ ಕಲಾವಿದರ ಮನಸ್ಸನ್ನು ತಣಿಸುತ್ತಿವೆ" ಎಂದು ಸೆಟ್ಟರು, ಈ ಇಡೀ ವಾಗ್ವಾದದ ಕೇಂದ್ರದಲ್ಲಿರುವ 'ಸ್ಥಳಪುರಾಣ'ಗಳಂತಹ ಕಲಾಕೃತಿಗಳ (ಭಾರತೀಯ) ಹರಿಕಾರನೆನ್ನಲಾದ ವಿವಾನ್ ಸುಂದರಮ್‌ರ ಕಲಾಕೃತಿಗಳ ವಿಮರ್ಶೆಯಲ್ಲಿ ಹೇಳಿದ್ದಾರೆ.

ಸೆಟ್ಟರು ಹೇಳುವ 'ಪೋಸ್ಟ್ ಮಾಡರ್ನಿಸ್ಟ್ ಕಲಾಕೃತಿ' ಎಂಬುದು ತಾತ್ವಿಕವಾಗಿ ಅಸಾಧ್ಯ.

ಏಕೆಂದರೆ ಮಾಡರ್ನಿಸ್ಟ್ ಇಸಂಗಳಂತಲ್ಲದೆ (ಕ್ಯೂಬಿಸಂ, ದಾದಾಯಿಸಂ ಇತ್ಯಾದಿಯಂತೆ) ಈ ಪೋಸ್ಟ್ ಮಾಡರ್ನಿಸಂ (ಪೋ.ಮಾ) ಎಂಬುದು 'ಇಸಂ'ಗಳ ಕಾಲದ ನಂತರದ ಒಂದು ಸಮಕಾಲೀನ, ಸಂಕೀರ್ಣತೆಯ 'ಸ್ಥಿತಿ'ಯಷ್ಟೇ. ಮತ್ತು ಪೋ.ಮಾ ಬಗ್ಗೆ ತಮ್ಮದೇ ಆದ ವೈಯಕ್ತಿಕ ಅರ್ಥೈಸುವಿಕೆ ಇರಬಹುದಾದರೂ ಅದನ್ನು ಹೀಗೆಲ್ಲ ತಿರುಚಲಾಗದು/ತಿರುಚಬಾರದು. ಉದಾಹರಣೆಗೆ: ಹರಪ್ಪ ಮೊಹೆಂಜೊದಾರೊ ಸಂಸ್ಕೃತಿಯ ಅವಸಾನದ ನಂತರ ಆರ್ಯರು ಭಾರತದಲ್ಲಿ ಆಗಿಹೋದರು ಎಂಬುದು ಒಂದು ಸತ್ಯ. ಈ ಐತಿಹಾಸಿಕ ತಾರೀಕನ್ನು ಹಿಂದು ಮುಂದು ಮಾಡಲಾಗದು. ಬೇಕಾದರೆ, ಆರ್ಯರು ಇಲ್ಲಿಯೇ ಇದ್ದವರೋ ಅಥವ ಮೂಲತಃ ಹೊರಗಿನ ವಿಶ್ವದ ಇತರೆ ಭಾಗಗಳಿಂದ ಬಂದವರೋ ಎಂಬ 'ಸಬ್ಜೆಕ್ಟೀವ್' ನಿಲುವು, ಅದೂ ಸೋದಾಹರಣೆ ಸಮೇತವಾಗಿದ್ದರಷ್ಟೇ - ಊರ್ಜಿತವಾದುದಾಗುತ್ತದೆ.

ಇಸಂಗಳೂ ಹಾಗೆಯೇ. (ಸೆಟ್ಟರು ದಾಸರಾಗಬಯಸದ 'ಪಾಶ್ಚಾತ್ಯರಲ್ಲಿ') ಇಂಪ್ರೆಷಿನಿಸಂನಿಂದ ಹಿಡಿದು

ಮಿನಿಮಲಿಸಂವರೆಗೂ ಆಯಾ ಶೈಲಿಗಳಲ್ಲಿ ಆಗಿಹೋದ ಕೃತಿಗಳು, ಅವುಗಳು ಸೃಷ್ಟಿಗೊಂಡ ಆಯಾ ತಾರೀಕುಗಳಲ್ಲಿ 'ಹಾಗೆಂದೇನೂ' ಕರೆಯಲ್ಪಡುತ್ತಿರಲಿಲ್ಲ. ಸರಳೀಕರಿಸಿ ಹೇಳುವುದಾದರೆ, ಆಯಾ ಇಸಂಗಳಿಗೆ ಆಯಾ ಹೆಸರುಗಳು ಬಂದುದು, ಅವುಗಳ ಸಹಜ ಸಾವಿನ ನಂತರ. (ಇಂದಿನ ಮಾರ್ಕ್ಸಿಸ್ಟ್ ಮ್ಯಾನಿಫೆಸ್ಟೋ ಬರಹಗಳ ಪಿತೃವಾದ 'ದಾದಾಯಿಸಂ' ಒಂದನ್ನು ಹೊರತುಪಡಿಸಿ) 'ಪೋಸ್ಟು ಮಾಡರ್ನಿಸಂ' ಎಂದರೆ, ಸರಳವಾಗಿ *"ಪಶ್ಚಿಮದ ಇಸಂಗಳ ಸಾವಿನ ನಂತರದ ಕಲೆಯ ಭೌಗೋಳಿಕ ಸ್ಥಿತಿಸೂಚಿ"* ಎಂದರ್ಥ. 'ನೋಡಲು' ಯಾವ ಪಾಶ್ಚಾತ್ಯ ಇಸಂಗಳ ಶೈಲಿಗೂ ಹೋಲಿಕೆಯಾಗದ ಕೃತಿಗಳನ್ನೆಲ್ಲ ತೆಗೆದು ಪೋಸ್ಟ್ ಮಾಡರ್ನಿಸಂ ಎಂಬ ಕಲ್ಪಿತ ಕಸದ ಬುಟ್ಟಿಯೊಳಗೆ ಒಗೆದುಬಿಟ್ಟಂತಾಗುತ್ತದೆ ಸೆಟ್ಟರ ಅರ್ಥೈಸುವಿಕೆ.

ಗಂಭೀರವಾಗಿ ಹೇಳುವುದಾದರೆ, ಪೋ.ಮಾ. ಎಂಬ 'ಸ್ಥಿತಿಯಲ್ಲಿ/ ಸಂದರ್ಭದಲ್ಲಿ' ಆಧುನಿಕ ಪೂರ್ವ, ಆಧುನಿಕ, ಲೇಟ್-ಮಾಡರ್ನಿಸ್ಟ್, ಕಿಚ್ (kitsch-'ಮುಖ್ಯವಾಹಿನಿ ಕಲೆ' ಎಂಬ ಆಧುನಿಕ-ವಿಮರ್ಶಾಕ್ರಮದ ಕಲ್ಪನೆಯ ಹೊರಗುಳಿದಿರುವ ಇಲ್ಲಸ್ಟ್ರೇಷನ್, ಕಮರ್ಷಿಯಲ್ ಸಿನೆಮ-ಅಷ್ಟೇಕೆ ಬೆಂಕಿಯ ಪೆಟ್ಟಿಗೆಯ ಮೇಲಿನ ಚಿತ್ರವನ್ನೂ ಒಳಗೊಂಡಂತಹ) - ಇವೆಲ್ಲವೂ ತಮ್ಮ ತಮ್ಮ 'ಆಧುನಿಕ-ವಿಮರ್ಶೆ'ಯ ಭ್ರಮೆಯ ಹೊರಗುಳಿದು, ಅದೇ ಕಾರಣದಿಂದುಂಟಾದ ಪರಸ್ಪರ ಅಸಮತೆಯನ್ನು ತೊಡೆದುಹಾಕಿ, 'ಭುಜಕ್ಕೆ ಭುಜ' ಕೊಟ್ಟು ಸಮನಾವಾಗಿ ನಿಲ್ಲುತ್ತವೆ.

ಪ್ರಾಯಶಃ ಕೇವಲ ಜೀವಂತ ಕಲಾವಿದ/ಕಲೆಯ ಬಗ್ಗೆಯೇ, ಗ್ಯಾಲರಿಯ ಕಲಾಕೃತಿಗಳ ಬಗ್ಗೆಯೇ ಹೆಚ್ಚಾಗಿ ಬರೆದು ಅಭ್ಯಾಸವಾಗಿ ಹೋಗಿರುವುದರಿಂದಲೇ ಸೆಟ್ಟರಿಗೆ, ಆಧುನಿಕ- ಕಲಾವಿಮರ್ಶಾ ತಂತ್ರವನ್ನು ಮೀರಿ ಬೆಳೆದ ಕಲಾಸಾಹಿತ್ಯದ ಅರಿವು ಇಲ್ಲ. ಮತ್ತೂ ಸರಳೀಕರಿಸಿ ಹೇಳುವುದಾದರೆ, ಇಂದಿನ ಕಲಾಸಾಹಿತ್ಯ ಸಂದರ್ಭದಲ್ಲಿ ಮಿಕೆಲೆಂಜೆಲೋವಿನ ಕೃತಿಗಳೂ ಸಹ ಒಂದರ್ಥದಲ್ಲಿ ಪೋಸ್ಟ್ ಮಾಡರ್ನ್ ಕೃತಿಗಳಾಗಬಲ್ಲವು. ಅಂತಿಮವಾಗಿ ಪೋಸ್ಟ್‌ಮಾಡರ್ನಿಸಂನ ಸಂದರ್ಭದೊಳಗೆ (ಏಳೆಂಟು ಶತಮಾನದ ಹಿಂದಿನ ರೆನಾಯಸಾನ್ಸ್ ನಂತರದಲ್ಲಿ ಮೂಡಿಬಂದ 'ಮ್ಯಾನರಿಸಂ' ಎಂಬ ಸಂಕ್ಷಿಪ್ತ ಸಂದರ್ಭವು ಪೋ.ಮಾ.ಅನ್ನು ಅತಿಯಾಗಿ ಹೋಲುತ್ತದೆ). ನಾವು ಬದುಕುತ್ತಿರುವುದರಿಂದ 'ಇಸಂ'ಗಳ ಬಗ್ಗೆ ನಮಗೆ ದೊರಕುವಂತಹ 'ಚಿತ್ರ'ವು ಅದೇ 'ಪೋ.ಮಾ.' ಬಗ್ಗೆ ದೊರಕದು.

ಪೋಸ್ಟ್ ಮಾಡರ್ನಿಟಿ ಎಂಬ ತಪ್ಪಲೆಯೊಳಗಿರುವ ಕಲಾಸಾಹಿತಿ ಎಂಬ ಇರುವೆಗೆ ತಪ್ಪಲೆಯ ಒಂದು ಪಕ್ಷಿನೋಟ ಹೇಗೆ ಸಾಧ್ಯವಾದೀತು?

'ಪೋಸ್ಟ್ ಮಾಡನಿರ್ಸಂ ಶೈಲಿ' ಎಂದು ಕೃಷ್ಣಸೆಟ್ಟರು ಹೇಳಿದಾಗಲೆಲ್ಲ "ನಾನೊಂದು ಆಶುಕವಿತೆ ಬರೆದಿದ್ದೇನೆ" ಎಂದು ಮುಗ್ಧವಾಗಿ ಹೇಳಿದಂತಾಗುತ್ತದೆ. 'ಪೋ.ಮಾ. ಕೃತಿಗಳು' ಎಂಬುದೇ ಅಸಾಧ್ಯವಾಗುವಾಗ "ಅಂತಹ ಕೃತಿಗಳು ಬಹುತೇಕ ಕಲಾವಿದರಿಂದಲೂ ದೂರವಾಗಿ ಕೇವಲ ಕೆಲವು ಸಹೃದಯರನ್ನಷ್ಟೇ ತಲುಪುತ್ತಿದೆ" ಎಂದು ಸೆಟ್ಟರು ಡಾನ್‌ಕ್ವಿಗ್ಸೊಟನಂತೆ ಪದೇಪದೇ ಹೇಳುವುದು, ಅಮಾವಾಸ್ಯೆಯ ರಾತ್ರಿಯ ಕಗ್ಗತ್ತಲಿನಲ್ಲಿ ಕುರುಡನೊಬ್ಬ ಕಪ್ಪು ಬೆಕ್ಕೊಂದನ್ನು ಕಂಡಷ್ಟೇ ವಿನೋದಮಯವಾಗಿ ಕಾಣುತ್ತದೆ.

●

ಕನಸಿಗೊಂದು ಕಣ್ಣು

ಅಲೆಮಾರಿಯ ಮಾತುಗಳು - 5

ಹೀಗೆ ಒಂದಷ್ಟು ಸಂಬಂಧವಿಲ್ಲದ ಸಾಲುಗಳು

ಶೂದ್ರಶ್ರೀನಿವಾಸ್

''ಎಷ್ಟು ಕಾಲದ ಮೇಲೆ ಇಷ್ಟೊಂದು ಅಭಿಮಾನ?
ಅರ್ಥವಾಗದು ನಿನ್ನ ರೀತಿ.
ಅಂದು ಬೇಡದ ಕಂದ, ಇಂದು ಆಡೆ ಆನಂದ-
ಸ್ವಾರ್ಥತೆಯೆ ನಿನ್ನ ನೀತಿ''

- ಕೆ. ಎಸ್. ನರಸಿಂಹಸ್ವಾಮಿ

ಯಾಕೋ ಗೊತ್ತಿಲ್ಲ; ಇತ್ತೀಚೆಗೆ ಯಾವುದೇ ಸಭೆ ಸಮಾರಂಭಕ್ಕೆ ಹೋಗಲು ಭಯ ವಾಗುತ್ತದೆ. ತಮ್ಮ ಅಂತರಂಗಕ್ಕೆ ಬೇಡದ ಮಾತುಗಳಿಗೆಲ್ಲ ಬಣ್ಣ ಕಟ್ಟುತ್ತಾರೆ. ಚಪ್ಪಾಳೆಗಾಗಿ ತುದಿಗಾಲಿನಲ್ಲಿ ನಿಂತವರಂತೆ ವರ್ತಿಸುತ್ತಾರೆ. ಆಗ ಇಂಥ ಮಾತುಗಳಿಂದ ನಿಜವಾಗಿಯೂ ಎಷ್ಟು ದುರ್ಬಲನಾಗುತ್ತೇನೆಂದರೆ, ಕಾರ್ಯ ಕ್ರಮದಿಂದ ಹೊರಗೆ ಬಂದಾಗ ನನ್ನ ದೇಹ ಮತ್ತು ಮನಸ್ಸಿನಲ್ಲಿ ಕಿಂಚಿತ್ತೂ ಶಕ್ತಿಯಿಲ್ಲವೇನೋ ಅನ್ನಿಸುತ್ತಿರುತ್ತದೆ. ಅದಕ್ಕಿಂತ ಮಿಗಿಲಾಗಿ ಎಲ್ಲವನ್ನು ಮರೆತು ಏನೇನೋ ಓದಬೇಕು, ನೋಡಬೇಕು, ಉತ್ತಮ ಸಂಗೀತಕ್ಕೆ ಕಿವಿಗೊಡ ಬೇಕು ಎಂಬುದನ್ನು ನನಗೆ ಗೊತ್ತಿಲ್ಲದೆಯೇ

ಕಳೆದುಕೊಳ್ಳುತ್ತೇನೆ ಎಂಬ ಗಾಬರಿ ಆವರಿಸುತ್ತದೆ. ಹಾಗೆ ನೋಡಿದರೆ ಇದನ್ನು ಬರೆಯುವ ಸಮಯದಲ್ಲಿಯೇ ದಲಿತ ಕವಿ ಸಿದ್ದಲಿಂಗಯ್ಯನನ್ನ ಕುರಿತು ಒಂದು ಲೇಖನ ಬರೆದೆ. ಆಗ ಏನೇನೋ ನೆನಪುಗಳು ಕಾಡತೊಡಗಿದುವು. ಬೂಸಾ ಚಳುವಳಿ, ಬಸವಲಿಂಗಪ್ಪನವರ ವ್ಯಕ್ತಿತ್ವ, 'ಹೊಲಮಾದಿಗರ ಹಾಡು' ಕವನ ಸಂಕಲನ ಅದಕ್ಕೆ ಬಂದ ನಾನಾ ರೀತಿಯ ಓದುಗರ ಪ್ರತಿಕ್ರಿಯೆಗಳನ್ನು ಮೆಲುಕು ಹಾಕತೊಡಗಿದ್ದೆ.

ಇದೇ ಸಮಯಕ್ಕೆ 'ಶೂದ್ರ ಮತ್ತು ಬೋಧಿವೃಕ್ಷ'ದ ಮೂಲಕ ಏನಾದರೂ ಮಾಡಬೇಕು ಎಂದು ಯೋಚಿಸಿದೆವು. 'ಏನಾದರೂ ಮಾಡುತಿರು ತಮ್ಮ' ಎಂಬ ನುಡಿಯಿಂದ ತುಂಬ ದೂರ ಹೋಗುತ್ತಿದ್ದೇವೆ ಎಂಬುದು ಆಗಾಗ ಕಾಡುತ್ತಿರುತ್ತದೆ. ಹಾಗೆ ಕಾಡಿದಾಗ ಕ್ರಿಯಾಶೀಲರಾಗ ಬೇಕೆನ್ನಿಸುತ್ತದೆ. ಹೀಗೆಲ್ಲ ಮಾತಾಡುವುದಕ್ಕೆ ಅಥವಾ ಬರೆಯುವುದಕ್ಕೆ ತಮಾಷೆಯಾಗಿ ಕಾಣುತ್ತದೆ ಅಲ್ಲವೆ? ನಿಜವಾಗಿಯೂ ಯಾರಾದರೂ ನನ್ನ ಮುಂದೆ ಈ ರೀತಿ ಹೇಳಿದಾಗ ನಕ್ಕಿರಬಹುದೇನೋ ಗೊತ್ತಿಲ್ಲ.

ಇಂಥ ತಿಕ್ಕಲುತನದ ಮಧ್ಯೆಯೇ ಬಹಳ ವರ್ಷಗಳಿಂದ ಹರಿಕಥೆ ಪರಂಪರೆಯನ್ನು ಸಣ್ಣ ಪ್ರಮಾಣದಲ್ಲಿಯಾದರೂ ಉಳಿಸಬೇಕು ಎಂದು ಯೋಚಿಸುತ್ತಿದ್ದೆ. ಯಾಕೆಂದರೆ ನನ್ನ ಬಾಲ್ಯವನ್ನು ಲವಲವಿಕೆಯಿಂದಿಟ್ಟಿದ್ದು ಆ ದಾಸರ ಕಥೆಗಳಿಂದ. ನಮ್ಮ ಊರುಗಳ ಜನರನ್ನು ಒಂದುಗೂಡಿಸುತ್ತಿದ್ದುದು ಇಂಥ ಚಟುವಟಿಕೆಗಳು. ಈ ಯೋಚನೆಯಲ್ಲಿಯೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಥೆಗಾರ ಕಾ.ತ. ಚಿಕ್ಕಣ್ಣನವರಿಂದ ಒಂದಷ್ಟು ಹರಿಕಥೆ ದಾಸರ ವಿಳಾಸ ಪಡೆದೆ. ಒಂದು ಕಾಲದಲ್ಲಿ ನನಗೆ ಪ್ರಿಯರಾಗಿದ್ದ ಶಿವಲಿಂಗಸ್ವಾಮಿ ಹಿರೇಮಠ, ಮಹದೇವಶಾಸ್ತ್ರಿ ಗುರುರಾಜಲು ನಾಯ್ಡು ಮತ್ತು ಮಾಲೂರು ಸೊಣ್ಣಪ್ಪನವರನ್ನು ನೆನಪು ಮಾಡಿಕೊಂಡೆ. ಕೊನೆಗೆ ಗುರುರಾಜುಲು ನಾಯ್ಡು ಅವರ ಮಗಳು ಶೋಭಾನಾಯ್ಡು ಅವರ ವಿಳಾಸ ಪಡೆದು ಗೆಳೆಯನ ಜೊತೆ ಹೋದೆ. ಅಭಿಮಾನದಿಂದ ಬರಮಾಡಿಕೊಂಡರು. "ಬನ್ನಿ ಅಮ್ಮನನ್ನು ಪರಿಚಯ ಮಾಡಿಸುವೆ" ಎಂದು ಪಕ್ಕದ ರಸ್ತೆಯ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ತಂಗಿ ಶೀಲಾ ನಾಯ್ಡು ಅವರ ಜೊತೆಯಲ್ಲಿದ್ದರು. ಹೋಗಿ ನಮಸ್ಕರಿಸಿದೆ. ಹೆಸರು ಕೇಳಿದೆ. "ಪ್ರೇಮಾನಾಯ್ಡು ಲಕ್ಷ್ಮೀದೇವಿಯ ಮಗಳು" ಎಂದಾಗ ರೋಮಾಂಚಿತನಾದೆ. ಒಂದು ಕ್ಷಣ 'ನಟರತ್ನ' ಸುಬ್ಬಯ್ಯನಾಯ್ಡು ನೆನಪಿಗೆ ಬಂದರು. ಇತ್ತೀಚಿಗೆ ತಾನೇ ಬಂಗಾರಮ್ಮ ತಮ್ಮ ತಂದೆ ಬಗ್ಗೆ ಬರೆದ ನಟರತ್ನ ಪುಸ್ತಕ ಓದಿದ್ದೆ. ಏನೇನೋ ಘಟನೆಗಳು ಮನಸ್ಸಿನ ತುಂಬ ಆವರಿಸಿದವು. "ಒಂದು ಹಾಡು ಹೇಳಿ" ಎಂದೆ. "ಅಯ್ಯೋ ಗಂಟಲು ಸರಿಯಿಲ್ಲವಲ್ಲ" ಎಂದು ಒಂದು ಕ್ಷಣ ಗಂಟಲು ಸರಿಮಾಡಿಕೊಂಡರು. ಮಧ್ಯಾಹ್ನದ ಅಡಿಗೆಗೆ ಉದ್ದನೆಯ ಹಸಿರು ಬಣ್ಣದ ಬದನೆಕಾಯಿ ಕೊಯ್ಯುತ್ತಿದ್ದರು. ಅದನ್ನು ಕೊಯ್ಯುತ್ತಲೇ ಹಾಡಿದರು. ಭೇಷ್ ಎನ್ನುವ ರೀತಿಯಲ್ಲಿ ಹಾಡಿದರು.

'ನಟರತ್ನ' ಕೃತಿಯಲ್ಲಿರುವ ಸುಬ್ಬಯ್ಯನಾಯ್ಡು ಅವರ ಚಿತ್ರದ ಜೊತೆಗೆ ಲಕ್ಷ್ಮೀದೇವಿಯವರ ಮುದ್ದು ಮುದ್ದಾದ ಭಾವಚಿತ್ರ ಸುಳಿದು ಮರೆಯಾಯಿತು.

ಹೊರಡುವ ಮುನ್ನ ಕಾಫಿ ಕುಡಿದೆವು. ಗೋಡೆಯ ಮೇಲೆ ಗುರುರಾಜುಲು ನಾಯ್ಡು ಅವರ ಮನಮೋಹಕ ಭಾವಚಿತ್ರವಿತ್ತು. ಸೆಂಟ್ರಲ್ ಕಾಲೇಜಿನಲ್ಲಿರುವಾಗ ಎಷ್ಟೊಂದು ಬಾರಿ ಅವರ ಹರಿಕಥೆಯನ್ನು ಕೇಳಿದ್ದೇನೆ. ಅದೆಲ್ಲ ನೆನಪಿಗೆ ಬಂತು. ಸ್ವಾಮಿ ವಿವೇಕಾನಂದರ ರೀತಿಯಲ್ಲಿ ಡ್ರೆಸ್ ಮಾಡಿಕೊಂಡು ನಗುಮುಖದಿಂದ ಹಾಡುತ್ತ ಕಥೆ ಹೇಳುತ್ತಿದ್ದರು.

ಮತ್ತೆ ಬರುವೆನೆಂದು ಹೊರಟೆ. ಆಕಸ್ಮಿಕವಾಗಿ ತಲೆಯೆತ್ತಿ ನೋಡಿದೆ. ಅಪರೂಪದ ದೇವರ ಚಿತ್ರ. "ಕದಿಯೋಣ ಅನ್ನಿಸುತ್ತಿದೆ" ಎಂದು ಹೊರಗೆ ಬಂದೆ. "ಧಾರಾಳವಾಗಿ ಕದಿಯಿರಿ" ಎಂದರು. ನಕ್ಕು ಹೊರಗೆ ಬಂದೆವು. ಇದೇ ಮೂಡಿನಲ್ಲಿ ಗೆಳೆಯ ಡಿ.ಆರ್.ನ ಮನೆಗೆ ಹೋದೆ. ನಾಗರಾಜನ ಹೆಂಡತಿ ಗಿರಿಜಾರವರಿಗೆ ಸಾವಿರ ಬಾರಿ ಬರುತ್ತೇನೆಂದು ಹೇಳಿ ಹೋಗಿರಲಿಲ್ಲ. ಒಂದು ದೃಷ್ಟಿಯಿಂದ ಅವನ ಮನೆಗೆ ಹೋದಾಗ ಅವನ ಭಾವಚಿತ್ರವನ್ನು ಎದುರಿಸುವುದೇ ಕಷ್ಟವಾಗಿದೆ. ಒಂದೆರಡು ಬಾರಿ ನಾನು ಮತ್ತು ಅಗ್ರಹಾರ "ದಯವಿಟ್ಟು ನಿಮ್ಮ ಮನೆಗೆ ಬಂದಾಗ ಅವನ ಭಾವಚಿತ್ರವನ್ನು ಎಲ್ಲಿಯಾದರೂ ಮುಚ್ಚಿಡಿ" ಎಂದು ಹೇಳಿದ್ದೆವು.

ನಾಗರಾಜನ ಮನೆಬಿಟ್ಟು ನಾನು ಮತ್ತು ಗೆಳೆಯ ಮಾಧವರಾವ್ ಹೋಟೆಲ್ಲೊಂದರಲ್ಲಿ ಹೋಗಿ ಕೂತೆವು. ತಣ್ಣನೆಯ ಬಿಯರ್ ಕುಡಿಯುತ್ತ ಮಾತು ಮತ್ತು ಮೌನದ ಮಧ್ಯೆ ಏನೇನೋ ಮಾತಾಡಿ ಹೊರಗೆ ಬಂದೆವು. ಹಾಗೆ ನೋಡಿದರೆ ನಾವಿಬ್ಬರೇ ಹೀಗೆ ಕೂತಿದ್ದು ಕಾಲು ಶತಮಾನಕ್ಕೂ ಜಾಸ್ತಿಯಾಗಿತ್ತು. ಯಾಕೆಂದರೆ ಯಾವಾಗಲೂ ಕೋದಂಡರಾಮಶೆಟ್ಟಿ ಮತ್ತು ಸುಬ್ಬರಾವ್ ಮಾಧವರಾವ್‌ನನ್ನ ಅಪ್ಪಿಕೊಂಡೇ ತಿರುಗುತ್ತಿರುತ್ತಾರೆ. ಅಪರೂಪಕ್ಕೆ ಇವರ ಬೆಟಾಲಿಯನ್ ಪ್ರೊ. ಶಾಮಭಟ್ಟರ ಜೊತೆ ನಮ್ಮ ಮನೆಗೆ ಬಂದಾಗ ಇಸ್ಪೀಟಿನ ಮಧ್ಯೆ ಲಂಕೇಶ್, ಅಡಿಗರು, ಗಿರೀಶ್ ಕಾರ್ನಾಡರು, ಅನಂತಮೂರ್ತಿ ಮತ್ತು ಶಿವರುದ್ರಪ್ಪನವರು ಬಂದು ಹೋಗುತ್ತಾರೆ. ಆಗಾಗ ಸಾಹಿತ್ಯ ಮತ್ತು ಸಂಸ್ಕೃತಿಯ ಮಧ್ಯೆ ಪೋಲಿ ಪೋಲಿ ಮಾತುಗಳು ಬಂದು ಹೋಗುತ್ತದೆ. ಅದೂ ಬೋರ್ ಅನ್ನಿಸಿದಾಗ ಬಿಸ್ಮಿಲ್ಲಾಖಾನ್, ಮನ್ಸೂರ್ ಅಥವಾ ಭೀಮಸೇನ ಜೋಶಿಯವರ ಕ್ಯಾಸೆಟ್ಹಾಕಿ ಅನ್ನಾರೆ. ಕೋದಂಡರಾಮಶೆಟ್ಟರು ಮತ್ತು ಮಾಧವರಾವ್‌ರವರು ಲಂಕೇಶ್‌ರವರ ಹೆಸರು ಬಂದಾಕ್ಷಣ ರೋಮಾಂಚಿತರಾಗುತ್ತಾರೆ. ಅವರ ಮುಂದೆ ಮಿಕ್ಕವರು ಜುಜುಬಿ ಎಂದು ಉಲ್ಲಾಸದಿಂದ ಇಸ್ಪೀಟಿನಲ್ಲಿ ಆದ ಮೈನಸ್ ಮತ್ತು ಪ್ಲಸ್ ಪಾಯಿಂಟುಗಳನ್ನು ಮರೆತು ಹೊರಗೆ ನಡೆದಿರುತ್ತಾರೆ. ಅವರು ಹೋದ ಮೇಲೆ ಒಂದು ಕ್ಷಣ ಕಾಳಿಂಗರಾವ್ ಹಾಡಿರುವ ಕ್ಯಾಸೆಟ್ ಹಾಕುತ್ತೇನೆ. "ನಗೆಯು ಬರುತಿದೆ ಎನಗೆ ಜಗದೊಳಿರುವ ಮನುಜರ ಕಂಡು" ಎಂಬ ನುಡಿಗೆ ಯೋಚನೆಗಳು ಸುಳಿದಾಡಿ ಮರೆಯಾಗುತ್ತವೆ.

ಕಳೆದ ಒಂದು ವಾರದಿಂದ ಒರಿಸ್ಸಾದ ಚಂಡಮಾರುತದ ಆರ್ಭಟಕ್ಕೆ ಭೀತನಾಗಿದ್ದೇನೆ. ಸಾವಿರಾರು ಹೆಣಗಳು, ಎಲ್ಲೆಂದರಲ್ಲಿ ಸತ್ತುಬಿದ್ದಿರುವ ದನಗಳು ಇವುಗಳನ್ನೆಲ್ಲ ನೋಡುತ್ತಿದ್ದಾಗ ಬಾಲ್ಯ ಕಾಲ ನೆನಪಾಗುತ್ತದೆ. ಮಳೆಗಾಲದಲ್ಲಿ ನಮ್ಮೂರ ಕೆರೆ ತುಂಬಿ ಗದ್ದೆ ಬಯಲು ಮತ್ತು ವೀಳೆದೆಲೆ ತೋಟಕ್ಕೆ ನೀರು ನುಗ್ಗಿದಾಗ ಕಣ್ಣೀರು ಸುರಿಸಿದ್ದೇನೆ. "ದೇವರೆ ಕೋಡಿ ಹರಿಯುವುದು ಜಾಗ್ರತೆ ನಿಲ್ಲಲಿ" ಎಂದು ಪ್ರಾರ್ಥಿಸಿದ್ದೇನೆ. ಯಾಕೆಂದರೆ ವೀಳೆದೆಲೆ ತೋಟ

ನಮ್ಮ ದೊಡ್ಡ ಕುಟುಂಬವನ್ನು ಸಾಕುತ್ತಿತ್ತು. ಈಗ ಬಹುದೂರ ಬಂದಿದ್ದೇನೆ. ಊರು ನೆನಪಾಗಿ ಉಳಿದಿದೆ. ಜಗತ್ತಿನ ತಲ್ಲಣಗಳು ನನ್ನದಾಗಿವೆ. ಯಾಕೆಂದರೆ ಅವುಗಳನ್ನೆಲ್ಲ ಮರೆಯಲು ಸಾಧ್ಯವಾಗದಷ್ಟು ಚರ್ಚಿಸುತ್ತಿರುತ್ತೇವೆ. ಪ್ರಕೃತಿಯ ವಿಕೋಪ ಆದ ಆದರ ಮುಂದೆ ಬಂದು ನಿಲ್ಲುವ ಹಸಿವು, ನೋವು ಮತ್ತು ವ್ಯಥೆಯ ಮಧ್ಯೆ ಗೊತ್ತಿಲ್ಲದ ಸಮಾಧಾನದ ಎಳೆಗಾಗಿ ಹುಡುಕಾಡುತ್ತಿರುತ್ತೇನೆ.

ಈ ಎಲ್ಲದರ ಮಧ್ಯೆ ನನ್ನ ಪ್ರೀತಿಯ ವ್ಯಕ್ತಿಯಾದ ಕಥೆಗಾರ ಕುಂ. ವೀರಭದ್ರಪ್ಪ ಬರೆದ ಚಾಪ್ಲಿನ್ ಕೃತಿಯನ್ನು ಓದಿದೆ. ಸುಮಾರು ಮುನ್ನೂರೈವತ್ತು ಪುಟಗಳ ಈ ಕೃತಿಯನ್ನು ಒಂದೇ ಓದಿಗೆ ಮುಗಿಸಿದಾಗ ಕುಂ. ವೀ. ಎಷ್ಟು ಚೆನ್ನಾಗಿ ಬರೆದಿದ್ದಾರೆ ಎಂದು ಷರಾ ಎಳೆಯುತ್ತಲೇ ಅಯ್ಯೋ ನಾನು ಬರೆಯಬೇಕೆಂದು ಕೊಂಡಿದ್ದೆನಲ್ಲ ಎಂದು ಪುಟ್ಟದಾಗಿ ಹೊಟ್ಟೆಕಿಚ್ಚು ಇಣುಕಿ ಮರೆಯಾಗಿದೆ. ಅದೇನೆ ಇರಲಿ ಚಾಪ್ಲಿನ್ ವ್ಯಕ್ತಿತ್ವ ಬಯಸುವ ಕಾವ್ಯಮಯ ಗದ್ಯ ಒಟ್ಟುಕೃತಿಗೆ ಅಂದವನ್ನು ತಂದುಕೊಟ್ಟಿದೆ. ಬಿಡುಗಡೆಗೆ ಮುನ್ನವೇ ಇದನ್ನು ಓದಲು ಕೊಟ್ಟ ಕಾಮದೇನು ಪ್ರಕಾಶನದ ಶಾಮಸುಂದರರಾವ್ ಮನಸ್ಸಿನಲ್ಲಿಯೇ ಕೃತಜ್ಞತೆಯನ್ನು ಸಲ್ಲಿಸಿದೆ. ಇದನ್ನು ಓದುವ ಮುನ್ನ ಸತ್ಯಜಿತ್‌ರಾಯ್‌ರವರು 'ಗೋಲ್ಡ್ ರಷ್' ಚಿತ್ರವನ್ನು ಕುರಿತು ಬರೆದ ಲೇಖನವನ್ನು ಶೂದ್ರಕ್ಕೆ ಏಕೆ ಅನುವಾದಿಸಿ ಪ್ರಕಟಿಸಬಾರದು ಎಂದು ಯೋಚಿಸುತ್ತಿದ್ದೆ.

ಕಳೆದ ಒಂದು ವರ್ಷದಿಂದ ಗಾಂಧೀಜಿಯವರು ತಮ್ಮ ಸಮಕಾಲೀನರನ್ನು ಕುರಿತು ಬರೆದ ಲೇಖನಗಳನ್ನು ಓದುತ್ತಿದ್ದೇನೆ. ಹೀಗೆ ಓದುವಾಗ ಲಿಯೋ ಟಾಲ್‌ಸ್ಟಾಯ್ ಕುರಿತು ಬರೆದ ಲೇಖನ ನನ್ನನ್ನು ರೋಮಾಂಚನಗೊಳಿಸಿದೆ. ಮೊನ್ನೆ ಯಾವುದೋ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನೆಗೆ ಹೋಗಿ 'ಈಗ ನಮ್ಮನ್ನು ರೋಮಾಂಚನಗೊಳಿಸುವ ಒಬ್ಬ ಸಮಕಾಲೀನ ನಾಯಕನಿಲ್ಲ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಎಷ್ಟೊಂದು ನಾಯಕರಿದ್ದರು' ಎಂದು ಹೇಳಿದ್ದೆ. ಆದರೆ ಗಾಂಧೀಜಿಯವರ ಇಂಥ ಲೇಖನಗಳನ್ನು ಓದುವಾಗ ನನ್ನ ಅಂತರಂಗದ ಸಮಕಾಲೀನ ನಾಯಕ ಇಲ್ಲಿದ್ದಾನೆ ಎಂದು ಖುಷಿ ಪಟ್ಟಿದ್ದೇನೆ. ಆ ಖುಷಿಯ ಕಾರಣಕ್ಕಾಗಿಯೇ ಈ ಬಾರಿ ಶೂದ್ರದಲ್ಲಿ ಆ ಲೇಖನವನ್ನು ಪ್ರಕಟಿಸುತ್ತಿರುವೆ.

ಇಂಥ ಹುಚ್ಚು ಮನಸ್ಸಿನಲ್ಲಿರುವಾಗಲೇ ಗೆಳೆಯ ಗೌರಿಸುಂದರ್‌ರವರ ದೂರವಾಣಿ ಕರೆಬಂತು. "ಶೂದ್ರ, ನಾಳೆ ಸಂಜೆ ಏನೇ ತೊಂದರೆಯಿದ್ದರೂ ಮನೆಗೆ ಬರಬೇಕು. ಒಂದು ಪುಟ್ಟ ಪಾರ್ಟಿ ಇದೆ. ಸುಮಾರು ನೂರು ಮಂದಿಯನ್ನು ಕರೆದಿದ್ದೇನೆ. ಬಹಳ ದಿವಸವಾಯಿತು ನಿಮ್ಮೊಡನೆ ಕೂತು" ಎಂದರು.

ಮಾರನೆಯದಿನ ಸಂಜೆ ನನ್ನ ಮಗನ ಜೊತೆ ಹೊರಟೆ. ದೀಪಾವಳಿಯ ಸಡಗರ, ರಸ್ತೆಯಲ್ಲಿ ವಾಹನಗಳು ಹೋಗುವುದನ್ನು ಮರೆತು ಪಟಾಕಿ ಸುಡುತ್ತಿದ್ದರು. "ಇಂಥ ಸಮಯದಲ್ಲಿ ಗಾಡಿ ಓಡಿಸುವುದು ಎಷ್ಟು ಕಷ್ಟ ಅಲ್ಲವಾ?" ಎಂದ ನನ್ನ ಮಗ. ಪಟಾಕಿಯ ಗದ್ದಲವನ್ನು ಬಿಟ್ಟರೆ ಮಿಕ್ಕೆಲ್ಲ ರೀತಿಯಲ್ಲಿಯೂ ಒಂದು ದೃಷ್ಟಿಯಿಂದ ಸೌಂದರ್ಯಪೂರ್ಣ ಹಬ್ಬ.

ಗೌರೀಸುಂದರ್ ಅವರ ಮನೆ ತಲುಪಿದಾಗ ಸ್ವಲ್ಪ ಹೆಚ್ಚು ಕಮ್ಮಿ ಮೊದಲಿನ ಅತಿಥಿಗಳು ನಾವೇ ಆಗಿದ್ದೆವು ನಂತರ ಈ ಶತಮಾನದ ಗ್ರೇಟ್ 'ಯಂಗ್ ಮ್ಯಾನ್' ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಬಂದರು. ಅವರೊಡನೆ ಮಾತಾಡುತ್ತಿರುವಾಗ ಮೈಸೂರಿನ ಯಾವುದೋ ಒಂದು ಸಂಸ್ಥೆಯ ಹೆಸರು ಪ್ರಸ್ತಾಪಕ್ಕೆ ಬಂತು. ಆಗ ನಿಟ್ಟೂರು ಶ್ರೀನಿವಾಸರಾವ್‌ರವರು "ನಾನು ಅದರ ಓಲ್ಡೆಸ್ಟ್ ಸದಸ್ಯ" ಎಂದರು. ನಾನು ನಗುತ್ತ "ಹಾಗೆಯೇ ಯೆಂಗೆಸ್ಟ್" ಎಂದೆ. ಅದಕ್ಕೆ ಚಿಕ್ಕ ಮಗುವಿನಂತೆ ಮುಖದ ತುಂಬ ನಗುವನ್ನು ತುಂಬಿಕೊಂಡರು. ಅದೇ ಸಮಯಕ್ಕೆ ಗೌರಿಸುಂದರ್ ಮಗಳು ನಿಟ್ಟೂರುರವರಿಗೆ ಪೆಪ್ಸಿಯನ್ನು ಒಂದು ಬಟ್ಟಲಿನಲ್ಲಿ ತಂದುಕೊಟ್ಟಳು. "ನಮಗೆಲ್ಲಿ?" ಎಂದು ಕೇಳಿದ್ದಕ್ಕೆ ಆ ಹುಡುಗಿ ತುಂಟತನದಿಂದ "ನೀವು ಇದೆಲ್ಲ ಕುಡಿಯಬಾರದು" ಎಂದಳು. ನಕ್ಕು ಸುಮ್ಮನಾದೆ. ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದ ಎ.ಎಸ್. ಮೂರ್ತಿ, ನಾಣಿ, ಲಕ್ಷ್ಮೀನಾರಾಯಣ ಭಟ್ಟ, ಲೋಕೇಶ್ ಹಸನ್ಮುಖಿಗಳಾಗಿ ಒಬ್ಬೊಬ್ಬರೇ ಬರತೊಡಗಿದ್ದರು. ಎಲ್ಲರ ಕೈಯಲ್ಲಿಯೂ ಬಿಯರ್ ಮತ್ತು ವಿಸ್ಕಿ. ಬಹಳ ದಿವಸಗಳ ನಂತರ ಪ್ರೊ. ಜಿ.ಎಸ್. ಶಿವರುದ್ರಪ್ಪನವರ ಜೊತೆ ಒಂದಷ್ಟು ಸಮಯ ಕೂತಿದ್ದೆ. ಹೆಚ್.ಎಸ್. ವೆಂಕಟೇಶಮೂರ್ತಿಯವರು ಸ್ವಲ್ಪ ಸಮಯವಿದ್ದು ಮನೆಗೆ ಹೋಗಿದ್ದರು. ಮತ್ತೊಂದು ಕಡೆ ಮಹಿಳಾ ಗೋಷ್ಠಿಯಲ್ಲಿ ಎಚ್.ಎಸ್. ಪಾರ್ವತಿಯವರು ಮತ್ತು ಭಾರ್ಗವಿ ನಾರಾಯಣ್‌ರವರು ಮಹಿಳಾ ಹಕ್ಕುಗಳನ್ನು ಕುರಿತಂತೆ ಗುಟ್ಟಾಗಿ ಏನೇನೋ ಹೇಳುತ್ತಿದ್ದರು. ಅವರನ್ನು ಕೇಳಲು ಸಮಯ ಸಿಗಲಿಲ್ಲ. ಆದರೆ ಮತ್ತೊಂದು ಮೂಲೆಯಲ್ಲಿ ಶಿವಮೊಗ್ಗದ ಸುಬ್ಬಣ್ಣ ದತ್ತಣ್ಣ ಮತ್ತು ಸೋಮಶೇಖರರಾವ್ ಮುಂತಾದವರು ಬದುಕಿನ ರಂಜಕವಾದ ದಿನಗಳನ್ನು ಕುರಿತಂತೆ ಬಿಯರ್‌ನ ನೊರೆಯ ಮಧ್ಯೆ ಓಂಕಾರ ಸ್ವರೂಪಿಗಳಾಗಿ ಕಾಣುತ್ತಿದ್ದರು. ಪಾರ್ಟಿ ಮುಗಿಯುವ ಮುನ್ನ ಅಲ್ಲಿಂದ ಮೆಲ್ಲಗೆ ಕಳಚಿಕೊಂಡಿದ್ದೆ.

ಇತ್ತೀಚೆಗೆ ನನ್ನ ತಲೆ ತುಂಬ ಕ್ರಿಕೆಟ್, ಹೈದರಾಬಾದಿನ ಒಂದು ದಿನದ ಆಟವನ್ನಂತೂ ಚಾರಿತ್ರಿಕವಾಗಿ ಮರೆಯಲು ನನ್ನಿಂದ ಸಾಧ್ಯವಿಲ್ಲ. ಸಚಿನ್ ಮತ್ತು ರಾಹುಲ್ ದ್ರಾವಿಡ್‌ರವರ ಮುನ್ನೂರು ಇಪ್ಪತ್ತೈದರ ಜೊತೆಯಾಟವನ್ನು ಹೇಗೆ ಮರೆಯಲು ಸಾಧ್ಯ? ಇಬ್ಬರೂ ನೂರೈವತ್ತು ರನ್ನುಗಳ ಗಡಿಯನ್ನು ದಾಟಿದಾಗ ಬ್ಯಾಟಿಂಗ್‌ನ ಮಾಟದಲ್ಲಿ ಕಾವ್ಯದ ಸಾಲುಗಳನ್ನು ಹುಡುಕುತ್ತಿದ್ದೆ. ಅತ್ಯುತ್ತಮ ಕೃತಿಯನ್ನೋ ಅಥವಾ ಸಂಗೀತವನ್ನೋ ನಮ್ಮೊಳಗೆ ಆಸ್ವಾದನೆಗೆ ಬಿಟ್ಟುಕೊಂಡಾಗ ಆಗುವ ಆನಂದದಷ್ಟೇ ಈ ಆಟವನ್ನು ಎಂಜಾಯ್ ಮಾಡಿದ್ದೆ.

ಈಗ ಯಾರ‍್ಯಾರೋ ಸಿಗ್ತಾರೆ. ಆಗ ಅವರ ಮಾತುಗಳಲ್ಲಿ ಸೋಲು ಮತ್ತು ಗೆಲುವಿನ ಮಧ್ಯಮ ರೇಖೆಗಳನ್ನು ಹುಡುಕುತ್ತೇನೆ. ಹಾಗೆ ಹುಡುಕುವಾಗ ಗೊಂಚಲು ಗೊಂಚಲಾಗಿರುವ ನೆನಪುಗಳು.

೧೫-೧೧-೯೯

ಈಗ ಕಂಡ ಪುಸ್ತಕಗಳು

ಚಾಪ್ಲಿನ್

ಲೇ : ಕುಂ. ವೀರಭದ್ರಪ್ಪ,

ಕಾಮದೇನು ಪ್ರಕಾಶನ, ನಂ. 6, ನಾಗಪ್ಪ ಸ್ಟ್ರೀಟ್, ಶೇಷಾದ್ರಿಪುರಂ, ಬೆಂಗಳೂರು - 20,

ಬೆಲೆ : 150-00 ರೂ.

'ಕಾಮದೇನು' ಅಭಿರುಚಿಯ ದೃಷ್ಟಿಯಿಂದ ಉತ್ತಮ ಕೃತಿಗಳನ್ನು ಹೊರತರುತ್ತಿದೆ. ಈಗ ಜಗತ್ತಿನ ಮಹಾನ್ ನಟ ಮತ್ತು ಚಿಂತಕ ಚಾರ್ಲಿ ಚಾಪ್ಲಿನ್‌ನ ಜೀವನ ಚರಿತ್ರೆಯನ್ನು ಕಥೆಗಾರ ಕುಂ. ವೀರಭದ್ರಪ್ಪ ಬರೆದಿದ್ದಾರೆ. ಇಡೀ ಪುಸ್ತಕದುದ್ದಕ್ಕೂ ಕ್ರಿಯಾಶೀಲ ಬರಹಗಾರನೊಬ್ಬನ ಛಾಯೆ ಕಾಣಬಹುದು. ನಾವು ಓದಬೇಕಾದ ಉತ್ತಮ ಕೃತಿ.

ನೆನಪಿನ ಸುರುಳಿ ತೆರೆದಾಗ

ಲೇ : ಎಚ್.ಎಸ್. ದೊರೆಸ್ವಾಮಿ

ಸುವಿದ್ಯಾ ಪ್ರಕಾಶನ ನಂ. 3, 1ನೇ ಅಡ್ಡರಸ್ತೆ, ರಾಮಕೃಷ್ಣ ಬಡಾವಣೆ,

ಕೆಂಪೇಗೌಡನಗರ, ಬೆಂಗಳೂರು- 19. ಬೆಲೆ : 60-00 ರೂ.

ಹೆಚ್. ಎಸ್. ದೊರೆಸ್ವಾಮಿಯವರು ಗಾಂಧಿವಾದಿಯಾಗಿ ಒಬ್ಬ ನಿಷ್ಠಾವಂತ ಹೋರಾಟಗಾರರು. ಈ ಪುಸ್ತಕದಿಂದ ನಮ್ಮ ನೆನಪಿಗೆ ಬೇಕಾಗುವಷ್ಟು ವಿಷಯ ಸಿಗುತ್ತದೆ. ಒಬ್ಬ ಹೋರಾಟಗಾರನ ದೀರ್ಘ ಬದುಕು ಏನೇನೋ ಕೊಡಬಹುದು ಎನ್ನುವುದಕ್ಕೆ ಇದು ಸಾಕ್ಷಿ ಪ್ರಾಯವಾಗಿದೆ. ಎಚ್.ಎಸ್. ದೊರೆಸ್ವಾಮಿಯವರು ಸ್ವಲ್ಪ ಭಾವುಕ ಜೀವಿಯಾಗಿರುವುದರಿಂದ ಬಹಳಷ್ಟು ಕಡೆ ವೈಯಕ್ತಿಕ ಹೇಳಿಕೆಗಳು ಧಾಳಿಮಾಡುತ್ತವೆ. ಅಲ್ಲಲ್ಲಿ ನಮ್ಮ ಆತ್ಮೀಯ ಓದಿಗೆ ಅಡ್ಡಗಾಲು ಹಾಕಿದಂತೆ. ಒಟ್ಟಿನಲ್ಲಿ ಉತ್ತಮ ಕೃತಿ.

ಹುಲಿಮಾಡಿಸಿದ ಮದುವೆ

ಲೇ: ಬಳುಮನೆ ರಾಮದಾಸ್

ಮಲೆನಾಡು ಪ್ರಕಾಶನ ನಂ. 401, 37ನೇ 'ಬಿ' ಅಡ್ಡರಸ್ತೆ, 11ನೆಯ ಮುಖ್ಯರಸ್ತೆ,

4ನೇ 'ಟಿ' ಬ್ಲಾಕ್ ಜಯನಗರ, ಬೆಂಗಳೂರು - 41. ಬೆಲೆ : 80-00 ರೂ.

ಇದು ಎರಡನೆಯ ಮುದ್ರಣ 91ರಲ್ಲಿ ಮೊದಲನೆಯ ಮುದ್ರಣವನ್ನು ಕಂಡಿತ್ತು, ಇಲ್ಲಿಯ

ಬಹುಪಾಲು ಲೇಖನಗಳು ಶೂದ್ರದಲ್ಲಿ ಪ್ರತಿ ತಿಂಗಳು ಪ್ರಕಟಗೊಂಡಿದ್ದುವು. ರಾಮದಾಸ್‌ರವರು ಮಲೆನಾಡನ್ನು ಜೀವಂತವಾಗಿ ಬರವಣಿಗೆಯಲ್ಲಿ ಹಿಡಿದಿಡಬಲ್ಲವರು. ಕುವೆಂಪುರವರ 'ಮಲೆನಾಡಿನ ಚಿತ್ರಗಳು' ಕೃತಿಯ ನಂತರ ಹೊರಬಂದಿರುವ ಅರ್ಥಪೂರ್ಣ ಕೃತಿ.

ಒಂಟಿಧ್ವನಿ (ಲೇಖನಗಳು)

ಡಾ. ನಿ. ಮುರಾರಿ ಬಲ್ಲಾಳ

ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ (ತಾ), ಶಿವಮೊಗ್ಗ ಜಿಲ್ಲೆ. ಬೆಲೆ: 120-00 ರೂ.

ಡಾ. ಮುರಾರಿ ಬಲ್ಲಾಳರವರು ಇತ್ತೀಚಿನ ವರ್ಷಗಳಲ್ಲಿ ನಮ್ಮ ಪರಿಸರದ ನಿಜವಾದ ಕಾಳಜಿಗಳನ್ನು ಕುರಿತು ಚಿಂತಿಸುತ್ತಿರುವಂಥವರು. ಅದು ಸಾಹಿತ್ಯ ಸಂಸ್ಕೃತಿ, ಪರಿಸರ, ಅರ್ಥಶಾಸ್ತ್ರ ಹಾಗೂ ಮತ್ಯಾವುದೇ ವಿಷಯವಿರಬಹುದು, ಅದಕ್ಕೆಲ್ಲ ಸ್ಪಂದಿಸುವಂಥವರು. ಹಾಗೆ ಸ್ಪಂದಿಸಿ ಬರೆದ ಲೇಖನಗಳಿವು. ಇವುಗಳಲ್ಲಿ ಬಹುಪಾಲು ಪ್ರಕಟವಾಗಿ ಚರ್ಚೆಯಾಗಿರುವಂಥವು. ಈಗ ಎಲ್ಲವೂ ಒಂದೆಡೆ ಪುಸ್ತಕರೂಪದಲ್ಲಿ ದೊರಕುತ್ತಿರುವುದರಿಂದ ಓದಿ ಚರ್ಚಿಸಬಹುದಾದ ಕೃತಿ.

ಅಟಲ್ ಬಿಹಾರಿ ವಾಜಪೇಯಿ ಕವಿತೆಗಳು

ಕನ್ನಡಕ್ಕೆ : ಡಾ. ಸರಜೂ ಕಾಟ್ಕರ್

ವಿಮೋಚನಾ ಪ್ರಕಾಶನ, ಅಥಣಿ - 591 304. ಬೆಲೆ : 100-00ರೂ.

ನಮ್ಮ ಬಹುಪಾಲು ಓದುಗರಿಗೆ ವಾಜಪೇಯಿ ಗೊತ್ತಿರುವುದು ಹಿರಿಯ ರಾಜಕಾರಣಿ ಎಂದು. ಆದರೆ ಅವರು ಗಂಭೀರ ಕಾವ್ಯಾಭ್ಯಾಸಿ ಎಂಬುದು ಗೊತ್ತಿಲ್ಲ. ಅಂಥ ಕಾವ್ಯಾಭ್ಯಾಸದಿಂದ ಹುಟ್ಟಿದ ಕೆಲವು ಉತ್ತಮ ಕವನಗಳು ಇಲ್ಲಿವೆ. ವಾಜಪೇಯಿಯವರು ಕೆಲವು ವರ್ಷಗಳ ಹಿಂದೆ ಅನಾರೋಗ್ಯದಿಂದ ನರಳುತ್ತ ವಿದೇಶದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಬರೆದ ಕವನ 'ಸಾವಿನ ಜೊತೆಗೆ ಹೋರಾಟ' ಒಂದು ಅರ್ಥಪೂರ್ಣ ಕವಿತೆಯಾಗಿದೆ.

"ಜೀವಿಸುವುದೊಂದು ಪರಂಪರೆ
ಅದೇನೂ ಇವತ್ತಿನ
ಅಥವಾ ನಿನ್ನೆಯ ಕಲೆಯಲ್ಲ"
....
ಸಾವೇ!
....
ನನ್ನ ಮೇಲೆ ಪ್ರಹಾರ ಮಾಡು
ನನ್ನ ಪ್ರತಿಯೊಂದು ಸಂಜೆ ಸಂಗೀತದ
ಮಾಧುರ್ಯದಿಂದ ಕೂಡಿದ್ದು
ರಾತ್ರಿ ಕೊಳಲಿನ ಮಂಜುಳ ನಿನಾದದ್ದು"

ಒಟ್ಟು ಈ ಸಂಕಲನದಲ್ಲಿ ನಲವತ್ತೆರಡು ಕವನಗಳಿವೆ.

ಮುಟ್ಟಿಸಿಕೊಂಡವರು

ಡಾ. ಬಿ.ಎಂ. ತಿಪ್ಪೇಸ್ವಾಮಿ - ನೆನಪು

ಸಂ : ಬಿ.ವಿ. ವೀರಭದ್ರಪ್ಪ ಮತ್ತು ಬಿ.ಟಿ. ಜಾಹ್ನವಿ

ಬುಟ್ಟಿ ಪ್ರಕಾಶನ, 858, ಬಾಪೂಜಿ ವಿದ್ಯಾನಗರ, ದಾವಣಗೆರೆ- 577 005

ಬೆಲೆ : 65-00 ರೂ.

ಡಾ. ತಿಪ್ಪೇಸ್ವಾಮಿಯವರು ವೈದ್ಯರಾಗಿ ಮತ್ತು ರಾಜಕಾರಣಿಯಾಗಿ ಕೆಲವು ನೈತಿಕ ಮೌಲ್ಯಗಳನ್ನು ಸಮಾಜಕ್ಕೆ ಬಿಟ್ಟು ಹೋದವರು. ಅವರ ನೆನಪಿಗೆ ತಂದಿರುವ ಈ ಕೃತಿಯಲ್ಲಿ ಅವರನ್ನು ಕುರಿತಂತೆ ಮತ್ತು ದಲಿತ ಸಂಸ್ಕೃತಿ ಹಾಗೂ ಹೋರಾಟವನ್ನು ಕುರಿತಂತೆ ಕೆಲವು ಒಳನೋಟಗಳ ಲೇಖನಗಳಿವೆ. ಈ ಕೃತಿಯ ಶೀರ್ಷಿಕೆಯಾದ 'ಮುಟ್ಟಸಿಕೊಂಡವರು' ಲಂಕೇಶ್‌ರವರ ಕಥೆಯಿಂದ ಪ್ರೇರಣೆ ಪಡೆದದ್ದು. ಹಿಂದೆ ಪತ್ರಿಕೆಯಲ್ಲಿ ಪ್ರಕಟವಾದ ಆ ಕಥೆಯನ್ನು ಮತ್ತೆ ಪ್ರಕಟಿಸಿದ್ದಾರೆ. ತಿಪ್ಪೇಸ್ವಾಮಿಯವರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದ ಉತ್ತಮಕಥೆ. ಈ ಕೃತಿಯನ್ನು ಬಿ.ವಿ. ವೀರಭದ್ರಪ್ಪನವರು ಮತ್ತು ಜಾಹ್ನವಿಯವರು ತಮ್ಮ ಕಲ್ಪನೆಯ ಪ್ರಕಾರ ಚೆನ್ನಾಗಿ ತಂದಿದ್ದಾರೆ.

ಉಡುಪಿಯ ಸಾಂಸ್ಕೃತಿಕ ಕಥನ (ಲೇಖನಗಳು ಮತ್ತು ಟಿಪ್ಪಣಿಗಳು)

ಸಂ: ನಿ. ಮುರಾರಿ ಬಲ್ಲಾಳ

ಪ್ರಕಾಶಕರು : ರಥಬೀದಿ ಗೆಳೆಯರು, ಉಡುಪಿ,

ಬೆಲೆ : 75-00 ರೂ.

ಉಡುಪಿಯನ್ನು ಕೇಂದ್ರವಾಗಿಟ್ಟುಕೊಂಡು ತಂದಿರುವ ಕೃತಿ. ಇಲ್ಲಿ ಡಿ.ಆರ್. ನಾಗರಾಜ್, ಕೆ.ವಿ. ಸುಬ್ಬಣ್ಣ, ಆಶೀಶ್ ನಂದಿ, ಯು.ಆರ್. ಅನಂತಮೂರ್ತಿ, ಕು.ಶಿ. ಹರಿದಾಸ ಭಟ್ಟ ಮತ್ತು ವಿಜಯನಾಥ ಶೆಣೈಯವರ ಟಿಪ್ಪಣಿಗಳಿವೆ. ವಿಜಯನಾಥ ಶೆಣೈಯವರ ಸಂವಾದದ ಟಿಪ್ಪಣಿಗಳು ತುಂಬ ಅರ್ಥಪೂರ್ಣವಾದಂತಹವು. ಹಾಗೆಯೇ ಮುರಾರಿಯವರ ಲೇಖನ. ನಮ್ಮಲ್ಲಿರಬೇಕಾದ ಪುಸ್ತಕ.

ಗಜಲ್

ಕವಿ: ಡಾ. ಸರಜೂ ಕಾಟ್ಕರ್

ವೈಶಾಖ ಪ್ರಕಾಶನ, ನಂ. 395, 1ನೇ ಮಹಡಿ, 9ನೇ ಮೈನ್, ಹನುಮಂತನಗರ, ಬೆಂಗಳೂರು - 560 019

ಬೆಲೆ : 35-00 ರೂ.

ಈ ಸಂಕಲನದಲ್ಲಿ ಐವತ್ತೊಂದು ಗಜಲ್‌ಗಳಿವೆ. ಎಲ್ಲಕ್ಕೂ ಅವು ಬಯಸುವ ರೊಮ್ಯಾಂಟಿಕ್ ರೇಖಾ ಚಿತ್ರಗಳಿವೆ. ಒಂದಷ್ಟನ್ನು ಖುಷಿಯಿಂದ ಓದಿಕೊಳ್ಳಬಹುದು, ಹಾಡಿಕೊಳ್ಳಬಹುದು.

ಬೆಳ್ದಿಂಗ್ಳಪ್ಪನ ಪೂಜೆ

ಅಗ್ರಹಾರ ಕೃಷ್ಣಮೂರ್ತಿ

ಪ್ರಕಾಶಕರು : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - 18

ಬೆಲೆ : 18-00 ರೂ.

ಇದು 1976ರಲ್ಲಿ ಮೊದಲ ಮುದ್ರಣವಾಗಿ ಪ್ರಕಟವಾಗಿತ್ತು. ಆಗ ಸಾಹಿತ್ಯಾಸಕ್ತರ ಮತ್ತು ಜಾನಪದ ತಜ್ಞರ ನಡುವೆ ಸಾಕಷ್ಟು ಚರ್ಚೆಯಾದ ಪುಸ್ತಕ. ನಮ್ಮ ನಡುವಿನ ಕೆಲವು 'ಆರಾಧನೆಗಳು' ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತುಂಬ ಮಹತ್ವಪೂರ್ಣವಾದಂತಹವುಗಳು. ಅಗ್ರಹಾರ ಕೃಷ್ಣಮೂರ್ತಿ ಸಾಹಿತ್ಯ ಮತ್ತು ಜನಪದದ ಗಂಭೀರ ವಿದ್ಯಾರ್ಥಿಯಾಗಿರುವುದರಿಂದ ಅದರ ಮಹತ್ವವನ್ನು ಇಲ್ಲಿ ನಮಗೆ ಕೊಟ್ಟಿದ್ದಾರೆ. ಈಗ ಪುಸ್ತಕ ಪ್ರಾಧಿಕಾರದವರು ಇದನ್ನು ಮತ್ತೆ ಪ್ರಕಟಿಸಿರುವುದು ಸಂತೋಷದ ವಿಷಯ.

ಹಾತಿಂ ತಾಯ್‌ನ ಸಾಹಸಗಳು (ಮೂಲ : ಪರ್ಶಿಯನ್)

ಭಾಷಾಂತರ : ಎಂ.ಎಸ್. ಪುಟ್ಟಣ್ಣ ಸಂಗ್ರಹ ಸಂಪಾದನೆ : ಡಾ. ಎಚ್.ಎಸ್. ಸುಜಾತ.

ಸುಹಾಸ ಪ್ರಕಟಣೆಗಳು, ನಂ. 53, 4ನೇ ಮುಖ್ಯರಸ್ತೆ, ಮಾರುತಿ ದೇವಸ್ಥಾನದ ಬೀದಿ, ಕುವೆಂಪುನಗರ, ಮೈಸೂರು - 570 009

ಬೆಲೆ : 325-00 ರೂ.

ಎಂ. ಎಸ್. ಪುಟ್ಟಣ್ಣನವರ ವೈವಿಧ್ಯಪೂರ್ಣ ಕಾರ್ಯಕ್ಷೇತ್ರದಲ್ಲಿ 'ಹಾತಿಂ ತಾಯ್‌ನ ಸಾಹಸಗಳು' ಕೂಡ ಒಂದು ಅಪೂರ್ವ ಕೊಡುಗೆ. ಇದು ಪರ್ಶಿಯಾದಿಂದ ಇಂಗ್ಲೀಷಿಗೆ 1830ರಲ್ಲಿ ಭಾಷಾಂತರವಾಯಿತು. ನಂತರ 1920ರಲ್ಲಿ ಪುಟ್ಟಣ್ಣನವರು ಕನ್ನಡಕ್ಕೆ ತಂದರು. ಈಗ ಸಾಹಿತ್ಯಕವಾಗಿ ಮತ್ತು ಸಾಂಸ್ಕೃತಿಕವಾಗಿ ಉತ್ತಮ ಅಭಿರುಚಿಯುಳ್ಳ ಲೇಖಕಿ ಡಾ. ಸುಜಾತರವರು. ಈ ಸಂಗ್ರಹ ಸಂಪಾದನೆಯನ್ನು ನಮಗೆ ಕೊಟ್ಟಿದ್ದಾರೆ. 350 ಪುಟಗಳ ಈ ಕೃತಿಯನ್ನು ಎಲ್ಲ ವರ್ಗದ ಜನ ಓದಿ ಆನಂದ ಪಡುವಂಥದ್ದು. ಕಥೆಗಳ ಮೂಲಕ ನಮ್ಮ ಮಾನಸಿಕ ಪರಿಧಿಯ ಸುತ್ತ ಕೋಟೆಯೊಂದನ್ನು ನಿರ್ಮಾಣ ಮಾಡುವ ಕೃತಿ ಇದಾಗಿದೆ.

ಉಳಿದದ್ದು ಆಕಾಶ (ಕವನ ಸಂಕಲನ)

ಡಾ. ಎಸ್. ವಿ. ಪ್ರಭಾವತಿ,

ಶುಭದ ಪ್ರಕಾಶನ, ಜರಗನಹಳ್ಳಿ, ಬೆಂಗಳೂರು - 560 078, ಬೆಲೆ : 25-00 ರೂ.

ಇದು ಪ್ರಭಾವತಿಯವರ ಎರಡನೆಯ ಕವನ ಸಂಕಲನ. ಈಗಾಗಲೇ ತಮ್ಮ ಗದ್ಯದ ಮೂಲಕ ಸುದ್ದಿ ಮಾಡಿರುವ ಇವರು ಈ ಸಂಕಲನದಲ್ಲಿ ನಾವು ಮೆಚ್ಚಬಹುದಾದ 'ಹೀಗೊಂದು ಸ್ವಗತ, ಕೃತ್ತಿಕಾ, ಉಳಿದದ್ದು ಆಕಾಶ, ಕಾಯುತ್ತಿರು, ಅಸ್ತಿತ್ವ ಮುಂತಾದ ಕೆಲವು ಕವನಗಳಿವೆ ಎನ್ನುವುದು ಸಂತೋಷದ ಸಂಗತಿ. ಡಾ. ಹೆಚ್.ಎಸ್. ರಾಘವೇಂದ್ರರಾವ್‌ರವರ ಉತ್ತಮ ಮುನ್ನುಡಿ ಇದೆ.

ಹಣತೆ

ನನ್ನೆದೆಯ ದುಡಿಯೊಳಗೆ
ನಿನ್ನದೇ ದನಿಯು
ನನ್ನೆದೆಯ ಕಣ್ಣೊಳಗೆ
ನಿನ್ನದೇ ನೆಲೆಯು ॥ ೧ ॥

ಹರಿವ ನೀರಿನ ತೆರದಿ
ಚಿತ್ತ ಚಂಚಲವಿಹುದು
ರಿಂಗಣದ ಸುಳಿಯು
ನನ್ನೆದೆಯ ಅಂಗಳದಿ ॥ ೨ ॥

ರೆಪ್ಪೆ ಮುಚ್ಚಿದರಷ್ಟೆ
ರೆಪ್ಪೆ ಬಿಟ್ಟರೂ ಅಷ್ಟೆ
ನಿನ್ನದೇ ಕೃತಿ ಕೃತಿಯು
ನನ್ನೆದೆಯ ಗುಡಿಯೊಳಗೆ ॥ ೩ ॥

ನಾನು ನಾನೇ ಅಲ್ಲ
ನೀನು ನೀನೇ ಅಲ್ಲ
ಒಂದರೊಳೆ ಬೆಸೆಬೆಸೆದು
ಹಣತೆಯಾಯಿತು ಬದುಕು ॥ ೪ ॥

–ಎ. ರಘುರಾಂ

ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಯೋಜನೆ (ಆರ್.ಸಿ.ಹೆಚ್)

ಆರೋಗ್ಯವಂತ ಮಹಿಳೆ ಸದೃಢ ಸಮಾಜ ಮತ್ತು ರಾಷ್ಟ್ರನಿರ್ಮಾಣದ ರೂವಾರಿ. ಶಿಶು ದೇಶದ ಭವಿಷ್ಯ. ಅದರ ಉಳಿವು ಮತ್ತು ಸುರಕ್ಷಿತ ತಾಯ್ತನ, ಲೈಂಗಿಕ ಸೋಂಕುಗಳ ನಿಯಂತ್ರಣ ಹಾಗೂ ನಿವಾರಣಾ ಕಾರ್ಯಕ್ರಮಗಳನ್ನು ಸೇರಿಸಿ ಸಮಗ್ರ ಮಹಿಳಾ ಆರೋಗ್ಯ ರಕ್ಷಣೆ ಮಾಡುವುದೇ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಯೋಜನೆಯ ಮೂಲೋದ್ದೇಶ.

ಜನಸಂಖ್ಯೆ ಮತ್ತು ಅದರ ಆರೋಗ್ಯಪೂರ್ಣ ಬೆಳವಣಿಗೆ ಹಿನ್ನಲೆಯೊಂದಿಗೆ ಈ ಕಾರ್ಯಕ್ರಮಕ್ಕೆ ಚಾಲನೆ. ಸಮುದಾಯದ ಅಗತ್ಯಗಳನ್ನು ಆಧರಿಸಿ ಅದರ ಸಹಭಾಗಿತ್ವಕ್ಕೆ ಈ ಕಾರ್ಯಕ್ರಮದಲ್ಲಿ ಒತ್ತು ನೀಡಲಾಗಿದೆ. ಅದರಲ್ಲೂ ಪುರುಷರ ಸಕ್ರಿಯ ಹಾಗೂ ಜವಬ್ದಾರಿಯುತ ಸಹಭಾಗಿತ್ವ ಅತ್ಯಾವಶ್ಯಕ.

ಯೋಜನೆಯ ರೂಪುರೇಷೆಗಳು:-

- ❒ ಆಕಸ್ಮಿಕ ಅಥವಾ ಅನಪೇಕ್ಷಿತ ಗರ್ಭಧಾರಣೆ ತಡೆಗಟ್ಟುವಿಕೆ ಹಾಗೂ ನಿರ್ವಹಣೆ
- ❒ ತಾಯ್ತನದ ಆರೈಕೆ: * ಹೆರಿಗೆ ಪೂರ್ವ ಆರೈಕೆ, ಹೆರಿಗೆ ಸಂದರ್ಭದ ಸೇವೆ
  * ಬಾಣಂತಿ ಆರೈಕೆ
- ❒ ಶಿಶುವಿನ ಉಳಿವು * ಜನನಾಂಗದ್ವಾರದ ಹಾಗೂ ಲೈಂಗಿಕ ಸೋಂಕುಗಳ ನಿಯಂತ್ರಣ ಹಾಗೂ ನಿರ್ವಹಣೆ
- ❒ ಹದಿಹರೆಯದವರ ಆರೋಗ್ಯ ರಕ್ಷಣೆ.

ಈ ಹಲವಾರು ಕಾರ್ಯಕ್ರಮಗಳನ್ನು ಸೇರಿಸಿ ಸಮಗ್ರ ಕಾರ್ಯಕ್ರಮವಾಗಿ ಒಟ್ಟುಗೂಡಿಸಿರುವುದು "ಸಂತಾನೋತ್ಪತ್ತಿ ಮತ್ತು ಮಗುವಿನ ಆರೋಗ್ಯ ಯೋಜನೆ"ಯ ವೈಶಿಷ್ಟ್ಯತೆ.

ಈ ಅಪೂರ್ವ ಯೋಜನೆಗಾಗಿ ವಿಶ್ವಬ್ಯಾಂಕ್‌ನಿಂದ ರೂ. 190 ಕೋಟಿ ನೆರವು. ಈ ಬೃಹತ್ ಕಾರ್ಯಕ್ರಮದಲ್ಲಿ ಸ್ವಯಂಸೇವಾ ಸಂಸ್ಥೆಗಳ ಸಕ್ರಿಯ ಪಾತ್ರಕ್ಕೆ ಹೆಚ್ಚಿನ ಮನ್ನಣೆಯಿದೆ.

ಈ ಕಾರ್ಯಕ್ರಮದ ಯಶಸ್ಸಿಗೆ ಅಗತ್ಯವಿರುವ ಸಕಲ ಸಲಕರಣೆಗಳು, ಔಷಧಗಳು, ದೂರದರ್ಶನ ಹಾಗೂ ಆಕಾಶವಾಣಿ ಪ್ರಸಾರ, ಸೌಲಭ್ಯಗಳನ್ನು ಒದಗಿಸಲಾಗುವುದು. ಅಲ್ಲದೆ ಜನಪ್ರತಿನಿಧಿಗಳ ಕಾರ್ಯಾಗಾರಗಳಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಜೊತೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಉಪಕೇಂದ್ರಗಳ ಕಟ್ಟಡ ನಿರ್ಮಾಣ ಹಾಗೂ ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.

ಇದರ ಯಶಸ್ಸು ರಾಜ್ಯದ ಇಡೀ ಮಹಿಳಾ ಸಮುದಾಯ ಅಭಿವೃದ್ಧಿಗೆ ಅಡಿಪಾಯ ಹಾಗೂ ಭವಿಷ್ಯದ ಆರೋಗ್ಯವಂತ ಪೀಳಿಗೆಗೆ ಆಶಾಕಿರಣ.

ಕರ್ನಾಟಕ ವಾರ್ತೆ

ನಮ್ಮ ಹೆಮ್ಮೆಯ ನಾಡು - ಕರ್ನಾಟಕ

ಎರಡು ಸಾವಿರ ವರ್ಷಗಳ ಭವ್ಯ ಇತಿಹಾಸ, ಪರಂಪರೆಯ ಪುಣ್ಯ ಭೂಮಿ ಕರ್ನಾಟಕ. ಇದು ವಿವಿಧ ಮತ ಧರ್ಮಗಳ ಸಂಗಮ : ಉದಾತ್ತ ದಾರ್ಶನಿಕರ ಮತ್ತು ಮಹಾನ್ ಸಾಹಿತಿಗಳ ನೆಲೆವೀಡು. ರಾಷ್ಟ್ರದ ಸರ್ವತೋಮುಖ ಪ್ರಗತಿಗೆ ಕರ್ನಾಟಕದ ಕೊಡುಗೆ ಗಣನೀಯ. ರಾಷ್ಟ್ರನಿರ್ಮಾಣದ ಮಹತ್ಕಾರ್ಯವನ್ನು ಮುಂದುವರಿಸುವುದು ನಮ್ಮೆಲ್ಲರ ಪರಮ ಕರ್ತವ್ಯ. ದಾರ್ಶನಿಕರು, ಸಮಾಜ ಸುಧಾರಕರು, ಸಾಹಿತಿಗಳು, ವಿಜ್ಞಾನಿಗಳು, ಕರ್ನಾಟಕವನ್ನು ಶ್ರೀಮಂತಗೊಳಿಸಿದ್ದಾರೆ.

"ಮಾನವ ಜಾತಿ ತಾನೊಂದೆ ವಲಂ" —ಪಂಪ

"ಸರ್ವಜ್ಞನೆಂಬುವನು ಗರ್ವದಿಂದಾವನೆ? ಸರ್ವರೊಳಗೊಂದೊಂದು ನುಡಿಗಲಿತು ವಿದ್ಯದ ಪರ್ವತವೇ ಆದ ಸರ್ವಜ್ಞ"

-ಸರ್ವಜ್ಞ

"ಒಂದೇ ಕರ್ನಾಟಕ ಒಂದೇ, ಇಂದೆ, ಹಿಂದೆ, ಮುಂದೆ ಒಂದೇ ಕರ್ನಾಟಕ ಒಂದೇ"

—ದ. ರಾ. ಬೇಂದ್ರೆ

"ಎಲ್ಲರೂ ದೇಶಾಭಿಮಾನದಿಂದ ಸೇವಾ ಪ್ರೇಮದಿಂದ ಕರ್ನಾಟಕ ಸಂಸ್ಕೃತಿ ಭಾಷೆಗಳ ಸದಭಿಮಾನದಿಂದ, ಪ್ರೇರಿತರಾದರೆ ಅವರು ಹೆಚ್ಚು ಹೆಚ್ಚು ಸುಖಿಗಳಾಗುವರು"

—ಸರ್. ಎಂ. ವಿಶ್ವೇಶ್ವರಯ್ಯ

"ಬರಿಯ ಚದರ ಮೈಲಿಗಳಲ್ತು ಕರ್ನಾಟಕದ ದೇಶ ವಿಸ್ತೀರ್ಣಂ ನೆನೆ, ನೆನೆ ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ ಮರೆಯದಿರು ಚದರ ಸಂವತ್ಸರದ ಶತಮಾನಗಳ ಕಾಲ ವಿಸ್ತೀರ್ಣಮಂ ಪ್ರಾಣಮಯ ಭಾವನೆಯ ವಿಸ್ತೀರ್ಣಮಂ ಚಿದಾಕಾಸ ವಿಜ್ಞಾನ ವಿಸ್ತೀರ್ಣಮಂ"

—ಕುವೆಂಪು

"ಈಸಬೇಕು ಇದ್ದು ಜೈಸಬೇಕು"

—ಪುರಂದರ ದಾಸರು

"ಆತ್ಮ ಯಾವ ಕುಲ ಜೀವ ಯಾವ ಕುಲ ತತ್ವೇಂದ್ರಿಯಗಳ ಕುಲ ಯಾವುದಯ್ಯಾ"

—ಕನಕದಾಸರು

"ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ"

—ಬಸವಣ್ಣ

"ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ ಬಾಯೊಲ್ಯಾಕಿದ್ರೂನೆ ಮೂಗ್ನಲ್ ಕನ್ನಡ ಪದಗಳನ್ನಾಡ್ತಿನಿ ನನ್ನ ಮನನ್ನ ನೀಕಾಣೆ"

—ಜಿ. ಪಿ. ರಾಜರತ್ನಂ

"ಕರ್ನಾಟಕತ್ವವೆಂದರೆ ಕೇವಲ ದೇಶಾಭಿಮಾನವಲ್ಲ ಕೇವಲ ಭಾಷಾಭಿಮಾನವಲ್ಲ, ಇವೆಲ್ಲವುಗಳನ್ನು ಮೀರಿದ ಇವೆಲ್ಲವುಗಳನ್ನು ಒಳಗೊಂಡ ಪರಿಶುದ್ಧ ಭಾವನೆ"

—ಆಲೂರ ವೆಂಕಟರಾಯರು

"ಹಸಿರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ"

—ಚೆನ್ನವೀರ ಕಣವಿ

ಕರ್ನಾಟಕ ವಾರ್ತೆ

L / NP / KRNU / 72, No. M (2) PRB 211 / 73-74

"ವಿದಾಯದ ಬಗ್ಗೆ ನೋವನ್ನನುಭವಿಸುವುದರ ಜೊತೆಗೇ ವಿದಾಯದ ಅನಿವಾರ್ಯತೆಯನ್ನು ಅರಿಯದ ಮನುಷ್ಯ ನಾಶವಾಗುತ್ತಾನೆ. ಇದನ್ನು ನನ್ನ ವೈಯಕ್ತಿಕ ಅನುಭವದೊಂದಿಗೆ ವಿವರಿಸುತ್ತೇನೆ. ನಾನು ಅವತ್ತು ಶಾಲೆಗೆ ಹೋಗಲಿಲ್ಲ; ಓದುವುದು ತುಂಬಾ ಇತ್ತು; ಅಲ್ಲದೆ ಬೀಳ್ಕೊಡಿಗೆಯ ದುಃಖವನ್ನು ಸಹಿಸುವುದು ನನ್ನಿಂದ ಸಾಧ್ಯವಿರಲಿಲ್ಲ. ನಾನು ಸಭೆಗೆ ಹೋಗದಿದ್ದರೂ ನನ್ನ ಅಧ್ಯಾಪಕರು ನನಗೆ ಬಂದಿದ್ದ 'ಅತ್ಯುತ್ತಮ ವಿದ್ಯಾರ್ಥಿ' ಪ್ರಶಸ್ತಿಯನ್ನು ನನ್ನ ರೂಮಿಗೆ ಕಳಿಸಿದರು. ಆ ಸಂದರ್ಭದ ದುಃಖ, ಪ್ರಕ್ಷುಬ್ಧತೆ, ಪರೀಕ್ಷೆಯ ಒತ್ತಡ, ನಾನು ಅಗಲುತ್ತಿದ್ದ ಮುಖಗಳು ಎಲ್ಲವೂ ಸೇರಿಕೊಂಡು ಎದೆ ಭಾರವಾಗಿತ್ತು. ಶಾಲೆಯ ಕಟ್ಟಡ ಕೂಡ ಇಲ್ಲದಿದ್ದ ಹೈಸ್ಕೂಲಿನಲ್ಲಿ ಮೂರುವರ್ಷ ಕಳೆದಿದ್ದೆವು; ಮೂರು ವರ್ಷದ ಕತೆ, ವಿಜ್ಞಾನ, ಕಾವ್ಯ ವೈಮನಸ್ಯವೆಲ್ಲ ನನ್ನಲ್ಲಿತ್ತು."

(ಇದನ್ನು ಲಂಕೇಶ್‌ರವರ ಟೀಕೆ ಟಿಪ್ಪಣಿಯ 'ವಿದಾಯ' ಲೇಖನದಿಂದ ತೆಗೆದುಕೊಂಡಿದೆ.)

'ಶೂದ್ರ' ಇರುವುದು ಸಮಕಾಲೀನ ಬದುಕಿನ ಸಂವಾದಕ್ಕಾಗಿ

ನಾವು ನೀವು ಮಾತಾಡುವ ಮತ್ತು ಚರ್ಚಿಸುವ ಧ್ವನಿಗಾಗಿ 'ಶೂದ್ರ'ವನ್ನು ಬಳಸಿಕೊಳ್ಳಿ. ಹಾಗೆಯೇ ನಮ್ಮ ನಿಮ್ಮ ನಡುವಿನ ಗುಮಾನಿಗಳು ತಿಳಿಯಾಗಲು ಉಪಯೋಗಿಸಿ. ಸಾಧ್ಯವಾದರೆ ಚಂದಾದಾರರಾಗಿ, ನಿಮ್ಮ ಗೆಳೆಯ ಗೆಳತಿಯರನ್ನು ಚಂದಾದಾರರಾಗಲು ತಿಳಿಸಿ.

ವಾರ್ಷಿಕ ಚಂದಾ	:	200 - 00 ರೂ
ಎರಡು ವರ್ಷಕ್ಕೆ	:	400-00 ರೂ
ನಾಲ್ಕು ವರ್ಷಕ್ಕೆ	:	750-00 ರೂ
ಹತ್ತು ವರ್ಷಕ್ಕೆ	:	1500-00 ರೂ
ಆಜೀವ ಚಂದಾ	:	2500-00 ರೂ

ಪ್ರಕಾಶಕರು ಮತ್ತು ಸಂಪಾದಕರು: ಎಂ.ಶ್ರೀನಿವಾಸ್ (ಶೂದ್ರ ಶ್ರೀನಿವಾಸ್)
ವಿಳಾಸ: ನಂ.573, 'ಕೋಟೆಮನೆ' 17ನೇ ಕ್ರಾಸ್,
ಇಸ್ರೋ ಬಡಾವಣೆ, ಬೆಂಗಳೂರು - 560 078
ದೂರವಾಣಿ: 6663337